# ಓಂ ಶ್ರೀ ರಾಘವೇಂದ್ರಾಯ ನಮಃ





# ಕನ್ನಡ ವ್ಯಾಕರಣ


–: ರಚನೆ :–

## ಪ್ರದೀಪ್.ಆರ್.ಕನ್ನಡ ಭಾಷಾ ಶಿಕ್ಷಕರು

ಕರ್ಮಣ್ಯೇ ವಾಧಿಕಾರಸ್ತೇ ಮಾ ಫಲೇಷು ಕದಾಚನ ।

ಮಾ ಕರ್ಮಫಲಹೇತುರ್ಭೂರ್ಮಾ ತೇ ಸಂಗೋಸ್ತ್ವ ಕರ್ಮಣಿ – ಭಗವದ್ಗೀತೆ

ರಾಷ್ಟ್ರ ಕವಿಗಳು


ಎಂ.ಗೋವಿಂದ ಪೈ


ಕುವೆಂಪು


ಜಿ.ಎಸ್.ಶಿವರುದ್ರಪ್ಪ



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

# ಪರಿವಿಡಿ


| ಕ್ರ.ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 01 | ವರ್ಣಮಾಲೆ | 03–06 |
| 02 | ಕನ್ನಡ ವರ್ಣಮಾಲೆ ಅಕ್ಷರಗಳು ಹುಟ್ಟುವ ಸ್ಥಾನಗಳು | 07 |
| 03 | ಗುಣಿತಾಕ್ಷರಗಳು | 08 |
| 04 | ಸಂಧಿಗಳು | 09–21 |
| 05 | ವಿಭಕ್ತಿ ಪ್ರತ್ಯಯಗಳು, ವಚನಗಳು | 22 |
| 06 | ಸಮಾಸಗಳು | 23–32 |
| 07 | ಲಿಂಗಗಳು | 33 |
| 08 | ತತ್ಸಮ–ತದ್ಭವಗಳು | 34–35 |
| 09 | ದ್ವಿರುಕ್ತಿಗಳು,ಜೋಡುನುಡಿಗಳು,ನುಡಿಗಟ್ಟುಗಳು | 36 |
| 10 | ಅನುಕರಣಾವ್ಯಯ,ಸಮಾನಾರ್ಥಕ,ನಾನಾರ್ಥಕ,ವಿರುದ್ಧ ಪದಗಳು | 37 |
| 11 | ನಾಮಪದಗಳು | 38–41 |
| 12 | ತದ್ಧಿತಾಂತಗಳು | 42–43 |
| 13 | ಕ್ರಿಯಾಪದಗಳು | 44–45 |
| 14 | ಕರ್ತರಿ,ಕರ್ಮಣಿ ಪ್ರಯೋಗಗಳು,ಕ್ರಿಯಾಪದದ ಮೂಲರೂಪ | 46–47 |
| 15 | ಕೃದಂತಗಳು | 48–50 |
| 16 | ವಾಕ್ಯಗಳು | 51–52 |
| 17 | ಲೇಖನ ಚಿಹ್ನೆಗಳು | 53–55 |
| 18 | ಗಾದೆಗಳು | 56–59 |
| 19 | ಅವ್ಯಯಗಳು & ಗ್ರಾಂಥಿಕ ರೂಪಗಳು | 60–61 |
| 20 | ಛಂದಸ್ಸು | 62–77 |
| 21 | ಅಲಂಕಾರ | 78–90 |
| 22 | ಪತ್ರಲೇಖನ | 91–95 |
| 23 | ವ್ಯಾಕರಣಕ್ಕೆ ಸಂಬಂಧಿಸಿದ ಬಹು ಆಯ್ಕೆ ಪ್ರಶ್ನೆಗಳು | 96–105 |




ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

# ವರ್ಣಮಾಲೆ

ವರ್ಣ ಎಂದರೆ "ಅಕ್ಷರ" ಮಾಲೆ ಎಂದರೆ "ಗುಂಪು"ಅಥವಾ 'ಸಮೂಹ' ಎಂದರ್ಥ.

ಅಕ್ಷರಗಳ ಗುಂಪಿಗೆ 'ವರ್ಣಮಾಲೆ' ಅಥವಾ 'ಅಕ್ಷರಮಾಲೆ' ಎಂದು ಕರೆಯುತ್ತಾರೆ.

ಕನ್ನಡ ವರ್ಣಮಾಲೆಯಲ್ಲಿ 49 ಅಕ್ಷರಗಳಿವೆ.

| | | | | | | | | | | | | | | |
|---|---|---|---|---|---|---|---|---|---|---|---|---|---|---|
| ಅ | ಆ | ಇ | ಈ | ಉ | ಊ | ಋ | ಎ | ಏ | ಐ | ಒ | ಓ | ಔ | ಅಂ | ಅಃ |
| ಕ | ಖ | ಗ | ಘ | ಙ | | | | | | | | | | |
| ಚ | ಛ | ಜ | ಝ | ಞ | | | | | | | | | | |
| ಟ | ಠ | ಡ | ಢ | ಣ | | | | | | | | | | |
| ತ | ಥ | ದ | ಧ | ನ | | | | | | | | | | |
| ಪ | ಫ | ಬ | ಭ | ಮ | | | | | | | | | | |
| ಯ | ರ | ಲ | ವ | ಶ | ಷ | ಸ | ಹ | ಳ | | | | | | |

# ವರ್ಣಮಾಲೆಯ ವಿಧಗಳು

ಕನ್ನಡ ವರ್ಣಮಾಲೆಯಲ್ಲಿ 3 ವಿಧಗಳು ಅವುಗಳೆಂದರೆ

1.ಸ್ವರಗಳು Vowels 2.ಯೋಗವಾಹಗಳು 3.ವ್ಯಂಜನಗಳು Consonants

**1.ಸ್ವರಗಳು:–** ಬೇರೆ ಅಕ್ಷರಗಳ ಸಹಾಯವಿಲ್ಲದೆ ಸ್ವತಂತ್ರವಾಗಿ ಉಚ್ಚಾರಣೆ ಮಾಡುವ ಅಕ್ಷರಗಳಿಗೆ "ಸ್ವರಗಳು" ಎಂದು ಕರೆಯುತ್ತಾರೆ. ಒಟ್ಟು ಸ್ವರಾಕ್ಷರಗಳ ಸಂಖ್ಯೆ:13. ಅವುಗಳೆಂದರೆ

| | | | | | | | | | | | | |
|---|---|---|---|---|---|---|---|---|---|---|---|---|
| ಅ | ಆ | ಇ | ಈ | ಉ | ಊ | ಋ | ಎ | ಏ | ಐ | ಒ | ಓ | ಔ |

### ಸ್ವರಗಳ ವಿಧಗಳು

ಸ್ವರಗಳಲ್ಲಿ 3 ವಿಧ ಅವುಗಳೆಂದರೆ

1.ಹ್ರಸ್ವ ಸ್ವರ 2.ದೀರ್ಘ ಸ್ವರ 3.ಪ್ಲುತ ಸ್ವರ



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

**1.ಹ್ರಸ್ವ ಸ್ವರ:**–ಒಂದು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳಿಗೆ "ಹ್ರಸ್ವ ಸ್ವರ" ಎಂದು ಕರೆಯುತ್ತಾರೆ.

ಒಟ್ಟು ಹ್ರಸ್ವ ಸ್ವರಗಳ ಸಂಖ್ಯೆ: 06 ಅವುಗಳೆಂದರೆ

| | | | | | |
|---|---|---|---|---|---|
| ಅ | ಇ | ಉ | ಋ | ಎ | ಒ |

**2.ದೀರ್ಘ ಸ್ವರ:**–ಎರಡು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳಿಗೆ "ದೀರ್ಘ ಸ್ವರ" ಎಂದು ಕರೆಯುತ್ತಾರೆ. ಒಟ್ಟು ದೀರ್ಘ ಸ್ವರಗಳ ಸಂಖ್ಯೆ: 07 ಅವುಗಳೆಂದರೆ

| | | | | | | |
|---|---|---|---|---|---|---|
| ಆ | ಈ | ಊ | ಏ | ಐ | ಓ | ಔ |

**ಸಂಧ್ಯಕ್ಷರಗಳು:**–ಐ.ಔ ಅ+ಇ=ಐ ಅ+ಉ=ಔ

**3.ಪ್ಲುತಸ್ವರ:**– ಮೂರು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳಿಗೆ "ಪ್ಲುತ ಸ್ವರ" ಎಂದು ಕರೆಯುತ್ತಾರೆ.

ಪ್ಲುತಸ್ವರಗಳನ್ನು "S" ಸಂಕೇತದಿಂದ ಸೂಚಿಸಲಾಗುತ್ತದೆ. ಉದಾಹರಣೆ: ಅಮ್ಮಾS... ಅಣ್ಣಾS...

**2.ಯೋಗವಾಹಗಳು:**–ಯೋಗ ಎಂದರೆ "ಜೊತೆ" ವಾಹ ಎಂದರೆ "ಚಲಿಸುವುದು" ಅಂದರೆ ಅಕ್ಷರಗಳ ಜೊತೆಯಲ್ಲಿ ಸಾಗುವುದಕ್ಕೆ "ಯೋಗವಾಹ"ಗಳು ಎಂದು ಕರೆಯುತ್ತಾರೆ.

ಯೋಗವಾಹಗಳಲ್ಲಿ 2 ವಿಧ ಅವುಗಳೆಂದರೆ

1.ಅನುಸ್ವರ:–ಂ

2,ವಿಸರ್ಗ:–ಃ

**3.ವ್ಯಂಜನಗಳು:**–ಸ್ವರಗಳ ಸಹಾಯದಿಂದ ಉಚ್ಚರಿಸಲಾಗುವ ಅಕ್ಷರಗಳಿಗೆ "ವ್ಯಂಜನ"ಗಳು ಎಂದು ಕರೆಯುತ್ತಾರೆ. ಉದಾಹರಣೆ: ಕ್+ಅ=ಕ ಕ್+ಆ=ಕಾ ಕ್+ಇ=ಕಿ ಕ್+ಈ=ಕೀ



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು  ವ್ಯಂಜನಾಕ್ಷರಗಳ ಸಂಖ್ಯೆ: 34

| | | | | | | | | |
|---|---|---|---|---|---|---|---|---|
| ಕ | ಖ | ಗ | ಘ | ಙ | | | | |
| ಚ | ಛ | ಜ | ಝ | ಞ | | | | |
| ಟ | ಠ | ಡ | ಢ | ಣ | | | | |
| ತ | ಥ | ದ | ಧ | ನ | | | | |
| ಪ | ಫ | ಬ | ಭ | ಮ | | | | |
| ಯ | ರ | ಲ | ವ | ಶ | ಷ | ಸ | ಹ | ಳ |

# ವ್ಯಂಜನದ ವಿಧಗಳು

**ವ್ಯಂಜನದಲ್ಲಿ 2 ವಿಧ  ಅವುಗಳೆಂದರೆ**

1.ವರ್ಗೀಯ ವ್ಯಂಜನಾಕ್ಷರಗಳು

2.ಅವರ್ಗೀಯ ವ್ಯಂಜನಾಕ್ಷರಗಳು

**1.ವರ್ಗೀಯ ವ್ಯಂಜನಾಕ್ಷರಗಳು:-**ಸ್ವರಗಳ ಸಹಾಯದಿಂದ ಹಾಗೂ ಒಂದು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಎಲ್ಲಾ ಕಾಗುಣಿತಾಕ್ಷರಗಳಿಗೆ "ವರ್ಗೀಯ ವ್ಯಂಜನಾಕ್ಷರಗಳು" ಎಂದು ಕರೆಯುತ್ತಾರೆ.

ಒಟ್ಟು ವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ 25  ಅವುಗಳೆಂದರೆ

| | | | | |
|---|---|---|---|---|
| ಕ | ಖ | ಗ | ಘ | ಙ |
| ಚ | ಛ | ಜ | ಝ | ಞ |
| ಟ | ಠ | ಡ | ಢ | ಣ |
| ತ | ಥ | ದ | ಧ | ನ |
| ಪ | ಫ | ಬ | ಭ | ಮ |



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು  ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

# ವರ್ಗೀಯ ವ್ಯಂಜನದ ವಿಧಗಳು

ವರ್ಗೀಯ ವ್ಯಂಜನದ ವಿಧಗಳಲ್ಲಿ 3 ವಿಧ ಅವುಗಳೆಂದರೆ

1.ಅಲ್ಪ ಪ್ರಾಣಾಕ್ಷರಗಳು 2.ಮಹಾ ಪ್ರಾಣಾಕ್ಷರಗಳು 3.ಅನುನಾಸಿಕಾಕ್ಷರಗಳು

**1.ಅಲ್ಪ ಪ್ರಾಣಾಕ್ಷರಗಳು:**–ಕಡಿಮೆ ಉಸಿರಿನ ಸಹಾಯದಿಂದ ಉಚ್ಚರಿಸುವ ವ್ಯಂಜನಾಕ್ಷರಗಳನ್ನು "ಅಲ್ಪಪ್ರಾಣಾಕ್ಷರ"ಗಳು ಎಂದು ಕರೆಯುತ್ತಾರೆ. ಉದಾಹರಣೆ: ಕ.ಗ.ಚ.ಜ ಟ.ಡ. ತ.ದ ಪ.ಬ.

ಒಟ್ಟು ಅಲ್ಪ ಪ್ರಾಣಾಕ್ಷರಗಳ ಸಂಖ್ಯೆ 10

ವರ್ಗದ 1 ಮತ್ತು 3 ನೇಯ ಅಕ್ಷರಗಳಿಗೆ ಅಲ್ಪಪ್ರಾಣಾಕ್ಷರಗಳು ಎಂದು ಕರೆಯುತ್ತಾರೆ

**2.ಮಹಾ ಪ್ರಾಣಾಕ್ಷರಗಳು**:– ಹೆಚ್ಚು ಉಸಿರಿನ ಸಹಾಯದಿಂದ ಉಚ್ಚರಿಸುವ ವ್ಯಂಜನಾಕ್ಷರಗಳನ್ನು "ಮಹಾಪ್ರಾಣಾಕ್ಷರ"ಗಳು ಎಂದು ಕರೆಯುತ್ತಾರೆ. ಉದಾಹರಣೆ: ಖ,ಘ ಛ.ಝ.ಠ.ಢ.ಥ.ಧ.ಫ.ಭ

ಒಟ್ಟು ಮಹಾಪ್ರಾಣಾಕ್ಷರಗಳು10

ವರ್ಗದ 2 ಮತ್ತು 4 ನೇಯ ಅಕ್ಷರಗಳಿಗೆ "ಮಹಾಪ್ರಾಣಾಕ್ಷರಗಳು ಎಂದು ಕರೆಯುತ್ತಾರೆ

**3.ಅನುನಾಸಿಕಾಕ್ಷರಗಳು**:–ಮೂಗಿನ ಸಹಾಯದಿಂದ ಉಚ್ಚರಿಸುವ ವ್ಯಂಜನಗಳಿಗೆ "ಅನುನಾಸಿಕ್ಷಾರಗಳು"ಎಂದು ಕರೆಯುತ್ತಾರೆ.

ವರ್ಗದ 5ನೇ ಅಕ್ಷರಗಳನ್ನು "ಅನುನಾಸಿಕಾಕ್ಷರ"ಗಳು ಎಂದು ಕರೆಯುತ್ತಾರೆ.

ಉದಾಹರಣೆ ಙ.ಞ.ಣ.ನ.ಮ. ಒಟ್ಟು ಅನುನಾಸಿಕಾಕ್ಷರಗಳ ಸಂಖ್ಯೆ 05

# ಅವರ್ಗೀಯ ವ್ಯಂಜನಾಕ್ಷರಗಳು

ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಅವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ 09 ಅವುಗಳೆಂದರೆ

| | | | | | | | | |
|---|---|---|---|---|---|---|---|---|
| ಯ | ರ | ಲ | ವ | ಶ | ಷ | ಸ | ಹ | ಳ |



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

# ಕನ್ನಡ ವರ್ಣಮಾಲೆಯ ಅಕ್ಷರಗಳು ಹುಟ್ಟುವ ಸ್ಥಾನಗಳು

1.ಅ,ಆ,ಕ,ಖ,ಗ,ಘ,ಙ,ಹ,ಅಃಇವು ಕಂಠ ಭಾಗದಲ್ಲಿ ಹುಟ್ಟುವುದರಿಂದ ಇವುಗಳನ್ನು ಕಂಠ್ಯ ವರ್ಣಗಳು ಎಂದು ಹೆಸರು.

2.ಇ,ಈ,ಚ.ಛ.ಜ.ಝ.ಞ,ಶ,ಇವು ದವಡೆಯ ಸಹಾಯದಿಂದ ಹುಟ್ಟುವುದರಿಂದ ಇವುಗಳನ್ನು''ತಾಲವ್ಯ''ಗಳೆಂದು ಕರೆಯುತ್ತಾರೆ.

3.ಋ, ಟ.ಠ.ಡ.ಢ.ಣ,ರ,ಷ,ಇವು ನಾಲಿಗೆಯ ಮೇಲ್ಭಾಗವಾದ ಮೂರ್ಧಭಾಗದಲ್ಲಿ ಹುಟ್ಟುವುದರಿಂದ ಇವುಗಳನ್ನು''ಮೂರ್ಧನ್ಯ''ಗಳೆಂದು ಕರೆಯುತ್ತಾರೆ.

4.ತ.ಥ.ದ.ಧ.ನ.ಲ,ಸ ಇವು ಹಲ್ಲುಗಳ ಸಹಾಯದಿಂದ ಹುಟ್ಟುವುದರಿಂದ ಇವುಗಳನ್ನು''ದಂತ್ಯ'' ಗಳೆಂದು ಕರೆಯುತ್ತಾರೆ.

5.ಉ,ಊ, ಪ.ಫ.ಬ.ಭ.ಮ ಇವು ತುಟಿಗಳ ಸಹಾಯದಿಂದ ಹುಟ್ಟುವುದರಿಂದ ಇವುಗಳನ್ನುಓಷ್ಠ್ಯ'' ಗಳೆಂದು ಕರೆಯುತ್ತಾರೆ.

## ಒತ್ತಕ್ಷರಗಳು

| | | | | | | | | |
|---|---|---|---|---|---|---|---|---|
| ಕ್ಕ | ಖ್ಖ | ಗ್ಗ | ಘ್ಘ | ಙ್ಙ | | | | |
| ಚ್ಚ | ಛ್ಛ | ಜ್ಜ | ಝ್ಝ | ಞ್ಞ | | | | |
| ಟ್ಟ | ಠ್ಠ | ಡ್ಡ | ಢ್ಢ | ಣ್ಣ | | | | |
| ತ್ತ | ಥ್ಥ | ದ್ದ | ಧ್ಧ | ನ್ನ | | | | |
| ಪ್ಪ | ಫ್ಫ | ಬ್ಬ | ಭ್ಭ | ಮ್ಮ | | | | |
| ಯ್ಯ | ರ್ರ | ಲ್ಲ | ವ್ವ | ಶ್ಶ | ಷ್ಷ | ಸ್ಸ | ಹ್ಹ | ಳ್ಳ |



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

# ಗುಣಿತಾಕ್ಷರಗಳು

ವ್ಯಂಜನಗಳಿಗೆ ಸ್ವರಗಳು ಸೇರಿ ಆಗುವ ಅಕ್ಷರಗಳಿಗೆ "ಗುಣಿತಾಕ್ಷರಗಳು" ಎಂದು ಕರೆಯುತ್ತಾರೆ.

ಉದಾಹರಣೆ: ಕ್+ಅ=ಕ ಕ್+ಆ=ಕಾ ಕ್+ಇ=ಕಿ ಕ್+ಈ=ಕೀ

# ಸಂಯುಕ್ತಾಕ್ಷರಗಳು/ಒತ್ತಕ್ಷರಗಳು Conjuct consonants

ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳಿಗೆ ಸ್ವರ ಸೇರಿ ಆಗುವ ಅಕ್ಷರವೇ "ಸಂಯುಕ್ತಾಕ್ಷರಗಳು" ಎಂದು ಕರೆಯುತ್ತಾರೆ. ಉದಾಹರಣೆ: ಕನ್ನಡ, ಅಣ್ಣ, ವಸ್ತ್ರ,

# ಸಂಯುಕ್ತಾಕ್ಷರಗಳ ವಿಧಗಳು

ಸಂಯುಕ್ತಾಕ್ಷರಗಳ ವಿಧಗಳಲ್ಲಿ 2 ವಿಧ ಅವುಗಳೆಂದರೆ

**1.ಸಜಾತಿ ಸಂಯುಕ್ತಾಕ್ಷರಗಳು:** ಒಂದು ವ್ಯಂಜನಾಕ್ಷರಕ್ಕೆ ಅದೇ ವ್ಯಂಜನಾಕ್ಷರಗಳು ಸೇರಿ ಆಗುವ ಸಂಯುಕ್ತಾಕ್ಷರವೇ "ಸಜಾತಿ ಸಂಯುಕ್ತಾಕ್ಷರಗಳು" ಎಂದು ಕರೆಯುತ್ತಾರೆ. ಉದಾಹರಣೆ: ಅಪ್ಪ, ಅಮ್ಮ, ಅಕ್ಕ, ಕಜ್ಜ,

**2.ವಿಜಾತಿ ಸಂಯುಕ್ತಾಕ್ಷರಗಳು :** ಒಂದು ವ್ಯಂಜನಾಕ್ಷರಕ್ಕೆ ಬೇರೆಯ ಒಂದು ಅಥವಾ ಅದಕ್ಕಿಂತ ಹೆಚ್ಚು ವ್ಯಂಜನಾಕ್ಷರಗಳು ಸೇರಿ ಆಗುವ ಸಂಯುಕ್ತಾಕ್ಷರವೇ "ವಿಜಾತಿ ಸಂಯುಕ್ತಾಕ್ಷರಗಳು" ಎಂದು ಕರೆಯುತ್ತಾರೆ.

ಉದಾಹರಣೆ :ಉಷ್ಣ, ಅಸ್ತ್ರ, ಅಕ್ಷರ,

# ನಮ್ಮ ರಾಷ್ಟ್ರ ಕವಿ ಪ್ರಶಸ್ತಿ ಪುರಸ್ಕೃತರು

| ಕವಿಗಳ ಹೆಸರು | ವರ್ಷ |
|---|---|
| ಎಂ.ಗೋವಿಂದ ಪೈ | 1949 |
| ಕುವೆಂಪು | 1964 |
| ಜಿ.ಎಸ್.ಶಿವರುದ್ರಪ್ಪ | 2006 |



Use E-Papers, Save Tress
Above Line Hide When Print Out

# ಸಂಧಿಗಳು

**ನಾವು ಮಾತನಾಡುವಾಗ ಕೆಲವು ಪದಗಳನ್ನು ಬಿಡಿ ಬಿಡಿಯಾಗಿ ಹೇಳುವುದಿಲ್ಲ.ಊರು ಅಲ್ಲಿ ಎಂಬ ಪದವನ್ನು ಊರಲ್ಲಿ ಎಂದು ಸೇರಿಸಿಯೇ ಹೇಳುತ್ತೇವೆ.**

**ಸಂಧಿ:ಎರಡು ಅಕ್ಷರಗಳು ಕಾಲ ವಿಳಂಬವಿಲ್ಲದಂತೆ ಒಂದು ಸೇರುವುದನ್ನು ಸಂಧಿ ಎಂದು ಹೆಸರು.**

**ಸಂಧಿಯ ಮೊದಲ ಪದವನ್ನು ಪೂರ್ವಪದ"ವೆಂದು ಕರೆಯುತ್ತಾರೆ.**

**ಸಂಧಿಯ ಎರಡನೆಯ ಪದವನ್ನು "ಉತ್ತರಪದ"ವೆಂದು ಕರೆಯುತ್ತಾರೆ.**

**ಪೂರ್ವಪದ+ಉತ್ತರಪದ=ಸಂಧಿಪದ**

**ಎಳೆ + ಕರು =ಎಳೆಗರು**

**ಸಂಧಿ ಕಾರ್ಯ:–ಸಂಧಿಯಾಗುವಾಗ ಒಂದು ಅಕ್ಷರ ಬಿಟ್ಟು ಹೋಗಬಹುದು ಅಥವಾ ಒಂದು ಅಕ್ಷರ ಬಂದು ಸೇರಬಹುದು ಈ ರೀತಿಯಾದ ಬದಲಾವಣೆಯನ್ನು "ಸಂಧಿ ಕಾರ್ಯ"ವೆಂದು ಕರೆಯುತ್ತಾರೆ.**

**ಸಂಧಿಗಳಲ್ಲಿ ಮುಖ್ಯವಾಗಿ ಎರಡು ವಿಧ ಅವುಗಳೆಂದರೆ**

**1.ಕನ್ನಡ ಸಂಧಿ 2.ಸಂಸ್ಕೃತ ಸಂಧಿ**

**1.ಕನ್ನಡ ಸಂಧಿ:–ಎರಡು ಕನ್ನಡ ಪದಗಳು(ಪೂರ್ವಪದ,ಉತ್ತರಪದ)ಸೇರಿ ಆಗುವ ಸಂಧಿಯೇ "ಕನ್ನಡ ಸಂಧಿ" ಎಂದು ಹೆಸರು.**

**ಉದಾಹರಣೆ: ಎಳೆ + ಕರು =ಎಳೆಗರು**

**ಅವನು + ಊರು=ಅವನೂರು**

**2.ಸಂಸ್ಕೃತ ಸಂಧಿ:–** ಎರಡು **ಸಂಸ್ಕೃತ** ಪದಗಳು ಸೇರಿ ಆಗುವ ಸಂಧಿಯೇ "**ಸಂಸ್ಕೃತ ಸಂಧಿ**" ಎಂದು ಹೆಸರು.

ಉದಾಹರಣೆ: ವಿದ್ಯ+ಅಭ್ಯಾಸ=ವಿದ್ಯಾಭ್ಯಾಸ ಸುರ+ಅಸುರ=ಸುರಾಸುರ

## ಕನ್ನಡ ಸಂಧಿಗಳು

**ಕನ್ನಡ ಸಂಧಿಗಳಲ್ಲಿ ಮೂರು ವಿಧ ಅವುಗಳೆಂದರೆ**

**1.ಲೋಪ ಸಂಧಿ**

**2.ಆಗಮ ಸಂಧಿ 3.ಆದೇಶ ಸಂಧಿ**



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

**ಇವುಗಳಲ್ಲಿ ಲೋಪ ಸಂಧಿ ಮತ್ತು ಆಗಮ ಸಂಧಿಯನ್ನು ಸ್ವರಸಂಧಿಗಳೆಂದು ಆದೇಶ ಸಂಧಿಯನ್ನು "ವ್ಯಂಜನಸಂಧಿಗೆ" ಉದಾಹರಣೆಯಾಗಿದೆ.**

**1.ಲೋಪ ಸಂಧಿ: ಸ್ವರದ ಮುಂದೆ ಸ್ವರ ಬಂದು ಸಂಧಿಯಾಗುವಾಗ ಪೂರ್ವಪದದ ಕೊನೆಯಲ್ಲಿರುವ ಸ್ವರ ಬಿಟ್ಟು ಹೋದರೆ ಇದನ್ನು "ಲೋಪ ಸಂಧಿ" ಎಂದು ಹೆಸರು.**[ಸಾಮಾನ್ಯವಾಗಿ ಅ,ಇ,ಉ,ಎ, ಸ್ವರಗಳಿಗೆ ಲೋಪ ಬರುತ್ತದೆ]

ಉದಾಹರಣೆ: ಊರು+ಊರು=ಊರ**ೂ**ರು     ಚಿಕ್ಕ+ಎಲೆ =ಚಿಕ್ಕ**ೆ**ಲೆ

ಉ+ಊ=ಊ     ಅ+ಎ=ಎ

ಬಲ್ಲೆನು+ಎಂದು=ಬಲ್ಲೆ**ನೆಂ**ದು     ಓಡಿ+ಓಡಿ =ಓ**ಡೋ**ಡಿ

ಉ+ಎ=ಎ     ಇ+ಓ=ಓ

ಸಂಪನ್ನರು+ಆದ=ಸಂಪನ್ನ**ರಾ**ದ     ವರ್ಷಕ್ಕೆ+ಒಮ್ಮೆ=ವರ್ಷ**ಕ್ಕೊ**ಮ್ಮೆ

ಉ+ಆ=ಅ     ಎ+ಒ=ಒ

**2.ಆಗಮ ಸಂಧಿ: ಸಂಧಿ ಕಾರ್ಯ ನಡೆದಾಗ ಹೊಸದಾಗಿ ಒಂದಕ್ಷರ ಬಂದು ಸೇರುವುದಕ್ಕೆ "ಆಗಮ ಸಂಧಿ" ಎಂದು ಕರೆಯುತ್ತಾರೆ.**

ಉದಾಹರಣೆ: ಕೈ+ಅನ್ನು=ಕೈ**ಯ**ನ್ನು     ಜಯ+ಆಗಲಿ=ಜಯ**ವಾ**ಗಲಿ     ಮರ+ಅನ್ನು=ಮರ**ವ**ನ್ನು

**3.ಆದೇಶ ಸಂಧಿ: ಉತ್ತರ ಪದದ ಮೊದಲಲ್ಲಿ ಬರುವ ಕ, ಚ, ಟ, ತ, ಪ, ಗಳಿಗೆ ಕ್ರಮವಾಗಿ ಅದೇ ವರ್ಗದ ಮೂರನೇ ಅಕ್ಷರಗಳಾದ ಗ, ಜ, ಡ, ದ ,ಬ, ಗಳು ಆದೇಶವಾಗಿ ಬರುವುದಕ್ಕೆ "ಆದೇಶ ಸಂಧಿ" ಎಂದು ಕರೆಯುತ್ತಾರೆ.**

ಉದಾಹರಣೆ: ಮಳೆ+ಕಾಲ=ಮಳೆ**ಗಾ**ಲ

ಮೈ+ತೋರು= ಮೈ**ದೋ**ರು

ಬೆನ್+ಪತ್ತು=ಬೆಂಬತ್ತು     ಕಣ್+ಪನಿ=ಕಂಬನಿ

# ಸಂಸ್ಕೃತ ಸಂಧಿಗಳು

ಪೂರ್ವೋತ್ತರ ಪದಗಳು ಸಂಸ್ಕೃತ ಪದಗಳಾಗಿದ್ದು,ನಡೆಯುವ ಸಂಧಿಗಳಿಗೆ ಸಂಸ್ಕೃತ ಸಂಧಿಗಳು ಎಂದು ಕರೆಯುತ್ತಾರೆ

**ಸಂಸ್ಕೃತ ಸಂಧಿಗಳಲ್ಲಿ 2 ವಿಧ ಅವುಗಳೆಂದರೆ**



Use E-Papers, Save Tress
Above Line Hide When Print Out

**1. ಸಂಸ್ಕೃತ ಸ್ವರಸಂಧಿ** **2 ಸಂಸ್ಕೃತ ವ್ಯಂಜನಸಂಧಿ**

## ಸಂಸ್ಕೃತ ಸ್ವರಸಂಧಿ

**ಸಂಸ್ಕೃತ ಸ್ವರಸಂಧಿಗಳಲ್ಲಿ 4 ವಿಧ ಅವುಗಳೆಂದರೆ**

**1.ಸವರ್ಣದೀರ್ಘ ಸಂಧಿ**

**2.ಗುಣ ಸಂಧಿ**

**3.ವೃದ್ಧಿ ಸಂಧಿ**

**4.ಯಣ್ ಸಂಧಿ**

**1.ಸವರ್ಣದೀರ್ಘ ಸಂಧಿ:ಸವರ್ಣ ಸ್ವರಾಕ್ಷರಗಳು ಒಂದರ ಮುಂದೆ ಒಂದು ಬಂದಾಗ ಅವೆರಡರ ಸ್ಥಾನದಲ್ಲಿ ಅದೇ ಜಾತಿಯ ದೀರ್ಘ ಸ್ವರವು ಆದೇಶವಾದರೆ ಅದನ್ನು ''ಸವರ್ಣದೀರ್ಘಸಂಧಿ'' ಎಂದು ಹೆಸರು.**

ನಿಯಮ: ಅ ಆ +ಅ ಆ=ಆ

ಇ ಈ+ಇ ಈ=ಈ

ಉ ಊ+ಉ ಊ=ಊ

ಉದಾಹರಣೆ: ದೇವ+ಆಲಯ=ದೇವಾಲಯ

ಅ+ಆ=ಆ

ರವಿ+ಇಂದ್ರ=ರವೀಂದ್ರ

ಇ+ಇ=ಈ

ಗುರು+ಉಪದೇಶ=ಗುರೂಪದೇಶ

ಉ+ಉ=ಊ

**2.ಗುಣ ಸಂಧಿ:ಅ ಆ ಕಾರಗಳಿಗೆ ಇ ಈ ಕಾರಗಳು ಸೇರಿ 'ಏ' ಕಾರವೂ ಉ ಊ ಕಾರಗಳು ಸೇರಿ 'ಓ' ಕಾರವೂ ಋ ಕಾರಕ್ಕೆ 'ಅರ್' ಕಾರವೂ ಆದೇಶವಾಗಿ ಬರುವುದೇ "ಗುಣಸಂಧಿ" ಎಂದು ಹೆಸರು.**

ನಿಯಮ: ಅ ಆ+ ಇ ಈ =ಏ

ಅ ಆ+ ಉ ಊ=ಓ

ಅ ಆ+ ಋ =ಅರ್



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

ಉದಾಹರಣೆ: ದೇವ+ಈಶ=ದೇವೇಶ ಅರುಣ+ಉದಯ=ಅರುಣೋದಯ

ಅ +ಈ =ಏ ಅ+ಉ=ಓ

ಮಹ+ಋಷಿ=ಮಹರ್ಷಿ

ಅ+ಋ=ಅರ್

**3.ವೃದ್ಧಿ ಸಂಧಿ: ಅ ಆ ಕಾರಗಳ ಮುಂದೆ ಏ ಐ ಕಾರಗಳು ಬಂದರೆ 'ಐ' ಕಾರವೂ ಅ ಆ ಕಾರಗಳ ಮುಂದೆ ಓ ಔ ಕಾರಗಳು ಬಂದರೆ 'ಔ' ಕಾರವೂ ಬಂದರೆ ಅದನ್ನು "ವೃದ್ಧಿ ಸಂಧಿ" ಎಂದು ಹೆಸರು.**

ನಿಯಮ: ಅ ಆ+ ಏ ಐ=ಐ

ಅ ಆ+ಓ ಔ=ಔ

ಉದಾಹರಣೆ: ಏಕ+ಏಕ=ಏಕೈಕ

ಅ+ಏ=ಐ

ನಿತ್ಯ+ಔಷಧ=ನಿತ್ಯೌಷಧ

ಅ+ಔ=ಔ

**4.ಯಣ್ ಸಂಧಿ: ಇ ಈ ಉ ಊ ಋ ಕಾರಗಳ ಮುಂದೆ ಬೇರೆ ಬೇರೆ ಸ್ವರಗಳು ಪರವಾದರೆ ಇ ಈ ಕಾರಗಳ ಸ್ಥಳದಲ್ಲಿ 'ಯ 'ಕಾರವೂ ಉ ಊ ಕಾರಗಳ ಸ್ಥಳದಲ್ಲಿ' ವ' ಕಾರವೂ ಋ ಕಾರದ ಸ್ಥಳದಲ್ಲಿ 'ರ' ಕಾರವು ಆದೇಶವಾಗಿ ಬರುವುದೇ "ಯಣ್‌ಸಂಧಿ" ಎಂದು ಹೆಸರು**

ಉದಾಹರಣೆ: ಅತಿ+ಅಂತ=ಅತ್ಯಂತ

ಇ+ಅ=ಯ

ಅಣು+ಅಸ್ತ್ರ=ಅಣ್ವಸ್ತ್ರ

ಉ+ಅ=ವ

ಪಿತೃ+ಆಜ್ಞೆ =ಪಿತ್ರಾಜ್ಞೆ

ಋ+ಆ=ರ

ನಿಯಮ: ಇ ಈ+ ಅ ಆ=ಯ

ಉ ಊ+ಅ ಆ=ವ

ಋ +ಅ ಆ=ರ



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

## ಸಂಸ್ಕೃತ ವ್ಯಂಜನ ಸಂಧಿ

ವ್ಯಂಜನಕ್ಕೆ ವ್ಯಂಜನ,ಸ್ವರಕ್ಕೆ ವ್ಯಂಜನ ಬಂದಾಗ ವ್ಯಂಜನ ಸಂಧಿಯಾಗುತ್ತದೆ

ಸಂಸ್ಕೃತ ವ್ಯಂಜನಸಂಧಿಗಳಲ್ಲಿ 3 ವಿಧ ಅವುಗಳೆಂದರೆ:

1.ಜಶ್ತ್ವ ಸಂಧಿ 2.ಅನುನಾಸಿಕ ಸಂಧಿ 3.ಶ್ಚುತ್ವ ಸಂಧಿ

**1.ಜಶ್ತ್ವ ಸಂಧಿ:**–ಪೂರ್ವಪದದ ಕೊನೆಯಲ್ಲಿ ವರ್ಗಗಳ ಪ್ರಥಮ ವರ್ಣಗಳಾದ ಕ, ಚ, ಟ, ತ, ಪ, ವ್ಯಂಜನಗಳಿಗೆ ಉತ್ತರಪದದ ಮೊದಲಲ್ಲಿ ಯಾವ ಅಕ್ಷರ ಬಂದರೂ ಕ್ರಮವಾಗಿ ಅದೇ ವರ್ಗದ ತೃತೀಯಾ ವರ್ಣಗಳಾದ ಗ, ಜ, ಡ, ದ, ಬ, ವ್ಯಂಜನಗಳು ಆದೇಶವಾಗುವ ಸಂಧಿಯೇ ಜಶ್ತ್ವ ಸಂಧಿ ಎಂದು ಹೆಸರು.

ಉದಾಹರಣೆ: ವಾಗ್ದೇವಿ=ವಾಕ್+ದೇವಿ

ಅಜಂತ=ಅಚ್+ಅಂತ

ಷಡಾನನ=ಷಟ್+ಆನನ

ದಿಗಂತ=ದಿಕ್+ಅಂತ

**2.ಅನುನಾಸಿಕ ಸಂಧಿ:**–ಕ, ಚ, ಟ, ತ, ಪ, ವರ್ಗಗಳಿಗೆ ಯಾವ ಅನುನಾಸಿಕಕಾಕ್ಷರವು ಪರವಾದರೂ ಅವುಗಳಿಗೆ ಕ್ರಮವಾಗಿ ಅದೇ ವರ್ಗದ ಅನುನಾಸಿಕ ಅಕ್ಷರಗಳು ಆದೇಶವಾಗಿ ಬರುವುದೇ "ಅನುನಾಸಿಕ ಸಂಧಿ" ಎಂದು ಹೆಸರು.

ಉದಾಹರಣೆ: ಸನ್ಮಾನ =ಸತ್+ಮಾನ ಉನ್ಮಾದ=ಉತ್+ಮಾದ

ಷಣ್ಮುಖ=ಷಟ್+ಮುಖ ತನ್ಮಯ=ತತ್+ಮಯ

ವಾಙ್ಮಯ= ವಾಕ್+ಮಯ

**3.ಶ್ಚುತ್ವ ಸಂಧಿ :** ಪೂರ್ವ ಪದದ ಕೊನೆಯಲ್ಲಿ ಸ ಕಾರವಾಗಲಿ ,ತ ಕಾರವಾಗಲಿ ಇದ್ದು ಉತ್ತರ ಪದದ ಮೊದಲಲ್ಲಿ ಕ್ರಮವಾಗಿ 'ಶ' ಕಾರವಾಗಲಿ ಚ ಕಾರವಾಗಲಿ ಬಂದರೆ ಶ ಕಾರ ಚ ಕಾರಗಳು ಆದೇಶವಾಗಿ ಬರುತ್ತವೆ.ಅದನ್ನು "ಶ್ಚುತ್ವ ಸಂಧಿ" ಎಂದು ಹೆಸರು.

ಉದಾಹರಣೆ: ಪಯಶ್ಶಯನ = ಪಯಶ್+ಶಯನ

ಶರಚ್ಚಂದ್ರ = ಶರತ್+ಚಂದ್ರ

ಜಗಜ್ಜ್ಯೋತಿ = ಜಗತ್+ಜ್ಯೋತಿ

ಬೃಹಚ್ಛತ್ರ = ಬೃಹತ್+ಛತ್ರ



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

# ಹೆಚ್ಚಿನ ಅಭ್ಯಾಸಕ್ಕಾಗಿ ಸಂಧಿಗಳು

## ಲೋಪಸಂಧಿ

| ಕ್ರಮ ಸಂಖ್ಯೆ | ಸಂಧಿ ಪದ | ಪೂರ್ವಪದ | ಉತ್ತರಪದ |
|---|---|---|---|
| 1 | ಓಡೋಡಿ | ಓಡಿ | ಓಡಿ |
| 2 | ಮಣ್ಣಾಗುತ | ಮಣ್ಣು | ಆಗುತ |
| 3 | ಹತ್ತಡಿಯ | ಹತ್ತು | ಅಡಿಯ |
| 4 | ಹೆಜ್ಜೆಜ್ಜು | ಹೆಜ್ಜು | ಹೆಜ್ಜು |
| 5 | ಚಿಕ್ಕೆಲೆ | ಚಿಕ್ಕ | ಎಲೆ |
| 6 | ನಿನ್ನೊಲವು | ನಿನ್ನ | ಒಲವು |
| 7 | ಮುತ್ತೈದೆ | ಮುತ್ತು | ಐದೆ |
| 8 | ತವರೂರು | ತವರು | ಊರು |
| 9 | ಒಡಲೊಡಲ | ಒಡಲ | ಒಡಲ |
| 10 | ಗೊತ್ತಿಲ್ಲ | ಗೊತ್ತು | ಇಲ್ಲ |
| 11 | ಕರುಳೆಂಬ | ಕರುಳು | ಎಂಬ |
| 12 | ನೂರೊಂದು | ನೂರು | ಒಂದು |
| 13 | ಮಿಗಿಲಾಗಿ | ಮಿಗಿಲು | ಆಗಿ |
| 14 | ಮುಚ್ಚಿಟ್ಟು | ಮುಚ್ಚು | ಇಟ್ಟು |
| 15 | ತಾಸಾಗಿದೆ | ತಾಸು | ಆಗಿದೆ |
| 16 | ಊರಿಂದ | ಊರು | ಇಂದ |
| 17 | ಬಾನಿನೆಡೆ | ಬಾನಿನ | ಎಡೆ |
| 18 | ನಿನ್ನರಸ | ನಿನ್ನ | ಅರಸ |
| 19 | ವರ್ಷಕ್ಕೊಮ್ಮೆ | ವರ್ಷಕ್ಕೆ | ಒಮ್ಮೆ |
| 20 | ಕಾಸಾಡದ | ಕಾಸು | ಆಡದ |
| 21 | ಕಣ್ಣರ್ಥ | ಕಣ್ಣು | ಅರ್ಥ |
| 22 | ನಿನ್ನಾಣ್ಮ | ನಿನ್ನ | ಅಣ್ಮ |





Use E-Papers, Save Tress
Above Line Hide When Print Out

| ಕ್ರಮ ಸಂಖ್ಯೆ | ಸಂಧಿ ಪದ | ಪೂರ್ವಪದ | ಉತ್ತರಪದ |
|---|---|---|---|
| 23 | ಇಂದಳುತ | ಇಂದು | ಅಳುತ |
| 24 | ಕಾಣಲಾಗದು | ಕಾಣಲು | ಆಗದು |
| 25 | ಪಡೆದಿದ್ದೇನೆ | ಪಡೆದು | ಇದ್ದೇನೆ |
| 26 | ತಪ್ಪಲೀಯದು | ತಪ್ಪಲು | ಈಯದೆ |
| 27 | ಹಿಂದೊಮ್ಮೆ | ಹಿಂದೆ | ಒಮ್ಮೆ |
| 28 | ನೂರಾರು | ನೂರು | ಆರು |
| 29 | ನೆಲಕ್ಕುರುಳಿದ | ನೆಲಕ್ಕೆ | ಉರುಳಿದ |
| 30 | ಕೊರಳಿಂಪು | ಕೊರಳು | ಇಂಪು |
| 31 | ಬೇಡಬೇಡರಸುಗಳ | ಬೇಡಬೇಡ | ಅರಸುಗಳ |
| 32 | ತೆರೆದಿಕ್ಕುವ | ತೆರೆದು | ಇಕ್ಕುವ |
| 33 | ಇರುಳಳಿದು | ಇರುಳು | ಅಳಿದು |
| 34 | ಬಲ್ಲೆನೆಂದು | ಬಲ್ಲೆನು | ಎಂದು |
| 35 | ತೆಗೆದುತ್ತರೀಯ | ತೆಗೆದು | ಉತ್ತರೀಯ |
| 36 | ತಕ್ಕನಿತು | ತಕ್ಕ | ಅನಿತು |
| 37 | ಇರುಳಳಿದು | ಇರುಳು | ಅಳಿದು |
| 38 | ನಿನ್ನೊಳಗೆ | ನಿನ್ನ | ಒಳಗೆ |
| 39 | ತಿಂಗಳಿನೂರು | ತಿಂಗಳಿನ | ಊರು |
| 40 | ನಿಮ್ಮಡಿಗಳಲಿ | ನಿಮ್ಮ | ಅಡಿಗಳಲಿ |
| 41 | ಚರಿತಧ್ವರದ | ಚರಿಸುತ | ಅಧ್ವರದ |
| 42 | ಲೇಖನವನೋದಿ | ಲೇಖನವನು | ಓದಿ |
| 43 | ನಿಂತಿರ್ದನು | ನಿಂತು | ಇರ್ದನು |
| 44 | ನಿಮ್ಮರಸ | ನಿಮ್ಮ | ಅರಸ |





Use E-Papers, Save Tress
Above Line Hide When Print Out

## ಆಗಮ ಸಂಧಿ

| ಕ್ರಮ ಸಂಖ್ಯೆ | ಸಂಧಿ ಪದ | ಪೂರ್ವಪದ | ಉತ್ತರಪದ |
|---|---|---|---|
| 1 | ನಿಧಾನವಾಗಿ | ನಿಧಾನ | ಆಗಿ |
| 2 | ಶಿಕ್ಷೆಯಾಯಿತು | ಶಿಕ್ಷೆ | ಆಯಿತು |
| 3 | ಸೆರೆಯಿಂದ | ಸೆರೆ | ಇಂದ |
| 4 | ಮನೆಯೊಳಗೆ | ಮನೆ | ಒಳಗೆ |
| 5 | ವಂಚನೆಯಿಲ್ಲ | ವಂಚನೆ | ಇಲ್ಲ |
| 6 | ಪತಿಯೊಡನೆ | ಪತಿ | ಒಡನೆ |
| 7 | ನಿಮಿಷವಾಗಿದೆ | ನಿಮಿಷ | ಆಗಿದೆ |
| 10 | ನಿಲ್ಮನೆಯನ್ನು | ನಿಲ್ಮನೆ | ಅನ್ನು |
| 11 | ಸಂದೇಹವಿಲ್ಲ | ಸಂದೇಹ | ಇಲ್ಲ |
| 12 | ಕಥನವಿದೆ | ಕಥನ | ಇದೆ |
| 13 | ಚರಿತ್ರೆಯಿದೆ | ಚರಿತ್ರೆ | ಇದೆ |
| 14 | ಹಳ್ಳವೊಂದು | ಹಳ್ಳ | ಒಂದು |
| 15 | ಪೂರ್ತಿಯಾಗು | ಪೂರ್ತಿ | ಆಗು |
| 16 | ವ್ಯಕ್ತಿಯಾಗಿದ್ದರು | ವ್ಯಕ್ತಿ | ಆಗಿದ್ದರು |
| 17 | ಸಂಪ್ರದಾಯವಿಲ್ಲ | ಸಂಪ್ರದಾಯ | ಇಲ್ಲ |
| 18 | ಶುದ್ಧಿಯನ್ನು | ಶುದ್ಧಿ | ಅನ್ನು |
| 19 | ಭೇದವಿಲ್ಲ | ಭೇದ | ಇಲ್ಲ |
| 20 | ಹರಕೆಯನ್ನು | ಹರಕೆ | ಅನ್ನು |
| 21 | ಪತಿಯೊಡನೆ | ಪತಿ | ಒಡನೆ |
| 22 | ಪಾತ್ರವನ್ನು | ಪಾತ್ರ | ಅನ್ನು |
| 23 | ಭೇದವಾಗಿ | ಭೇದ | ಆಗಿ |
| 24 | ಸಾಧನೆಯಲ್ಲಿ | ಸಾದನೆ | ಅಲ್ಲಿ |
| 25 | ವೃದ್ಧಿಯಾಗಿ | ವೃದ್ಧಿ | ಆಗಿ |



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು  ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

| ಕ್ರಮ ಸಂಖ್ಯೆ | ಸಂಧಿ ಪದ | ಪೂರ್ವಪದ | ಉತ್ತರಪದ |
|---|---|---|---|
| 26 | ಮುದುಕಿಯನ್ನು | ಮುದುಕಿ | ಅನ್ನು |
| 27 | ಭೇದವಿಲ್ಲ | ಭೇದ | ಇಲ್ಲ |
| 28 | ಮರವನ್ನು | ಮರ | ಅನ್ನು |
| 29 | ದಿನವೆಲ್ಲ | ದಿನ | ಎಲ್ಲ |

## ಆದೇಶಸಂಧಿ

| ಕ್ರಮ ಸಂಖ್ಯೆ | ಸಂಧಿ ಪದ | ಪೂರ್ವಪದ | ಉತ್ತರಪದ |
|---|---|---|---|
| 01 | ಕಂಗಾವಲು | ಕಣ್ | ಕಾವಲು |
| 02 | ಹಸುಗೂಸು | ಹಸು | ಕೂಸು |
| 03 | ಬರಗಾಲ | ಬರ | ಕಾಲ |
| 04 | ಬೂಟುಗಾಲು | ಬೂಟು | ಕಾಲು |
| 05 | ಉಳಿಗಾಲ | ಉಳಿ | ಕಾಲ |
| 06 | ಮನದುಂಬಿ | ಮನ | ತುಂಬಿ |
| 07 | ಬೆಂಬತ್ತು | ಬೆನ್ | ಪತ್ತು |
| 08 | ಮಳೆಗಾಲ | ಮಳೆ | ಕಾಲ |
| 09 | ಕಡೆಗೋಲು | ಕಡೆ | ಕೋಲು |
| 10 | ಆಕಾಶಬುಟ್ಟಿ | ಆಕಾಶ | ಪುಟ್ಟಿ |
| 11 | ವೀರಗಚ್ಚೆ | ವೀರ | ಕಚ್ಚೆ |
| 12 | ಚಳಿಗಾಲ | ಚಳಿ | ಕಾಲ |
| 13 | ಬೆಮರ್ವನಿ | ಬೆಮರ್ | ಪನಿ |
| 14 | ಕೈವಿಡಿದು | ಕೈ | ಪಿಡಿದು |
| 15 | ಕಳ್ಗುಡಿ | ಕಳ್ | ಕುಡಿ |
| 16 | ಹೊಸಗನ್ನಡ | ಹೊಸ | ಕನ್ನಡ |



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

| ಕ್ರಮ ಸಂಖ್ಯೆ | ಸಂಧಿ ಪದ | ಪೂರ್ವಪದ | ಉತ್ತರಪದ |
|---|---|---|---|
| 17 | ತುದಿಗಾಲು | ತುದಿ | ಕಾಲು |
| 18 | ಹೊಸಗಾಲ | ಹೊಸ | ಕಾಲ |
| 19 | ಧೃತಿಗೆಟ್ಟು | ಧೃತಿ | ಕೆಟ್ಟು |
| 21 | ಪೋಗಲ್ವೇಳ್ಕುಂ | ಪೋಗಲ್ | ಪೇಳ್ಕುಂ |

## ಸವರ್ಣಧೀರ್ಘ ಸಂಧಿ

| ಕ್ರಮ ಸಂಖ್ಯೆ | ಸಂಧಿ ಪದ | ಪೂರ್ವಪದ | ಉತ್ತರಪದ |
|---|---|---|---|
| 1 | ಶೋಕಾಚರಣೆ | ಶೋಕ | ಆಚರಣೆ |
| 2 | ನಿಜಾಂಶ | ನಿಜ | ಅಂಶ |
| 3 | ಉಪಹಾರ | ಉಪ | ಆಹಾರ |
| 4 | ಪರಮಾಶ್ಚರ್ಯ | ಪರಮ | ಆಶ್ಚರ್ಯ |
| 5 | ಪರಮಾತ್ಮ | ಪರಮ | ಆತ್ಮ |
| 6 | ದಶಾವತಾರ | ದಶ | ಅವತಾರ |
| 7 | ಗ್ರಂಥಾಲಯ | ಗ್ರಂಥ | ಆಲಯ |
| 8 | ಪಾತ್ರಾಭಿನಯ | ಪಾತ್ರ | ಅಭಿನಯ |
| 9 | ಶಬ್ದಾಲಂಕಾರ | ಶಬ್ದ | ಅಲಂಕಾರ |
| 10 | ಮೃಗಾಲಯ | ಮೃಗ | ಆಲಯ |
| 11 | ಭಸ್ಮಾಸುರ | ಭಸ್ಮ | ಅಸುರ |
| 12 | ಅದರಾತಿಥ್ಯ | ಅದರ | ಆತಿಥ್ಯ |
| 13 | ಸತ್ಯಾಗ್ರಹ | ಸತ್ಯ | ಆಗ್ರಹ |
| 14 | ಕ್ರೀಡಾಂಗಣ | ಕ್ರೀಡಾ | ಅಂಗಣ |
| 15 | ಶಿವಾಚಾರ | ಶಿವ | ಆಚಾರ |
| 16 | ಭಾವಾಭಿವ್ಯಕ್ತಿ | ಭಾವ | ಅಭಿವ್ಯಕ್ತಿ |



Use E-Papers, Save Tress
Above Line Hide When Print Out

| ಕ್ರಮ ಸಂಖ್ಯೆ | ಸಂಧಿ ಪದ | ಪೂರ್ವಪದ | ಉತ್ತರಪದ |
|---|---|---|---|
| 17 | ಚಂದ್ರಾರ್ಕ | ಚಂದ್ರ | ಅರ್ಕ |
| 18 | ಜಿನಾಲಯ | ಜಿನ | ಆಲಯ |
| 19 | ಚರಣಾಂಬುಜ | ಚರಣ | ಅಂಬುಜ |
| 20 | ಸಕಳಾಚಾರ್ಯ | ಸಕಳ | ಆಚಾರ್ಯ |
| 21 | ಚಕ್ರಾಧಿಪತಿ | ಚಕ್ರ | ಅಧಿಪತಿ |
| 22 | ಪರಿಶೀಲನಾಲಯ | ಪರಿಶೀಲನ | ಆಲಯ |
| 23 | ವೀಕ್ಷಣಾಲಯ | ವೀಕ್ಷಣ | ಆಲಯ |
| 24 | ಒಳಾಂಗಣ | ಒಳ | ಅಂಗಣ |
| 25 | ಜೀವನಾನುಭವ | ಜೀವನ | ಅನುಭವ |
| 26 | ಸಂಗ್ರಹಾಲಯ | ಸಂಗ್ರಹ | ಆಲಯ |
| 27 | ವಲ್ಕಲಾವೃತ | ವಲ್ಕಲ | ಆವೃತ |
| 28 | ದ್ರವ್ಯಾರ್ಥಿ | ದ್ರವ್ಯ | ಅರ್ಥಿ |

ಗುಣಸಂಧಿ

| ಕ್ರಮ ಸಂಖ್ಯೆ | ಸಂಧಿ ಪದ | ಪೂರ್ವಪದ | ಉತ್ತರಪದ |
|---|---|---|---|
| 1 | ಓಹಿಲೇಶ್ವರ | ಓಹಿಲ | ಈಶ್ವರ |
| 2 | ಭುವನೇಶ್ವರಿ | ಭುವನ | ಈಶ್ವರ |
| 3 | ಬ್ರಹ್ಮರ್ಷಿ | ಬ್ರಹ್ಮ | ಋಷಿ |
| 4 | ಹೃದಯೇಶ | ಹೃದಯ | ಈಶ |
| 5 | ಭೈರವೇಶ್ವರ | ಭೈರವ | ಈಶ್ವರ |
| 6 | ಮಹರ್ಷಿ | ಮಹಾ | ಋಷಿ |
| 7 | ಮದೋನ್ಮತ್ತ | ಮದ | ಉನ್ಮತ್ತ |
| 8 | ಚತುರೋಕ್ತಿ | ಚತುರ | ಉಕ್ತಿ |
| 9 | ಆಹಾರೋಕ್ತಿ | ಆಹಾರ | ಉಕ್ತಿ |



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

| ಕ್ರಮ ಸಂಖ್ಯೆ | ಸಂಧಿ ಪದ | ಪೂರ್ವಪದ | ಉತ್ತರಪದ |
|---|---|---|---|
| 10 | ರಾಜ್ಯೋತ್ಸವ | ರಾಜ್ಯ | ಉತ್ಸವ |
| 11 | ಸೂರ್ಯೋದಯ | ಸೂರ್ಯ | ಉದಯ |
| 12 | ಗುಹೇಶ್ವರ | ಗುಹ | ಈಶ್ವರ |
| 13 | ಏಕೋಪಾಧ್ಯಾಯ | ಏಕ | ಉಪಾಧ್ಯಾಯ |
| 14 | ರಾಜೇಶ್ವರ | ರಾಜ | ಈಶ್ವರ |
| 15 | ವೈದ್ಯೇಶ್ವರ | ವೈದ್ಯ | ಈಶ್ವರ |
| 16 | ಕುಶಲೋಪಚಾರ | ಕುಶಲ | ಉಪಚಾರ |
| 17 | ರಥೋತ್ಸವ | ರಥ | ಉತ್ಸವ |
| 18 | ಮಂಡಳೇಶ್ವರ | ಮಂಡಳ | ಈಶ್ವರ |
| 19 | ಲಕ್ಷೋಪಲಕ್ಷ | ಲಕ್ಷ | ಉಪಲಕ್ಷ |
| 20 | ಕುಲೋತ್ತುಂಗ | ಕುಲ | ಉತ್ತುಂಗ |
| 21 | ಹೊಯ್ಸಳೇಶ್ವರ | ಹೊಯ್ಸಳ | ಈಶ್ವರ |
| 22 | ಬೀರೇಶ್ವರ | ಬೀರ | ಈಶ್ವರ |
| 23 | ಧೀರೋನ್ನತ | ಧೀರ | ಉನ್ನತ |
| 24 | ಚಕ್ರೇಶ್ವರ | ಚಕ್ರ | ಈಶ್ವರ |
| 25 | ಮದೋನ್ಮತ್ತ | ಮದ | ಉನ್ಮತ್ತ |
| 26 | ಅರುಣೋದಯ | ಅರುಣ | ಉದಯ |
| 27 | ಧೀರೋದಾತ್ತ | ಧೀರ | ಉದಾತ್ತ |

ಯಣ್ ಸಂಧಿ

| ಕ್ರಮ ಸಂಖ್ಯೆ | ಸಂಧಿ ಪದ | ಪೂರ್ವಪದ | ಉತ್ತರಪದ |
|---|---|---|---|
| 1 | ಅತ್ಯಂತ | ಅತಿ | ಅಂತ |
| 2 | ಭೂಮ್ಯಂತರಾಳ | ಭೂಮಿ | ಅಂತರಾಳ |
| 3 | ಇತ್ಯಾದಿ | ಇತಿ | ಆದಿ |
| 4 | ಮನ್ವಾದಿ | ಮನು | ಆದಿ |



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

| ಕ್ರಮ ಸಂಖ್ಯೆ | ಸಂಧಿ ಪದ | ಪೂರ್ವಪದ | ಉತ್ತರಪದ |
|---|---|---|---|
| 5 | ಅತ್ಯವಸರ | ಅತಿ | ಅವಸರ |
| 6 | ಅತ್ಯಾದರ | ಅತಿ | ಆದರ |
| 7 | ಮನ್ವಂತರ | ಮನು | ಅಂತರ |

ಜಶ್ತ್ವ ಸಂಧಿ

| ಕ್ರಮ ಸಂಖ್ಯೆ | ಸಂಧಿ ಪದ | ಪೂರ್ವಪದ | ಉತ್ತರಪದ |
|---|---|---|---|
| 1 | ವಾಗ್ಭೂಷಣ | ವಾಕ್ | ಭೂಷಣ |
| 2 | ವಾಗ್ದೇವಿ | ವಾಕ್ | ದೇವಿ |
| 3 | ಸದ್ಗತಿ | ಸತ್ | ಗತಿ |
| 4 | ಚಿದಾನಂದ | ಚಿತ್ | ಆನಂದ |
| 5 | ಭಗವದ್ಗೀತೆ | ಭಗವತ್ | ಗೀತೆ |
| 6 | ದಿಗಂತ | ದಿಕ್ | ಅಂತ |
| 7 | ಅಬ್ಧಿ | ಅಪ್ | ಧಿ |

ಶ್ಚುತ್ವ ಸಂಧಿ

| ಕ್ರಮ ಸಂಖ್ಯೆ | ಸಂಧಿ ಪದ | ಪೂರ್ವಪದ | ಉತ್ತರಪದ |
|---|---|---|---|
| 1 | ತಜ್ಜಾತಿ | ತತ್ | ಜಾತಿ |

**ಪ್ರಕೃತಿ ಭಾವ:**–ಕೆಲವು ಸಲ ಸ್ವರಕ್ಕೆ ಸ್ವರವು ಪರವಾದಾಗ ಯಾವುದೇ ರೀತಿಯ ಸಂಧಿ ಕಾರ್ಯವು ನಡೆಯುವುದಿಲ್ಲ.ಇದನ್ನು ಪ್ರಕೃತಿಭಾವ ಎನ್ನುತ್ತೇವೆ.

ಉದಾ:–ಅಣ್ಣಾ+ಓಡಿ ಬಾ= ಅಣ್ಣಾ ಓಡಿ ಬಾ

ಇಲ್ಲಿ 'ಅಣ್ಣಾ' ಮತ್ತು ಓಡಿ ಬಾ' ಎಂಬ ಎರಡು ಪದಗಳ ನಡುವೆ ಸಂಧಿಕಾರ್ಯ ನಡೆಯದೆ ಆ ಪದಗಳು ಹಾಗೆಯೇ ಉಳಿದುಕೊಂಡಿವೆ.

1.ಕೃಷ್ಣ+ಎಲ್ಲಿದ್ದೀಯಾ= ಕೃಷ್ಣ ಎಲ್ಲಿದ್ದೀಯಾ?     3.ಆ+ಅಂಗಡಿ=ಆ ಅಂಗಡಿ

2.ಅಕ್ಕಾ+ಎಲ್ಲಿರುವೆ=ಅಕ್ಕಾ ಎಲ್ಲಿರುವೆ?     4.ಈ ಮನೆ=ಈ ಮನೆ



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

# ವಿಭಕ್ತಿ ಪ್ರತ್ಯಯಗಳು Case Affixes

| ಕ್ರಮಸಂಖ್ಯೆ | ವಿಭಕ್ತಿಗಳು | ಕಾರಕಾರ್ಥಗಳು | ಹೊಸಗನ್ನಡ ಪ್ರತ್ಯಯ | ಹಳಗನ್ನಡ ಪ್ರತ್ಯಯ |
|---|---|---|---|---|
| 01 | ಪ್ರಥಮ | ಕರ್ತ್ರರ್ಥ | ಉ | ಮ್ |
| 02 | ದ್ವಿತೀಯ | ಕರ್ಮಾರ್ಥ | ಅನ್ನು | ಅಮ್ |
| 03 | ತೃತೀಯ | ಕರಣಾರ್ಥ | ಇಂದ | ಇಂದಂ |
| 04 | ಚತುರ್ಥಿ | ಸಂಪ್ರದಾನ | ಗೆ,ಇಗೆ,ಕ್ಕೆ, | ಗೆ,ಇಗೆ,ಕ್ಕೆ, |
| 05 | ಪಂಚಮೀ | ಅಪಾದನ | ದೆಸೆಯಿಂದ | ಅತ್ತಣಿಂ |
| 06 | ಷಷ್ಠಿ | ಸಂಬಂಧ | ಅ | ಅ |
| 07 | ಸಪ್ತಮಿ | ಅಧಿಕರಣ | ಅಲ್ಲಿ | ಒಳ್ |

# ವಚನಗಳು Numbers

ವಚನ ಎಂದರೆ ಸಂಖ್ಯೆ ಎಂದು ಅರ್ಥ

# ವಚನಗಳ ವಿಧಗಳು

ವಚನಗಳಲ್ಲಿ 2 ವಿಧ ಅವುಗಳೆಂದರೆ

1.ಏಕ ವಚನ :ಒಂದು ವಸ್ತು ಎಂಬುದನ್ನು ಹೇಳುವ ಶಬ್ದಗಳನ್ನು ‘‘ಏಕ ವಚನ’’ವೆಂದು ಕರೆಯುತ್ತಾರೆ.

2.ಬಹು ವಚನ :ಒಂದಕ್ಕಿಂತ ಹೆಚ್ಚಾದ ವಸ್ತುಗಳನ್ನು ‘‘ಬಹು ವಚನ’’ವೆಂದು ಕರೆಯುತ್ತಾರೆ.

ಉದಾಹರಣೆ

| ಕ್ರಮಸಂಖ್ಯೆ | ಏಕ ವಚನ | ಬಹುವಚನ |
|---|---|---|
| 01 | ಮರ | ಮರಗಳು |
| 02 | ತಾಯಿ | ತಾಯಂದಿರು |
| 03 | ಮುದುಕ | ಮುದುಕರು |
| 04 | ಮಗು | ಮಕ್ಕಳು |
| 05 | ಜನ | ಜನರು |
| 06 | ಅಜ್ಜ | ಅಜ್ಜಂದಿರು |



Use E-Papers, Save Tress
Above Line Hide When Print Out

# ಸಮಾಸಗಳು

ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಅರ್ಥಕ್ಕನುಸಾರವಾಗಿ ಸೇರಿ ಮಧ್ಯದಲ್ಲಿರುವ ವಿಭಕ್ತಿ ಪ್ರತ್ಯಯವನ್ನು ಲೋಪಮಾಡಿ ಒಂದು ಪದವಾಗುವುದಕ್ಕೆ "ಸಮಾಸ"ವೆಂದು ಕರೆಯುತ್ತಾರೆ.

ಉದಾಹರಣೆ ದೇವಮಂದಿರ ತಲೆನೋವು

ಪೂರ್ವಪದ + ಉತ್ತರ ಪದ ಪೂರ್ವಪದ + ಉತ್ತರ ಪದ

ದೇವರ + ಮಂದಿರ ತಲೆಯಲ್ಲಿ+ನೋವು

**ವಿಗ್ರಹ ವಾಕ್ಯ:-** ಪದವನ್ನು ಬಿಡಿಸಿ ಬರೆಯುವುದನ್ನು "ವಿಗ್ರಹ ವಾಕ್ಯ"ವೆಂದು ಕರೆಯುತ್ತಾರೆ.

ಸಮಾಸದ ಮೊದಲ ಪದವನ್ನು ಪೂರ್ವಪದವೆಂದು ಕರೆಯುತ್ತಾರೆ.

ಸಮಾಸದ ಎರಡನೇ ಪದವನ್ನು ಉತ್ತರ ಪದವೆಂದು ಕರೆಯುತ್ತಾರೆ.

## ಸಮಾಸದ ವಿಧಗಳು

ಸಮಾಸದಲ್ಲಿ ಪ್ರಮುಖವಾಗಿ 8 ವಿಧ ಅವುಗಳೆಂದರೆ

1.ತತ್ಪುರುಷ ಸಮಾಸ

2.ಕರ್ಮಧಾರೆಯ ಸಮಾಸ

3.ದ್ವಿಗು ಸಮಾಸ

4.ಅಂಶಿ ಸಮಾಸ

5.ದ್ವಂದ್ವ ಸಮಾಸ

6.ಕ್ರಿಯಾ ಸಮಾಸ

7.ಗಮಕ ಸಮಾಸ

8.ಬಹುವ್ರೀಹಿ ಸಮಾಸ

**1.ತತ್ಪುರುಷ ಸಮಾಸ :** ಪೂರ್ವ ಮತ್ತು ಉತ್ತರ ಪದಗಳು ನಾಮಪದಗಳಾಗಿದ್ದು ಉತ್ತರ ಪದದ ಅರ್ಥ ಪ್ರಧಾನವಾಗಿ, ಪೂರ್ವ ಪದದ ಅಂತ್ಯದಲ್ಲಿರುವ ವಿಭಕ್ತಿ ಪ್ರತ್ಯಯಗಳು ಲೋಪವಾದರೆ ಇಂತಹ ಸಮಸ್ತ ಪದ ರಚನೆಗಳೇ "ತತ್ಪುರುಷ ಸಮಾಸ"ವೆಂದು ಕರೆಯುತ್ತಾರೆ.



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

ಉದಾಹರಣೆಗಳು 1.ಬೆಟ್ಟದಾವರೆ ಪೂರ್ವಪದ + ಉತ್ತರ ಪದ=ನಾಮಪದ

ವಿಭಕ್ತಿ ಪ್ರತ್ಯಯ(ಬೆಟ್ಟದ) + (ತಾವರೆ) ಪ್ರಧಾನ.

2. ತಲೆನೋವು = ತಲೆಯಲ್ಲಿ+ನೋವು 3.ಪೂದೋಟ= ಪೂವಿನ+ ತೋಟ

4.ಸ್ವಾಮಿದ್ರೋಹ=ಸ್ವಾಮಿಗೆ+ದ್ರೋಹ 5.ಧನಹರಣ=ಧನದ+ಹರಣ 6.ಪರಧನ=ಪರರ+ಧನ

7.ದೈವಭಕ್ತಿ=ದೈವದ+ಭಕ್ತಿ 8.ಕಾಲುಬಳೆ=ಕಾಲಿನ+ಬಳೆ 9.ಅರಮನೆ+ಅರಸನ+ಮನೆ

**ನಾಮಪದ :–** ವ್ಯಕ್ತಿಯ ಹೆಸರು,ಪ್ರಾಣಿ,ಸ್ಥಳ,ವಸ್ತುಗಳ ಹೆಸರನ್ನು ತಿಳಿಸುವುದೇ ನಾಮಪದವೆಂದು ಕರೆಯುತ್ತಾರೆ. ಉದಾಹರಣೆಗಳು; ರಾಮ,ಮನೆ, ಮರ ,ಬೆಟ್ಟ,ತಾವರೆ,ದೈವ.

**2.ಕರ್ಮಧಾರೆಯ ಸಮಾಸ :–**ಪೂರ್ವ ಮತ್ತು ಉತ್ತರ ಪದಗಳು ಲಿಂಗ ವಚನ ವಿಭಕ್ತಿಗಳಿಂದ ಸಮನಾಗಿದ್ದು ಪೂರ್ವ ಪದವು "ವಿಶೇಷಣ" ಉತ್ತರ ಪದವು "ವಿಶೇಷ್ಯ"ಗಳಿಂದ ಕೂಡಿ ಆಗುವ ಸಮಾಸಕ್ಕೆ "ಕರ್ಮಧಾರೆಯ ಸಮಾಸ"ವೆಂದು ಕರೆಯುತ್ತಾರೆ.

ಸಮಾಸದ ರಚನೆಯಲ್ಲಿ ಪೂರ್ವಪದ ಗುಣವಾಚಕವಾಗಿದ್ದು ಉತ್ತರ ಪದ ನಾಮಪದವಾಗಿರುತ್ತದೆ.

ವಿಶೇಷಣ= ವ್ಯಕ್ತಿ, ವಸ್ತು, ಪ್ರಾಣಿಯ ಗುಣ ಸ್ವಭಾವ ಉದಾಹರಣೆ ಬಿಳಿಯ

ವಿಶೇಷ್ಯ= ವರ್ಣಿಸಿಕೊಳ್ಳುವ ವಸ್ತು

ಗುಣವಾಚಕ:–ವಸ್ತುಗಳ ಗುಣ,ಸ್ವಭಾವ, ರೀತಿಗಳನ್ನು ತಿಳಿಸುವ ಪದಗಳು. ಉದಾ:–ಕೆಂಪು,ದೊಡ್ಡ, ಹಿರಿದು

ಉದಾಹರಣೆಗಳು:– ಪೂರ್ವಪದ+ಉತ್ತರ ಪದ

1.ಹೆಮ್ಮರ ಹಿರಿದು + ಮರ

ವಿಶೇಷಣ+ವಿಶೇಷ್ಯ

2.ಇಮ್ಮಾವು=ಇನಿದು+ಮಾವು 3.ಹೊಸಗನ್ನಡ=ಹೊಸತು+ಕನ್ನಡ 4.ಕಟ್ಟೇಕಾಂತ=ಕಡಿದು+ ಕಾಂತ

5.ನಲ್ಲುದುರೆ=ನಲ್ಲಿತು+ಕುದುರೆ 6.ದಿವ್ಯಶರಾಳಿ=ದಿವ್ಯವಾದ+ಶರಾಳಿ 7.ಹೆದ್ದೊರೆ=ಹಿರಿದು+ತೊರೆ

8.ಅತಿಕುಟಿಲ=ಅತಿಯಾದ+ಕುಟಿಲ 9.ಮೆಲ್ವಾತು=ಮೆಲುವಾದ+ಮಾತು 10.ಪೆರ್ಮರ=ಪಿರಿಯ+ಮರ

11.ಪೆರ್ಮಗ=ಪಿರಿಯ+ಮಗ

**3.ದ್ವಿಗು ಸಮಾಸ :–** ಪೂರ್ವಪದವು ಸಂಖ್ಯಾವಾಚಕವಾಗಿದ್ದು ಉತ್ತರ ಪದವು ನಾಮಪದವಾಗಿದ್ದರೆ ಅದು "ದ್ವಿಗುಸಮಾಸ"ವೆಂದು ಕರೆಯುತ್ತಾರೆ.



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

ಉದಾಹರಣೆಗಳು:-

1.ಮೂಗಾವುದ ಪೂರ್ವಪದ + ಉತ್ತರ ಪದ

ಮೂರು + ಗಾವುದ

ಸಂಖ್ಯಾವಾಚಕ + ನಾಮಪದ

2.ಒಗ್ಗಟ್ಟು= ಒಂದು+ಕಟ್ಟು 3.ಮುಕ್ಕಣ್ಣು=ಮೂರು+ಕಣ್ಣು 4.ಏಕಾಕ್ಷ= ಏಕ+ಅಕ್ಷ

5.ಸಪ್ತಸ್ವರಗಳು=ಸಪ್ತಗಳಾದ+ಸ್ವರಗಳು 6.ನಾಕಾಳು=ನಾಕು+ಆಳು 7.ಎಣ್ದೆಸೆ=ಎಂಟು+ದೆಸೆ

8.ಷಟ್ಕೋನ =ಷಟ್+ಕೋನ

## 4.ಅಂಶಿಸಮಾಸ:-ಪೂರ್ವಪದವುಅಂಶ(ವಸ್ತು)ವಾಗಿದ್ದುಉತ್ತರಪದವು ಅಂಶಿ(ವಸ್ತುವಿನಭಾಗ)ಯಾಗಿದ್ದರೆ

ಅದನ್ನು "ಅಂಶಿ ಸಮಾಸ'ವೆಂದು ಕರೆಯುತ್ತಾರೆ.

ಅಂಶ;-ವಸ್ತುವಿನ ಭಾಗ ಉದಾ :-ಕಾಲು,ತಲೆ

ಅಂಶಿ :-ಒಂದು ವಸ್ತುವಿನ ಒಂದು ಭಾಗ ಉದಾ:-ಹಿಂಗಾಲು,ಮುಂಗಾಲು

ಉದಾಹರಣೆಗಳು:-

1.ಅಂಗೈ: ಪೂರ್ವಪದ + ಉತ್ತರ ಪದ

ಕೈಯ + ಅಡಿ

ಅಂಶ + ಅಂಶಿ

2.ಹಿಂದಲೆ =ತಲೆಯ+ಹಿಂದು 3.ಕಡೆಗಣ್ಣು =ಕಣ್ಣ+ಕಡೆ 4.ಮುಂಗೈ =ಕೈಯ+ಅಡಿ

5.ತುದಿನಾಲಿಗೆ =ನಾಲಿಗೆಯ+ತುದಿ 6.ನಡುರಾತ್ರಿ =ರಾತ್ರಿಯ+ನಡುವೆ 7.ಮುಂಗಾಲು =ಕಾಲಿನ+ಮುಂದೆ

8.ಮುಂದಲೆ=ತಲೆಯ+ಮುಂದೆ 9.ನಟ್ಟಡವಿ =ಅಡವಿಯ+ನಡು 10.ತುದಿಬೆರಳು ಬೆರಳಿನ+ತುದಿ

## 5.ದ್ವಂದ್ವ ಸಮಾಸ :-ಎರಡು ಅಥವಾ ಎರಡಕ್ಕಿಂತ ಹೆಚ್ಚು ನಾಮಪದಗಳು ಸೇರಿ ಉಂಟಾಗುವ

ಸಮಾಸವೇ "ದ್ವಂದ್ವ ಸಮಾಸ"ವೆಂದು ಕರೆಯುತ್ತಾರೆ.

ಉದಾಹರಣೆಗಳು:-

1.ಗಿರಿವನದುರ್ಗಗಳು =ಗಿರಿಯೂ+ವನವೂ=ದುರ್ಗವೂ

2.ಪಾರ್ಥಭೀಮರು = ಪಾರ್ಥನೂ+ಭೀಮನೂ

3.ಮಾದ್ರಮಾಗಧಯಾದವರು =ಮಾದ್ರರೂ+ಮಾಗದರೂ+ಯಾದವರು



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

4.ಲವಕುಶ=ಲವನೂ+ಕುಶನೂ

5.ಹನುಮಭೀಮರಾಮರು= ಹನುಮನೂ+ಭೀಮನೂ+ರಾಮನೂ

6.ಸೂರ್ಯಚಂದ್ರ = ಸೂರ್ಯನೂ+ಚಂದ್ರನೂ

7.ಕರಿತುರಗರಥ = ಕರಿಯೂ+ತುರಗವೂ+ರಥವೂ

8.ಭೀಮಾರ್ಜುನರು=ಭೀಮನೂ+ಅರ್ಜುನನೂ

9.ಕೆರೆಕಟ್ಟೆಬಾವಿಗಳು =ಕೆರೆಯೂ+ಕಟ್ಟೆಯೂ+ಬಾವಿಯೂ

10.ರಾಮಲಕ್ಷ್ಮಣರು =ರಾಮನೂ + ಲಕ್ಷ್ಮಣನೂ

**6.ಕ್ರಿಯಾ ಸಮಾಸ :–** ಪೂರ್ವಪದವು ದ್ವಿತೀಯಾ ವಿಭಕ್ತಿ ನಾಮಪದವಿದ್ದು ಉತ್ತರಪದದಲ್ಲಿ ಕ್ರಿಯಾಪದ ಸೇರಿ ಸಮಾಸವಾದರೆ ಅದನ್ನು "ಕ್ರಿಯಾ ಸಮಾಸ"ವೆಂದು ಕರೆಯುತ್ತಾರೆ.

ಕ್ರಿಯಾಪದ : ಕ್ರಿಯೆಯ ಅರ್ಥವನ್ನು ಸಂಪೂರ್ಣವಾಗಿ ಕೊಡುವ ಪದಗಳು ಕ್ರಿಯಾಪದಗಳು

ಉದಾಹರಣೆಗಳು:– ಪೂರ್ವಪದ + ಉತ್ತರ ಪದ

1.ಮೈಮುಚ್ಚು = ಮೈಯನ್ನು + ಮುಚ್ಚು

ದ್ವಿತೀಯಾ ವಿಭಕ್ತಿ + ಕ್ರಿಯಾಪದ

2.ಕೈಕೊಳ್ಳುದು=ಕೈಯನ್ನು +ಕೊಳ್ಳುದು 3.ಕೈಯಾನು =ಕೈಯನ್ನು + ಅನು

4.ಬಿಲ್ಗೊಂಡು =ಬಿಲ್ಲನ್ನು +ಕೊಂಡು 5.ಕಣ್ದೆರೆ =ಕಣ್ಣನ್ನು +ತೆರೆ 6.ಕಂಗಡು= ಕಣ್ಣಿನಿಂದ +ಕೆಡು

7.ಹೊಗೆದೋರು =ಹೊಗೆಯನ್ನು +ತೋರು 8.ಸೊಲ್ಗೇಳಿ= ಸೊಲ್ಲನ್ನು +ಕೇಳಿ

9.ಬಲವಂದು =ಬಲಕ್ಕೆ+ಬಂದು 10.ಸಾಕ್ಷಿಮಾಡಿ= ಸಾಕ್ಷಿಯನ್ನು + ಮಾಡಿ

11.ಬಿಲ್ದಿರುವನೇರಿಸಿ =ಬಿಲ್ದರುವನ್ನು+ಏರಿಸಿ 12.ಮೋಸಮಾಡು =ಮೋಸವನ್ನು+ಮಾಡು

13.ಕಳ್ಗುಡಿದ =ಕಳ್ಳನ್ನು+ಕುಡಿದ

**7.ಗಮಕ ಸಮಾಸ:–** ಪೂರ್ವಪದವು ಸರ್ವನಾಮ ಇಲ್ಲವೇ ಕೃದಂತವಾಗಿದ್ದು ಉತ್ತರಪದವು ನಾಮಪದದೊಡನೆ ಕೂಡಿ ಅಗುವ ಸಮಾಸವೇ "ಗಮಕ ಸಮಾಸ"ವೆಂದು ಕರೆಯುತ್ತಾರೆ.

ಸರ್ವನಾಮ ; ಹೆಸರಿಗೆ ಬದಲಾಗಿ ಬಳಸುವ ನಾಮಪದಗಳನ್ನು "ಸರ್ವನಾಮ"ವೆಂದು ಕರೆಯುತ್ತಾರೆ.

ಕೃದಂತ:–ಧಾತುಗಳಿಗೆ ಕೃತ್ ಪ್ರತ್ಯಯ ಸೇರಿ ಆಗುವುದನ್ನು "ಕೃದಂತ"ವೆಂದು ಕರೆಯುತ್ತಾರೆ.



Use E-Papers, Save Tress
Above Line Hide When Print Out

ಉದಾಹರಣೆಗಳು:- ಪೂರ್ವಪದ + ಉತ್ತರ ಪದ

1.ಆ ಕಲ್ಲು = ಅದು + ಕಲ್ಲು

ಸರ್ವನಾಮ/ ಕೃದಂತ + ನಾಮಪದ

2.ಈ ಬೆಕ್ಕು =ಇದು+ ಬೆಕ್ಕು 3.ನೆಯ್ದವಸ್ತ್ರ =ನೆಯ್ದುದು+ವಸ್ತ್ರ 4.ಆ ಹುಡುಗ =ಅವನು+ಹುಡುಗ

5.ಬೆಂದಬೇಳೆ =ಬೆಂದುದು+ ಬೇಳೆ 6.ತೂಗುದೀಪ = ತೂಗುವುದು +ದೀಪ

7.ತಿಂದಕೂಳು = ತಿಂದುದು+ಕೂಳು 8.ಮಾಡಿದಡುಗೆ =ಮಾಡಿದುದು+ಅಡಿಗೆ

9.ಉಡುದಾರ =ಉಡುವುದು+ದಾರ 10.ಕಂಡವಿಚಾರ =ಕಂಡುದು+ ವಿಚಾರ

**8.ಬಹುವ್ರೀಹಿ ಸಮಾಸ**:-ಎರಡು ಅಥವಾ ಎರಡಕ್ಕಿಂತ ಹೆಚ್ಚು ನಾಮಪದಗಳು ಸೇರಿ ಸಮಾಸವಾದಾಗ ಬೇರೊಂದು ಪದದ ಅರ್ಥವು ಪ್ರಧಾನವಾಗಿ ಉಳ್ಳ ಸಮಾಸಕ್ಕೆ "ಬಹುವ್ರೀಹಿ ಸಮಾಸ'ವೆಂದು ಕರೆಯುತ್ತಾರೆ.

ಉದಾಹರಣೆಗಳು

1.ಹಣೆಗಣ್ಣ= ಹಣೆಯಲ್ಲಿ ಕಣ್ಣು ಉಳ್ಳವನು ಆವನೋ ಅವನು=ಶಿವ

2.ಮುಕ್ಕಣ್ಣ=ಮೂರು ಕಣ್ಣು ಉಳ್ಳವನು ಆವನೋ ಅವನು=ಶಿವ

3.ನಾಲ್ಮೊಗ=ನಾಲ್ಕು ಮೊಗ ಉಳ್ಳವನು ಆವನೋ ಅವನು=ಬ್ರಹ್ಮ

4.ಚಕ್ರಪಾಣಿ=ಚಕ್ರವನ್ನು ಪಾಣಿಯಲ್ಲಿ ಉಳ್ಳವನು ಆವನೋ ಅವನು=ವಿಷ್ಣು,ಕೃಷ್ಣ

5.ಅಗಜಾತೆ=ಅಗದಲ್ಲಿ ಜನಿಸಿದವಳು=ಪಾರ್ವತಿ

## ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು

| ಕವಿಗಳ ಹೆಸರು | ವರ್ಷ | ಕೃತಿಗಳು |
|---|---|---|
| ಕುವೆಂಪು | 1968 | ಶ್ರೀ ರಾಮಾಯಣ ದರ್ಶನಂ |
| ದ.ರಾ.ಬೇಂದ್ರೆ | 1974 | ನಾಕುತಂತಿ |
| ಡಾ.ಶಿವರಾಮ ಕಾರಂತ | 1978 | ಮೂಕಜ್ಜಿಯ ಕನಸುಗಳು |
| ಮಾಸ್ತಿ ವೆಂಕಟೇಶಅಯ್ಯಂಗಾರ್ | 1983 | ಚಿಕ್ಕವೀರ ರಾಜೇಂದ್ರ |
| ವಿ.ಕೃ.ಗೋಕಾಕ್ | 1991 | ಭಾರತ ಸಿಂಧುರಶ್ಮಿ |
| ಯು.ಆರ್.ಅನಂತಮೂರ್ತಿ | 1994 | ಸಮಗ್ರ ಸಾಹಿತ್ಯ |
| ಗಿರೀಶ್ ಕಾರ್ನಾಡ್ | 1998 | ಸಮಗ್ರ ಸಾಹಿತ್ಯ |
| ಡಾ.ಚಂದ್ರಶೇಖರ ಕಂಬಾರ | 2010 | ಸಮಗ್ರ ಸಾಹಿತ್ಯ |



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

# ಹೆಚ್ಚಿನ ಅಭ್ಯಾಸಕ್ಕಾಗಿ ಸಮಾಸಗಳು

## 1.ತತ್ಪುರುಷ ಸಮಾಸ

| ಕ್ರ.ಸಂ. | ಸಮಾಸ ಪದ | ಪೂರ್ವ ಪದ | ಉತ್ತರ ಪದ |
|---|---|---|---|
| 01 | ಕಾಡು ಪ್ರಾಣಿ | ಕಾಡಿನ | ಪ್ರಾಣಿ |
| 02 | ನೀರಾವು | ನೀರಿನ | ಹಾವು |
| 03 | ಪುಣ್ಯ ಭೂಮಿ | ಪುಣ್ಯದ | ಭೂಮಿ |
| 04 | ಯಜ್ಞಾಶ್ವ | ಯಜ್ಞದ | ಅಶ್ವ |
| 05 | ಚಳಿಗಾಲ | ಚಳಿಯ | ಕಾಲ |
| 06 | ಯಜ್ಞತುರಂಗ | ಯಜ್ಞದ | ತುರಂಗ |
| 07 | ಬಾಯುಪಚಾರ | ಬಾಯಿಯ | ಉಪಚಾರ |
| 08 | ಮರಗಾಲು | ಮರದ | ಕಾಲು |
| 09 | ಕರ್ಣಕುಂಡಲ | ಕರ್ಣದ | ಕುಂಡಲ |
| 10 | ತಲೆದಿಂಬು | ತಲೆಯ | ದಿಂಬು |
| 11 | ಭೃಂಗೋದರ | ಭೃಂಗದ | ಉದರ |

## 2.ಕರ್ಮಧಾರೆಯ ಸಮಾಸ

| ಕ್ರ.ಸಂ. | ಸಮಾಸ ಪದ | ಪೂರ್ವ ಪದ | ಉತ್ತರ ಪದ |
|---|---|---|---|
| 01 | ಕಪ್ಪುಕಾಗೆ | ಕಪ್ಪಾದ | ಕಾಗೆ |
| 02 | ಚಿಕ್ಕಲೆ | ಚಿಕ್ಕದಾದ | ಎಲೆ |
| 03 | ಹೆಬ್ಬಾಗಿಲು | ಹಿರಿದು | ಬಾಗಿಲು |



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

| ಕ್ರ.ಸಂ. | ಸಮಾಸ ಪದ | ಪೂರ್ವ ಪದ | ಉತ್ತರ ಪದ |
|---|---|---|---|
| 04 | ಕೆಂಗಿಡಿ | ಕೆಂಪಾದ | ಕಿಡಿ |
| 05 | ದಿವ್ಯ ಪ್ರಕಾಶ | ದಿವ್ಯವಾದ | ಪ್ರಕಾಶ |
| 06 | ಕರಿಮುಗಿಲು | ಕಪ್ಪಾದ | ಮುಗಿಲು |
| 07 | ಹೊಸನಾಡು | ಹೊಸದಾದ | ನಾಡು |
| 08 | ಮೃಷ್ಟಾನ್ನ | ಮೃಷ್ಟವಾದ | ಅನ್ನ |
| 09 | ತಣ್ಣೀರು | ತಣ್ಣನೆಯ | ನೀರು |
| 10 | ಮುಖ್ಯಬೀದಿ | ಮುಖ್ಯವಾದ | ಬೀದಿ |
| 11 | ಹಳೆಕೋಟೆ | ಹಳೆಯ | ಕೋಟೆ |
| 12 | ಕರಿಯ ಕಂಬಳಿ | ಕರಿಯದಾದ | ಕಂಬಳಿ |
| 13 | ಬೆಳ್ಮುಗಿಲು | ಬಿಳುಪಾದ | ಮುಗಿಲು |
| 14 | ಪುಟ್ಟಹಕ್ಕಿ | ಪುಟ್ಟನೆಯ | ಹಕ್ಕಿ |
| 15 | ಬೆಳ್ಗೊಡೆ | ಬಿಳುಪಾದ | ಕೊಡೆ |
| 16 | ಹಳಗನ್ನಡ | ಹಳೆಯ | ಕನ್ನಡ |

# 3.ದ್ವಿಗು ಸಮಾಸ

| ಕ್ರ.ಸಂ. | ಸಮಾಸ ಪದ | ಪೂರ್ವ ಪದ | ಉತ್ತರ ಪದ |
|---|---|---|---|
| 01 | ಮೂರೆಕರೆ | ಮೂರು | ಎಕರೆ |
| 02 | ಒಕ್ಕೊರಲು | ಒಂದು | ಕೊರಳು |
| 03 | ಅಷ್ಟಮಪುತ್ರ | ಅಷ್ಟಮ | ಪುತ್ರ |



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

| ಕ್ರ.ಸಂ. | ಸಮಾಸ ಪದ | ಪೂರ್ವ ಪದ | ಉತ್ತರ ಪದ |
|---|---|---|---|
| 04 | ಪಂಚಲಿಂಗ | ಪಂಚಗಳಾದ | ಲಿಂಗ |
| 05 | ನವರಾತ್ರಿ | ನವಗಳಾದ | ರಾತ್ರಿ |
| 06 | ಏಕಾಕ್ಷರೀ | ಏಕ | ಅಕ್ಷರೀ |
| 07 | ಮೂಜಗ | ಮೂರು | ಜಗ |
| 08 | ಸಪ್ತಾಕ್ಷರೀ | ಸಪ್ತಗಳಾದ | ಅಕ್ಷರೀ |
| 09 | ಪಂಚವಾದ್ಯಗಳು | ಪಂಚಗಳಾದ | ವಾದ್ಯಗಳು |
| 10 | ನಾಲ್ವಡಿ | ನಾಲ್ಕು | ಮಡಿ |
| 11 | ಇಬ್ಭಾಗ | ಎರಡು | ಭಾಗ |
| 12 | ಪಂಚಕ್ಷರೀ | ಪಂಚಗಳಾದ | ಅಕ್ಷರೀ |

## 4.ಅಂಶಿ ಸಮಾಸ

| ಕ್ರ.ಸಂ. | ಸಮಾಸ ಪದ | ಪೂರ್ವ ಪದ | ಉತ್ತರ ಪದ |
|---|---|---|---|
| 01 | ನಡುನಾಡು | ನಾಡಿನ | ನಡು |
| 02 | ಮುಂಗೋಪ | ಕೋಪದ | ಮುಂದು |
| 03 | ನಟ್ಟಿರುಳು | ಇರುಳಿನ | ನಡು |
| 04 | ಮೇಲಂತಸ್ತು | ಅಂತಸ್ತಿನ | ಮೇಲು |
| 05 | ಒಳಾಂಗಣ | ಅಂಗಣದ | ಒಳಗೆ |
| 06 | ತುದಿಗಾಲು | ಕಾಲಿನ | ತುದಿ |
| 07 | ಮುಂಗೋಡೆ | ಗೋಡೆಯ | ಮುಂದು |



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

| ಕ್ರ.ಸಂ. | ಸಮಾಸ ಪದ | ಪೂರ್ವ ಪದ | ಉತ್ತರ ಪದ |
|---|---|---|---|
| 08 | ಮುನ್ನುಡಿ | ನುಡಿಯ | ಮುಂದು |

# 5.ದ್ವಂದ್ವ ಸಮಾಸ

| ಕ್ರ.ಸಂ. | ಸಮಾಸ ಪದ | ಪೂರ್ವ ಪದ | ಉತ್ತರ ಪದ |
|---|---|---|---|
| 01 | ಗಿಡ ಮರ | ಗಿಡವೂ | ಮರವೂ |
| 02 | ಗುಡುಗುಸಿಡಿಲು | ಗುಡುಗೂ | ಸಿಡಿಲೂ |
| 03 | ಖಗಮೃಗೋರಗ | ಖಗವೂ+ಮೃಗವೂ+ಉರಗವೂ | |
| 04 | ಮದ ಮತ್ಸರ | ಮದವೂ | ಮತ್ಸರವೂ |

# 6.ಕ್ರಿಯಾ ಸಮಾಸ

| ಕ್ರ.ಸಂ. | ಸಮಾಸ ಪದ | ಪೂರ್ವ ಪದ | ಉತ್ತರ ಪದ |
|---|---|---|---|
| 01 | ಕೈಹಿಡಿ | ಕೈಯನ್ನು | ಹಿಡಿ |
| 02 | ಮೈಯುಬ್ಬಿ | ಮೈಯನ್ನು | ಉಬ್ಬಿ |
| 03 | ತಲೆಬಾಗು | ತಲೆಯನ್ನು | ಬಾಗು |
| 04 | ಮನೆಮಾರು | ಮನೆಯನ್ನು | ಮಾರು |




G.R.P.


ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

# 7.ಗಮಕ ಸಮಾಸ

| ಕ್ರ.ಸಂ. | ಸಮಾಸ ಪದ | ಪೂರ್ವ ಪದ | ಉತ್ತರ ಪದ |
|---|---|---|---|
| 01 | ಈ ಹೂವು | ಇದು | ಹೂವು |
| 02 | ಆ ಪ್ರಾಣಿ | ಅದು | ಪ್ರಾಣಿ |

# 8. ಬಹುವ್ರೀಹಿ ಸಮಾಸ

1.ಕಮಲ ಮುಖಿ=ಕಮಲದಂತೆ ಮುಖವನ್ನು ಯಾರು ಉಳ್ಳವರೋ ಅವರೇ ಕಮಲಮುಖಿ.=ಸೀತೆ

2.ಹಲಾಧರ=ನೇಗಿಲನ್ನು ಯಾರೂ ಹೊಂದಿರುವವರು ಅವನೇ=ಬಲರಾಮ

3.ಮೇದಿನಿ ಪತಿ=ಮೇದಿನಿಗೆ ಪತಿ ಯಾರೋ ಅವನೇ=ಕರ್ಣ

4.ಇನತನೂಜ= ಇನನತನೂಜನು ಯಾರೋ ಅವನೇ=ಕರ್ಣ

5.ದನುಜರಿಪು=ರಾಕ್ಷಸರ ಶತ್ರು ಯಾರೋ ಅವನೇ=ಕೃಷ್ಣ

6.ಮುರಾರಿ=ಮುರನ ಅರಿ ಯಾರೋ ಅವನೇ=ಕೃಷ್ಣ

7.ರಾಜೀವ ಸಖ=ರಾಜೀವನ ಸಖ ಯಾರೋ ಅವನೇ=ಸೂರ್ಯ

8.ಅಂತಕಾತ್ಮಜ=ಅಂತಕನ ಆತ್ಮಜನು ಯಾರೋ ಅವನೇ=ಯುಧಿಷ್ಟರ

9.ನಾಣಿಲಿ=ನಾಣ್ ಇಲ್ಲದವನು ಯಾರೋ ಅವನೇ=ನಾಚಿಕೆ ಇಲ್ಲದವ

ರಾಷ್ಟ್ರೀಯ ಪ್ರಾಣಿ



ಹುಲಿ

ರಾಷ್ಟ್ರೀಯ ಪಕ್ಷಿ



ನವಿಲು

ರಾಷ್ಟ್ರೀಯ ಹೂ



ತಾವರೆ



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

# ಲಿಂಗಗಳು Genders

ಒಂದು ಪದವನ್ನು ಸ್ತ್ರೀ,ಪುರುಷ ,ಅಥವಾ ನಪುಂಸಕ ಪದ ಎಂಬುದನ್ನು ಸೂಚಿಸುವುದೇ ಲಿಂಗಗಳು

## ಲಿಂಗಗಳ ವಿಧಗಳು

ಲಿಂಗಗಳಲ್ಲಿ 3 ವಿಧ ಅವುಗಳೆಂದರೆ

1.ಪುಲ್ಲಿಂಗ

2.ಸ್ತ್ರೀಲಿಂಗ

3.ನಪುಂಸಕ ಲಿಂಗ

1. .ಪುಲ್ಲಿಂಗ: ಪುರುಷ ವಾಚಕ ಶಬ್ದಗಳಿಗೆ ಪುಲ್ಲಿಂಗವೆಂದು ಕರೆಯುತ್ತಾರೆ

ಉದಾ : ಅವನು,ಇವನು,ಅಧ್ಯಕ್ಷ ,ಮಂತ್ರಿ,

2.ಸ್ತ್ರೀಲಿಂಗ: ಸ್ತ್ರೀ ವಾಚಕ ಶಬ್ದಗಳಿಗೆ ಸ್ತ್ರೀಲಿಂಗವೆಂದು ಕರೆಯುತ್ತಾರೆ.

ಉದಾ :ಅವಳು, ಇವಳು, ಅಧ್ಯಕ್ಷೆ,ಮಂತ್ರಿಣಿ

3. ನಪುಂಸಕ ಲಿಂಗ : ಸ್ತ್ರೀ ಹಾಗೂ ಪುರುಷವಾಚಕಗಳನ್ನುಳಿದು ಉಳಿದ ಚರಾಚರ ವಸ್ತುಗಳೆಲ್ಲವೂ . ನಪುಂಸಕ ಲಿಂಗವೆಂದು ಕರೆಯುತ್ತಾರೆ. ಉದಾ :-ಅದು,ಇದು,ದೊಡ್ಡದು,ಚಿಕ್ಕದು,ಮಗು,ಶಿಶು,ಕರು

## ರಾಶಿಗಳು

| | |
|---|---|
| 1. ಮೇಷ | 7.ತುಲಾ |
| 2. ವೃಷಭ | 8.ವೃಶ್ಚಿಕ |
| 3. ಮಿಥುನ | 9.ಧನಸ್ಸು |
| 4. ಕಟಕ | 10.ಮಕರ |
| 5. ಸಿಂಹ | 11.ಕುಂಭ |
| 6. ಕನ್ಯಾ | 12.ಮೀನ |



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

# ತತ್ಸಮ - ತದ್ಭವ

**ತತ್ಸಮ:–**ಸಂಸ್ಕೃತ ವಿಕಾರ ಹೊಂದದೆ ಕನ್ನಡದಲ್ಲಿ ಬಳಸುವ ಪದಗಳನ್ನ''ತತ್ಸಮ''ವೆಂದು ಕರೆಯುತ್ತಾರೆ. ತತ್ ಎಂದರೆ ಅದಕ್ಕೆ ಸಮ ಅರ್ಥಾತ್ ಸಂಸ್ಕೃತಕ್ಕೆ ಸಮಾನವಾದ ಪದ ಎಂದು ಅರ್ಥ.

**ತದ್ಭವ:–** ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಅಲ್ಪ ಸಲ್ಪ ವಿಕಾರವನ್ನಾಗಲಿ ಅಥವಾ ಪೂರ್ಣ ವಿಕಾರವನ್ನಾಗಲಿ ಹೊಂದಿ ಬರುವ ಶಬ್ದಗಳನ್ನು ತದ್ಭವಗಳೆಂದು ಕರೆಯುತ್ತಾರೆ.ತತ್ ಭವ ಎಂದರೆ ಸಂಸ್ಕೃತದಿಂದ ಹುಟ್ಟಿದ ಎಂದು ಅರ್ಥ.


| ತತ್ಸಮ | ತದ್ಭವ | ತತ್ಸಮ | ತದ್ಭವ | ತತ್ಸಮ | ತದ್ಭವ |
|---|---|---|---|---|---|
| ವಿಜ್ಞಾನ | ಬಿನ್ನಾಣ | ಯಜ್ಞ | ಜನ್ನ | ಅಟವಿ | ಅಡವಿ |
| ಮುಖಶಾಲೆ | ಮೊಗಸಾಲೆ | ದ್ಯೂತ | ಜೂಜು | ಪ್ರಸಾದ | ಹಸಾದ |
| ದಾತೃ | ದಾತಾರ | ವಂಶ | ಬಂಚ | ಕುಠಾರ | ಕೊಡಲಿ |
| ವಿಜ್ಞಾಪನೆ | ಬಿನ್ನಹ | ಸ್ಥಾನ | ಠಾಣ | ವರ್ಷ | ವರುಷ |
| ಸಾಮಂತ | ಸಾವಂತ | ಯಶ | ಜಶ | ದೃಷ್ಟಿ | ದಿಟ್ಟಿ |
| ಕೋಕಿಲಾ | ಕೋಗಿಲೆ | ಪಟ್ಟಣ | ಪತ್ತನ | ಗ್ರಹ | ಗರ |
| ವಂದ್ಯಾ | ಬಂಜೆ | ಕಾರ್ಯ | ಕಜ್ಜ | ದಿಸೆ | ದಿಶಾ |
| ವೀರ | ಬೀರ | ಕಣಿ | ಗಣಿ | ಶ್ರೀ | ಸಿರಿ |
| ಅರ್ಕ | ಎಕ್ಕ | ಪುಣ್ಯ | ಹೂನ್ಯ | ವೈಶಾಖ | ಬೇಸಗೆ |
| ಸುಧೆ | ಸೊದೆ | ಶಶಿ | ಶಶಿ | ಪಾದುಕಾ | ಹಾವುಗೆ |
| ತಟ | ತಡಿ | ವಿದ್ಯಾಧರ | ಬಿಜ್ಜೋಧರ | ಕವಿ | ಕಬ್ಬಿಗ |
| ವ್ಯಯ | ಬೀಯ | ಶುನಕ | ಸೊಣಗ | ಭಕ್ತಿ | ಬಕುತ |
| ವ್ಯಾಪಾರಿ | ಬೇಹಾರಿ | ಧರ್ಮ | ಧಮ್ಮ | ತಪಸ್ವಿ | ತವಸಿ |
| ಸಂದೇಹ | ಸಂದೆಯ | ಪಕ್ಷಿ | ಹಕ್ಕಿ | ಆರ್ಯ | ಅಜ್ಜ |
| ಅಮೃತ | ಅಮರ್ದು | ಬ್ರಹ್ಮ | ಬೊಮ್ಮ | ವೀಧಿ | ಬೀದಿ |
| ಕಾವ್ಯ | ಕಬ್ಬ | ಚಂದ್ರ | ಚಂದಿರ | ತ್ಯಾಗ | ಚಾಗ |





ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

| ತತ್ಸಮ | ತದ್ಭವ | ತತ್ಸಮ | ತದ್ಭವ | ತತ್ಸಮ | ತದ್ಭವ |
|---|---|---|---|---|---|
| ಆಶ್ಚರ್ಯ | ಅಚ್ಚರಿ | ಮಲ್ಲಿಗೆ | ಮಲ್ಲಿಕ | ಸುಖ | ಸೊಗೆ |
| ಪುಸ್ತಕ | ಹೊತ್ತಿಗೆ | ಯುಗ | ಜುಗ | ಕ್ಷಣ | ಚಣ |
| ಅಂಗಳ | ಅಂಗಣ | ಯೋಗ | ಜೋಗ | ರತ್ನ | ರತುನ |
| ಆಗಸ | ಆಕಾಶ | ಶಕ್ತಿ | ಶಕುತಿ | ಯುದ್ಧ | ಜುದ್ಧ |
| ಪದ್ಮ | ಪದುಮ | ಮುಕ್ತಿ | ಮುಕುತಿ | ಧರ್ಮ | ದಮ್ಮ |
| ಸರಸ್ವತೀ | ಸರಸತಿ | ವಿನೋದ | ಬಿನದ | ಕರ್ತರಿ | ಕತ್ತರಿ |
| ವಿದ್ಯೆ | ಬಿಜ್ಜೆ | ದುಃಖ | ದುಗುಡ | ಕಾಮ | ಕಾವ |
| ಲಕುಮಿ | ಲಕ್ಷ್ಮೀ | ಹೃದಯ | ಎದೆ | | |
| ಸಿಂಗಾರ | ಶೃಂಗಾರ | ಮಾಣಿಕ್ಯ | ಮಾಣಿಕ | | |
| ಭೂಮಿ | ಬುವಿ | ವೇತ್ರ | ಬೆತ್ತ | | |
| ರಾಯ | ರಾಜ | ಸಂಸ್ಕೃತ | ಸಕ್ಕದ | | |
| ನಿತ್ಯ | ನಿಚ್ಚ | ಆಜ್ಞೆ | ಆಣೆ | | |
| ಸೂರ್ಯ | ಸೂರಿಯ | ಬಿಕ್ಷಾ | ಬಿಕ್ಕೆ | | |
| ಮೃಗ | ಮಿಗ | ವಸಂತ | ಬಸಂತ | | |
| ವಸನ | ಬಸನ | ಜಾತ್ರೆ | ಯಾತ್ರೆ | | |
| ಪ್ರಾಣ | ಹರಣ | ಕಥೆ | ಕತೆ | | |








Use E-Papers, Save Tress
Above Line Hide When Print Out

# ದ್ವಿರುಕ್ತಿಗಳು

ಒಂದು ವಿಶೇಷಾರ್ಥವನ್ನು ವ್ಯಕ್ತಪಡಿಸುವುದಕ್ಕಾಗಿ ಒಂದು ಪದವನ್ನೋ,ಒಂದು ವಾಕ್ಯವನ್ನೋ,ಎರಡೆರಡು ಬಾರಿ ಪ್ರಯೋಗ ಮಾಡುವುದಕ್ಕೆ ದ್ವಿರುಕ್ತಿಗಳು ಎಂದು ಕರೆಯುತ್ತಾರೆ. (ದ್ವಿ–ಎಂದರೆ ಎರಡು, ಉಕ್ತಿ ಎಂದರೆ ಮಾತು ಎಂದರ್ಥ)

ಉದಾ:–

| | | | | | |
|---|---|---|---|---|---|
| ಮೆಲ್ಲಮೆಲ್ಲನೆ | ಊರೂರು | ಖಂಡಖಂಡಗಳ | ಹೆಚ್ಚು ಹೆಚ್ಚು | ಮನೆಮನೆಗಳಲ್ಲಿ | ಕೇರಿಕೇರಿಗಳನ್ನು |
| ಅಬ್ಬಾಬ್ಬಾ | ಗಾವುದಗಾವುದ | ಗರಿಗರಿ | ಬಣ್ಣಬಣ್ಣಗಳ | ಸಲಸಲಕ್ಕೂ | ಇರುಳಿರುಳು |
| ಈಗೀಗ | ಓಡೋಡು | ಕೊತ್ತಕೊನೆಗೆ | ಬನ್ನಿ ಬನ್ನಿ | ಹತ್ತಿರ ಹತ್ತಿರ | ನೋಡುನೋಡು |
| ಒಬ್ಬೊಬ್ಬ | ತುತ್ತತುದಿ | ದುರದುರನೆ | ಕಟ್ಟಕಡೆ | ದುಂಡುದುಂಡಾದ | ನಟ್ಟನಡುವೆ |
| ನಡುನಡುವೆ | ದಿನದಿನ | ಬಟ್ಟಬಯಲು | ಕೊನೆಕೊನೆಗೆ | ಬೇಡಬೇಡ | ನೋಡಿನೋಡಿ |
| ಸಾಕು ಸಾಕು | ಹೌದ್ಹೌದು | ಅಹಹಾ | ನಡೆನಡೆ | ದೊಡ್ಡದೊಡ್ಡ | ಅಗೋಅಗೋ |

# ಜೋಡಿಪದಗಳು

ಅರ್ಥಪೂರ್ಣವಾದ ಎರಡು ಬೇರೆ ಬೇರೆ ಪದಗಳು ಜೊತೆಜೊತೆಯಾಗಿ ಬಳಕೆಯಾಗುವುದನ್ನು ಜೋಡುನುಡಿ ಎಂದು ಕರೆಯುತ್ತಾರೆ.

| | | | | | |
|---|---|---|---|---|---|
| ಸತಿಪತಿ | ಕೆನೆಮೊಸರು | ಹಾಲ್ಜೇನು | ಮಕ್ಕಳುಮರಿ | ಕಾಫಿಗೀಫಿ | ಹುಳಹುಪ್ಪಡಿ |
| ದೇವರುಗೀವರು | ಹಣಗಿಣ | ಪುಸ್ತಕಗಿಸ್ತಕ | ಕಕ್ಕಾಬಿಕ್ಕಿ | ಕರಿನರೆ | ಬಿಳಿಹೊಳೆ |
| ಬಟ್ಟೆಬರೆ | ಸೊಪ್ಪುಸದೆ | ಹಾಲುಗೀಲು | ಮನೆಮಠ | ಹಗಲುರಾತ್ರಿ | ನೋವುನಲಿವು |
| ಊರುಕೇರಿ | ಹಣ್ಣುಹಂಪಲು | ವೇಷಭೂಷಣ | ತಿಂಡಿ ತೀರ್ಥ | ನಾಡುನುಡಿ | ಅಚ್ಚುಮೆಚ್ಚು |

# ನುಡಿಗಟ್ಟುಗಳು

ವಿಶೇಷಾರ್ಥವುಳ್ಳ ಮತ್ತು ಒಳಾರ್ಥವುಳ್ಳ ಪದಪುಂಜವನ್ನು ನುಡಿಗಟ್ಟು ಎಂದು ಕರೆಯುತ್ತಾರೆ.

ಉದಾ:

1.ಅಟ್ಟಕ್ಕೇರಿಸು–ಹೊಗಳಿ ಹೊಗಳಿ ಉಬ್ಬಿಸು

2.ಗುಬ್ಬಿ ಮೇಲೆ ಬ್ರಹ್ಮಾಸ್ತ್ರ–ಸಣ್ಣವರ ಮೇಲೆ ಬಲ ಪ್ರದರ್ಶನ



Use E-Papers, Save Tress
Above Line Hide When Print Out

# ಅನುಕರಣಾವ್ಯಯಗಳು

ನಿರ್ದಿಷ್ಟ ಅರ್ಥವಿಲ್ಲದ ಧ್ವನಿ ವಿಶೇಷಣಗಳನ್ನು ತಾನು ಕಿವಿಯಿಂದ ಕೇಳಿದಂತೆ ಅನುಕರಣೆ ಮಾಡಿ ಹೇಳುವ ಪದಗಳನ್ನು ''ಅನುಕರಣಾವ್ಯಯ''ಗಳೆಂದು ಕರೆಯುತ್ತಾರೆ.

| | | | | | |
|---|---|---|---|---|---|
| ಚಟಚಟ | ಕರಕರ | ಚುರುಚುರು | ಧಗಧಗ | ರೊಯ್ಯನೆ | ಸುಯ್ಯನೆ |
| ಘುಳುಘುಳು | ದಡದಡ | ಗುಜುಗುಜು | ಸರಸರ | ಝಣಝಣ | ಘಮಘಮ |
| ಗುಡುಗುಡು | ಪಟಪಟನೆ | ಫಳಫಳ | ಢಣಢಣ | ಜುಳುಜುಳು | ರಫರಫ |
| ಪರಪರ | ಗುನುಗುನು | ಚುಮುಚುಮು | ಲಕಲಕ | ಭಗಭಗ | ತಟತಟ |

# ಸಮಾನಾರ್ಥಕ ಪದಗಳು

ಒಂದು ಪದಕ್ಕೆ ಸಮಾನವಾದ ಅರ್ಥವನ್ನು ಕೊಡುವುದೇ ಸಮಾನಾರ್ಥಕ ಪದಗಳುವೆಂದು ಕರೆಯುತ್ತಾರೆ.

ಉದಾ: 1.ಶಾಲೆ =ವಿದ್ಯಾಲಯ,ಗುರುಕುಲ,

2.ಕಣ್ಣು =ನಯನ, ಅಕ್ಷಿ,ನೇತ್ರ

3.ತಂಡ=ಪಕ್ಷ, ಬಣ,ದಳ,

# ನಾನಾರ್ಥಕ ಪದಗಳು

ಒಂದು ಪದಕ್ಕೆ ಬೇರೆ ಬೇರೆ ಅರ್ಥಗಳನ್ನು ಸೂಚಿಸುವಂತಿದ್ದರೆ ಅದನ್ನು ನಾನಾರ್ಥಕ ಪದವೆಂದು ಕರೆಯುತ್ತಾರೆ.

ಉದಾ: 1.ದಳ=ಸೈನ್ಯ, ಎಲೆ,ಗುಂಪು,

2.ಅಂಗ=ಭಾಗ,ದೇಹ,ಗುಂಪು,

3.ಮಡಿ=ಸಾಯಿ, ಶುದ್ಧವಾದದ್ದು

# ವಿರುದ್ಧಾರ್ಥಕ ಪದಗಳು

ದಿನನಿತ್ಯ ಮಾತನಾಡುವಾಗ, ಬರೆಯುವಾಗ ಬಳಸುವ ಪದಗಳಲ್ಲಿ ವಿರುದ್ಧವಾದ ಅರ್ಥವಿರುವ ಕೆಲವು ಪದಗಳನ್ನು ವಿರುದ್ಧಾರ್ಥಕ ಪದಗಳೆಂದು ಕರೆಯುತ್ತಾರೆ.

ಉದಾ:- ಅನುಭವXಅನಾನುಭವ ಆದಿXಅನಾದಿ ಉನ್ನತಿXಅವನ್ನತಿ



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

# ನಾಮಪದಗಳು

ವ್ಯಕ್ತಿಯ ಹೆಸರು,ಪ್ರಾಣಿ,ಸ್ಥಳ,ವಸ್ತುಗಳ ಹೆಸರನ್ನು ತಿಳಿಸುವುದೇ ನಾಮಪದವೆಂದು ಕರೆಯುತ್ತಾರೆ.

ಉದಾ :-ಶಿವ, ಮಂಡ್ಯ,ಆನೆ,ಸೇಬು,

ನಾಮ ಪ್ರಕೃತಿಗಳಿಗೆ ವಿಭಕ್ತಿ ಪ್ರತ್ಯಯಗಳು ಸೇರಿ ನಾಮಪದವಾಗುತ್ತದೆ.

ಉದಾ:-

| ನಾಮಪ್ರಕೃತಿ | ಪ್ರತ್ಯಯ | ನಾಮಪದ |
|---|---|---|
| ನೆಲ | ಅನ್ನು | ನೆಲವನ್ನು |
| ಭೀಮ | ಅನ್ನು | ಭೀಮನನ್ನು |

**ಪ್ರಕೃತಿ:-**ಮನೆಗೆ ಎಂಬ ಪದವನ್ನು ನೋಡಿ ಇದರಲ್ಲಿ "ಗೆ"ಎಂಬ ಪ್ರತ್ಯಯವನ್ನು ತೆಗೆದು ಹಾಕಿದರೆ ಉಳಿಯುವುದು ಮನೆ ಎಂಬುದು ಪ್ರಕೃತಿ. ಹಾಗಾಗಿ ಪ್ರಕೃತಿ ಎಂದರೆ"ಒಂದು ಪದವನ್ನು ಒಡೆದು ನೋಡಿದರೆ ಅಲ್ಲಿ ಸ್ವತಂತ್ರವಾದ ಅರ್ಥವುಳ್ಳ ಒಂದು ಶಬ್ದವಿರುತ್ತದೆ ಅದಕ್ಕೆ ಪ್ರಕೃತಿ ಎಂದು ಕರೆಯುತ್ತಾರೆ.

**ನಾಮ ಪ್ರಕೃತಿ:-**ನಾಮಪದದ ಮೂಲದಲ್ಲಿರುವ ಪ್ರಕೃತಿಯನ್ನು ಹಾಗೂ ಕ್ರಿಯೆಯ ಅರ್ಥವನ್ನು ಕೊಡದೇ ಇರುವ ಶಬ್ಧಗಳಿಗೆ ನಾಮ ಪ್ರಕೃತಿಗಳು ಎಂದು ಹೆಸರು. ಉದಾ ;ಊರು, ಮರ,ನಗರ,ನೆಲ

## ನಾಮ ಪ್ರಕೃತಿಯ ವಿಧಗಳು

ನಾಮ ಪ್ರಕೃತಿಯ ವಿಧಗಳಲ್ಲಿ 2 ವಿಧ ಅವುಗಳೆಂದರೆ

1.ಸಹಜ ನಾಮಪ್ರಕೃತಿ

2.ಸಾಧಿತನಾಮ ಪ್ರಕೃತಿ

**1.ಸಹಜ ನಾಮಪ್ರಕೃತಿ:-**ವ್ಯಕ್ತಿ,ಪ್ರಾಣಿ,ವಸ್ತು,ಸ್ವಭಾವ,ದಿಕ್ಕು,ಅಳತೆ, ಸಂಖ್ಯೆ ಸೂಚಿಸುವ ಶಬ್ದಗಳನ್ನು ಸಹಜ ನಾಮಪ್ರಕೃತಿವೆಂದು ಕರೆಯುತ್ತಾರೆ. ಉದಾ:ಮನೆ,ನೆಲ,ಹೊಲ,ಜಲ,ಮರ,ಕಲ್ಲು, ಒಂದು,ಎರಡು,ಪೂರ್ವ.

**2.ಸಾಧಿತನಾಮ ಪ್ರಕೃತಿ:-**ಸಮಾಸ, ಕೃದಂತ,ತದ್ದಿತಾಂತ, ಪದಗಳನ್ನು ಸಾಧಿತನಾಮ ಪ್ರಕೃತಿ ಎಂದು ಕರೆಯುತ್ತಾರೆ. ಉದಾ:ಹೆಬ್ಬಾಗಿಲು,ಮಾಟ,ಓಟ,ಜಾಣ್ಮೆ, ದೊಡ್ಡತನ.



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

# ಸಹಜ ನಾಮಪ್ರಕೃತಿಯ ವಿಧಗಳು

**ಸಹಜ ನಾಮಪ್ರಕೃತಿಯಲ್ಲಿ 8 ವಿಧಗಳು ಅವುಗಳೆಂದರೆ**

**1.ವಸ್ತುವಾಚಕಗಳು**

**2.ಗುಣವಾಚಕಗಳು**

**3.ಸಂಖ್ಯಾವಾಚಕಗಳು**

**4.ಸಂಖ್ಯೇಯ ವಾಚಕಗಳು**

**5.ಭಾವನಾಮಗಳು**

**6.ಪರಿಮಾಣ ವಾಚಕಗಳು**

**7.ಪ್ರಕಾರ ವಾಚಕಗಳು**

**8.ದಿಗ್ವಾಚಕಗಳು**

**9.ಸರ್ವನಾಮಗಳು**

**1.ವಸ್ತುವಾಚಕಗಳು:–**ವಸ್ತುಗಳ ಹೆಸರನ್ನು ಸೂಚಿಸುವ ಪದಗಳನ್ನು ವಸ್ತುವಾಚಕವೆಂದು ಕರೆಯುತ್ತಾರೆ.

ಉದಾ : ಮನುಷ್ಯ, ಹೆಂಗಸು,ನಾಯಿ, ಬಸವ,

## ವಸ್ತುವಾಚಕಗಳಲ್ಲಿ 3 ವಿಧ ಅವುಗಳೆಂದರೆ

**1.ರೂಢನಾಮ:–**ರೂಢಿಯಿಂದ ಬಂದ ಸಾಮಾನ್ಯ ವಾಚಕಗಳನ್ನು ರೂಢನಾಮವೆನ್ನುತ್ತೇವೆ.

ಉದಾ: ನದಿ, ಪರ್ವತ, ಊರು, ದೇಶ, ಮನುಷ್ಯ, ವಿದ್ಯಾರ್ಥಿ, ಶಾಲೆ

**2.ಅಂಕಿತನಾಮ:–** ವ್ಯವಹಾರದ ಉಪಯೋಗಕ್ಕಾಗಿ ಇಟ್ಟುಕೊಂಡ ಹೆಸರುಗಳನ್ನು ಅಂಕಿತನಾಮವೆನ್ನುತ್ತೇವೆ. ಅಥವಾ ನಿರ್ದಿಷ್ಟವಾಗಿ ಗುರುತಿಸಲು ಇಟ್ಟ ಹೆಸರುಗಳನ್ನು ಅಂಕಿತನಾಮವೆನ್ನುತ್ತೇವೆ

ಉದಾ : ಸಹದೇವ, ಧರ್ಮರಾಯ ,ರಾಹುಲ, ಕಮಲಾಕ್ಷ, ರಾಮ, ಶಬರಿ, ದ್ರೋಣ,

**3.ಅನ್ವರ್ಥನಾಮ:–**ಅರ್ಥಕ್ಕೆ ಅನುಸಾರವಾಗಿ ಇಟ್ಟ ಹೆಸರುಗಳನ್ನು ಅನ್ವರ್ಥನಾಮವೆನ್ನುತ್ತೇವೆ.

ಉದಾ :–ವ್ಯಾಪಾರಿ, ವಿದ್ವಾಂಸ, ವಿಜ್ಞಾನಿ, ಪೂಜಾರಿ, ಕುರುಡ, ಎಳವ, ಶಿಕ್ಷಕ

**2.ಗುಣವಾಚಕಗಳು:–**ಯಾವುದೇ ವಸ್ತುಗಳ ಗುಣ,ರೀತಿ,ಸ್ವಭಾವ,ಮುಂತಾದವುಗಳನ್ನು ವಾಚಕಗಳನ್ನು



Use E-Papers, Save Tress
Above Line Hide When Print Out

ಗುಣವಾಚಕಗಳು ಎಂದು ಕರೆಯುತ್ತಾರೆ. ಉದಾ:ಒಳ್ಳೆಯ,ಕೆಟ್ಟ,ದೊಡ್ಡದು,ಹಳತು,ಸಣ್ಣ,ಚಿಕ್ಕ

**3.ಸಂಖ್ಯಾವಾಚಕಗಳು:**ಸಂಖ್ಯೆಯನ್ನು ಹೇಳುವ ಶಬ್ದಗಳೆಲ್ಲ ಸಂಖ್ಯಾವಾಚಕಗಳು ಎಂದು ಕರೆಯುತ್ತಾರೆ. ಉದಾ: ಒಂದು,ಎರಡು,ಮೂರು,ಐವತ್ತು,ಎಂಬತ್ತು,

**4.ಸಂಖ್ಯೇಯ ವಾಚಕಗಳು :–**ಸಂಖ್ಯೆಯಿಂದ ಕೂಡಿದ ವಸ್ತುಗಳನ್ನು ಹೇಳುವ ಶಬ್ದಗಳನ್ನು ಸಂಖ್ಯೇಯ ವಾಚಕಗಳು ಎಂದು ಕರೆಯುತ್ತಾರೆ. ಉದಾ:ಹನ್ನೆರಡನೆಯ, ಆರನೆಯ, ಎಂಬತ್ತನೆಯ, ಮೂವರು, ಇಬ್ಬರು, ಐವರು,


**5.ಭಾವನಾಮಗಳು:–**ವಸ್ತು ಮತ್ತು ಕ್ರಿಯೆಯ ಭಾವಗಳನ್ನು ತಿಳಿಸುವ ಪದಗಳನ್ನು ಭಾವನಾಮಗಳು ಎಂದು ಕರೆಯುತ್ತಾರೆ. ಉದಾ:–ಕೆಂಪು,ಹಿರಿಮೆ,ನೋಟ,ಮಾಟ,ಆಟ,ಬಿಳಿಪು,

**6.ಪರಿಮಾಣ ವಾಚಕಗಳು:–**ವಸ್ತುಗಳ ಸಾಮಾನ್ಯ ಅಳತೆ,ಪರಿಮಾಣ, ಗಾತ್ರ,–ಇತ್ಯಾದಿಗಳನ್ನು ಹೇಳುವ ಶಬ್ದಗಳನ್ನು ಪರಿಮಾಣ ವಾಚಕಗಳು ಎಂದು ಕರೆಯುತ್ತಾರೆ.
ಉದಾ:–ಅಷ್ಟು,ಎಷ್ಟು,ಹಲವು,ಅನಿತು,ಇನಿತು

**7.ಪ್ರಕಾರ ವಾಚಕಗಳು:–**ವಸ್ತುಗಳ ನಿಜ ಸ್ಥಿತಿ,ಅಥವಾ ರೀತಿಗಳನ್ನು ತಿಳಿಸುವ ಶಬ್ಧಗಳನ್ನು ಪ್ರಕಾರವಾಚಕಗಳು ಎಂದು ಕರೆಯುತ್ತಾರೆ. ಉದಾ:–ಅಂಥ, ಇಂಥ,ಎಂಥ,ಇಂಥದ್ದು,..........ಇತ್ಯಾದಿ

**8.ದಿಗ್ವಾಚಕಗಳು :–**ದಿಕ್ಕುಗಳ ಹೆಸರುಗಳನ್ನು ಸೂಚಿಸುವ ಪದಗಳನ್ನು ದಿಗ್ವಾಚಕಗಳು ಎಂದು ಕರೆಯುತ್ತಾರೆ. ಉದಾ:–ಪೂರ್ವ,ಪಶ್ಚಿಮ, ಉತ್ತರ, ದಕ್ಷಿಣ,ಮೂಡಣ,ಪಡುವಣ,ತೆಂಕಣ,ಬಡಗಣ,ಈಚೆ,ಆಚೆ,

**9.ಸರ್ವನಾಮಗಳು :–**ನಾಮಪದಗಳ ಬದಲಿಗೆ ಉಪಯೋಗಿಸುವ ಶಬ್ದಗಳನ್ನು ಸರ್ವನಾಮಗಳು ಎಂದು ಕರೆಯುತ್ತಾರೆ. ಉದಾ :–ಅವಳು,ಅವರು, ಇವರು, ಅವನು, ಇದು,




G.R.P.


Use E-Papers, Save Tress
Above Line Hide When Print Out

# ಸರ್ವನಾಮಗಳ ವಿಧಗಳು

ಸರ್ವನಾಮಗಳಲ್ಲಿ 3 ವಿಧ ಅವುಗಳೆಂದರೆ

**1.ಪುರುಷವಾಚಕ ಸರ್ವನಾಮ:-**ವ್ಯಕ್ತಿಗಳನ್ನು ಸೂಚಿಸುವ ಸರ್ವನಾಮಗಳಿಗೆ ಪುರುಷವಾಚಕ ಸರ್ವನಾಮಗಳೆಂದು ಕರೆಯುತ್ತಾರೆ.

## ಪುರುಷವಾಚಕ ಸರ್ವನಾಮದ ವಿಧಗಳು ಅವುಗಳೆಂದರೆ:-

1.ಉತ್ತಮ ಪುರುಷವಾಚಕ ಸರ್ವನಾಮ :-ನಾವು ಮಾತಾಡುತ್ತಿರುವವರನ್ನು ಸೂಚಿಸುತ್ತದೆ.

ಉದಾ:- ನಾನು, ನಾವು,

2.ಮಧ್ಯಮ ಪುರುಷವಾಚಕ ಸರ್ವನಾಮ :-ನೀವು ಯಾರೊಂದಿಗೆ ಮಾತಾಡುತ್ತಿದ್ದೇವೋ ಅವರನ್ನು ಸೂಚಿಸುತ್ತದೆ. ಉದಾ :-ನೀನು, ನೀವು

3.ಪ್ರಥಮ ಪುರುಷವಾಚಕ ಸರ್ವನಾಮ :-ತಾನು ಹಾಗೂ ಎದುರಿನ ವ್ಯಕ್ತಿ ಇಬ್ಬರನ್ನು ಹೊರತು ಪಡಿಸಿ ಮೂರನೇ ವಸ್ತು ವ್ಯಕ್ತಿಯನ್ನು ಸೂಚಿಸುತ್ತದೆ. ಉದಾ :ಅವನು, ಅವರು,ಅದು

**2.ಆತ್ಮಾರ್ಥಕ ಸರ್ವನಾಮಗಳು:-ತಾನು, ತಾವು, ತನ್ನ, ತಮ್ಮ**

**3.ಪ್ರಶ್ನಾರ್ಥಕ ಸರ್ವನಾಮಗಳು:-**ಪ್ರಶ್ನೆಗಳಿಗೆ ಸಂಬಂಧಿಸಿದ ಸರ್ವನಾಮಗಳನ್ನು ಪ್ರಶ್ನಾರ್ಥಕ ಸರ್ವನಾಮಗಳು ಎಂದು ಕರೆಯುತ್ತಾರೆ. ಉದಾ :-ಯಾರು? ಏಕೆ? ಎಲ್ಲಿ? ಯಾವಾಗ? ಯಾರಿಗೆ? ಏನು?

**"ವ್ಯಾಕರಣ ಅರಿಯದೆ ವ್ಯಾಸಂಗ ಮಾಡುವುದು**

**ಒಡಕು ದೋಣಿಯಲ್ಲಿ ನದಿ ದಾಟುವುದು**

**ಪಥ್ಯವಿಲ್ಲದೆ ಔಷಧ ಸೇವಿಸುವುದು"**



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

# ತದ್ಧಿತಾಂತಗಳು

ನಾಮಪದಗಳಿಗೆ ಬೇರೆಬೇರೆ ಅರ್ಥದಲ್ಲಿ ತದ್ಧಿತ ಪ್ರತ್ಯಯಗಳು ಸೇರಿ ಆಗುವ ಶಬ್ದಗಳು.

ತದ್ಧಿತ ಪ್ರತ್ಯಯಗಳು ನಾಮಪದಗಳ ಅಂತದಲ್ಲಿ ಉಳ್ಳ ಶಬ್ದರೂಪಗಳೇ "ತದ್ಧಿತಾಂತ"ಗಳು.

ತದ್ಧಿತ ಪ್ರತ್ಯಯಗಳು:-ಗಾರ, ಕಾರ,ಇಗ,ವಂತ,ಅಡಿಗ,ಇಕ,ಅಂತೆ, ವೊಲ್,ಇತ್ಯಾದಿ

(ನಾಮಪದಗಳ ಮೇಲೆ ಮಾತ್ರ ತದ್ಧಿತ ಪ್ರತ್ಯಯಗಳು ಬರುತ್ತವೆ)

## ತದ್ಧಿತಾಂತಗಳ ವಿಧಗಳು

ತದ್ಧಿತಾಂತಗಳಲ್ಲಿ 3 ವಿಧ ಅವುಗಳೆಂದರೆ

1.ತದ್ಧಿತಾಂತನಾಮ

2.ತದ್ಧಿತಾಂತ ಭಾವನಾಮ

3.ತದ್ಧಿತಾಂತ ಅವ್ಯಯ

**1.ತದ್ಧಿತಾಂತನಾಮ:-**ನಾಮಪದಗಳಿಗೆ ತದ್ಧಿತ ಪ್ರತ್ಯಯಗಳು ಸೇರಿ ಆಗುವ ಪದಗಳಿಗೆ ತದ್ಧಿತಾಂತನಾಮವೆಂದು ಕರೆಯುತ್ತಾರೆ.

ತದ್ಧಿತ ಪ್ರತ್ಯಯಗಳು:- ಗಾರ, ಕಾರ,ಇಗ,ವಂತ,ಅಡಿಗ,ವಳ,ಅಳಿ,ಗುಳಿ,ಅರ,ಅನೆಯ ಇತ್ಯಾದಿ.

| ತದ್ಧಿತ ಪ್ರತ್ಯಯಗಳು | ನಾಮಪದ | ಅರ್ಥ | ತದ್ಧಿತಾಂತನಾಮ |
|---|---|---|---|
| ಗಾರ | ಬಳೆಯನ್ನು | ಮಾರುವವನು | ಬಳೆಗಾರ |
| ಕಾರ | ಕೋಲನ್ನು | ಹಿಡಿಯುವವನು | ಕೋಲುಕಾರ |
| ಇಗ | ಕನ್ನಡವನ್ನು | ಬಲ್ಲವನು | ಕನ್ನಡಿಗ |
| ವಂತ | ಹಣವನ್ನು | ಉಳ್ಳವನು | ಹಣವಂತ |
| ವಳ | ಮಡಿಯನ್ನು | ಮಾಡುವವನು | ಮಡಿವಾಳ |
| ಅಡಿಗ | ಹೂವನ್ನು | ಕಟ್ಟುವವನು | ಹೂವಾಡಿಗ |
| ಅಳಿ | ಮಾತನ್ನು | ಹೆಚ್ಚು ಆಡುವವನು | ವಾತಾಳಿ/ವಾಚಾಳಿ |
| ಗುಳಿ | ಲಂಚವನ್ನು | ತೆಗೆದುಕೊಳ್ಳುವವನು | ಲಂಚಗುಳಿ |
| ಅರ | ಕುಂಭವನ್ನು | ಮಾಡುವವನು | ಕುಂಬಾರ |
| ಅನೆಯ | ಹತ್ತು | ಸಂಖ್ಯೆಯುಳ್ಳದ್ದು | ಹತ್ತನೆಯ |



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

## 2.ತದ್ಧಿತಾಂತ ಭಾವನಾಮ:–ನಾಮಪದಗಳ ಮುಂದೆ ಭಾವಾರ್ಥಗಳಲ್ಲಿ –ತನ,ಇಕೆ,ಪು,ಮೆ,

ಮೊದಲಾದ ತದ್ಧಿತ ಪ್ರತ್ಯಯಗಳು ಸೇರಿ ಆಗುವ ಶಬ್ಧಗಳನ್ನು ತದ್ಧಿತಾಂತ ಭಾವನಾಮವೆಂದು ಕರೆಯುತ್ತಾರೆ.

(ತದ್ಧಿತಾಂತ ಭಾವನಾಮ ವ್ಯಕ್ತಿಯ ಸ್ಥಿತಿಯನ್ನು ನೆನೆಪಿಸುತ್ತವೆ)

| ತದ್ಧಿತ ಪ್ರತ್ಯಯಗಳು | ನಾಮಪದ | ಭಾವಾರ್ಥ | ತದ್ಧಿತಾಂತ ಭಾವನಾಮ |
|---|---|---|---|
| ತನ | ಜಾಣನ | ಭಾವ | ಜಾಣತನ |
| ಇಕೆ | ಚೆಲುವಿನ | ಭಾವ | ಚೆಲುವಿಕೆ |
| ಪು | ಕರಿದರ | ಭಾವ | ಕಪ್ಪು |
| ಮೆ | ಪಿರಿದರ | ಭಾವ | ಪೆರ್ಮೆ |

## 3.ತದ್ಧಿತಾಂತ ಅವ್ಯಯ:– ನಾಮಪದಗಳ ಮುಂದೆಅಂತೆ,ವೋಲ್,ವೋಲು,ತನಕ,ವರೆಗೆ,ಇಂತ,ಆಗಿ,

ಓಸುಗ,ಮುಂತಾದ ತದ್ಧಿತ ಪ್ರತ್ಯಯಗಳು ಸೇರಿ ತದ್ಧಿತಾಂತ ಅವ್ಯಯವೆಂದು ಕರೆಯುತ್ತಾರೆ.

| ನಾಮಪದ | ತದ್ಧಿತ ಪ್ರತ್ಯಯಗಳು | ತದ್ಧಿತಾಂತ ಅವ್ಯಯ |
|---|---|---|
| ಚಂದ್ರ | ಅಂತೆ | ಚಂದ್ರನಂತೆ |
| ಅವನ | ವೋಲ್ | ಅವನವೋಲ್ |
| ನದಿಯ | ವೋಲು | ನದಿಯವೋಲು |
| ಶಾಲೆಯ | ತನಕ | ಶಾಲೆಯತನಕ |
| ಮನೆಯ | ವರೆಗೆ | ಮನೆಯವರೆಗೆ |
| ಅವಳ | ಮಟ್ಟಿಗೆ | ಅವಳಮಟ್ಟಿಗೆ |
| ಅದಕ್ಕೆ | ಇಂತ | ಅದಕ್ಕಿಂತ |
| ನಿನಗೆ | ಆಗಿ | ನಿನಗಾಗಿ |
| ಅವನಿಗೆ | ಓಸುಗ | ಅವನಿಗೋಸುಗ |
| ಬೆಕ್ಕಿನ | ಓಸ್ಕರ | ಬೆಕ್ಕಿಗೋಸ್ಕರ |
| ಅರ್ಜುನನ | ಸಲುವಾಗಿ | ಅರ್ಜುನನ ಸಲುವಾಗಿ |
| ಆಕಾಶದ | ಹಾಗೆ | ಆಕಾಶದ ಹಾಗೆ |



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

# ಕ್ರಿಯಾಪದಗಳು Verbs

ಕ್ರಿಯೆಯ ಅರ್ಥವನ್ನು ಸಂಪೂರ್ಣವಾಗಿ ಕೊಡುವ ಪದಗಳನ್ನು ಕ್ರಿಯಾಪದ ಎಂದು ಕರೆಯುತ್ತಾರೆ.

ಉದಾ:-ಭೂಮಿಕಾ ಆಟವನ್ನು ಆಡುತ್ತಾಳೆ. ನಿಲ್ಲಿಸು,ನಡೆಸು, ಕಟ್ಟುವುದು,ಮುಟ್ಟೋಣ,

ಗಿಳಿಯು ಹಣ್ಣನ್ನು ತಿಂದಿತು.

ತೇಜಸ್ ಶಾಲೆಗೆ ಹೋಗುತ್ತಾನೆ.

ಧಾತು:- ಕ್ರಿಯಾಪದದ ಮೂಲರೂಪವನ್ನು ಧಾತು ಎಂದು ಕರೆಯುತ್ತಾರೆ.

ಉದಾ:-ಮಾಡು,ನೋಡು,ಹೋಗು,ತಿನ್ನು,ಬರೆ,ಮಲಗು,ನಿಲ್ಲು,ನಡೆ,

ಕರ್ತೃಪದ ಎಂದರೆ :-ಕ್ರಿಯೆಯನ್ನು ಮಾಡಿದವರನ್ನು ಸೂಚಿಸುವ ಪದಗಳನ್ನು ಕರ್ತೃಪದವೆಂದು ಕರೆಯುತ್ತಾರೆ.

ಕರ್ಮಪದ ಎಂದರೆ:-ಆಯಾ ಕೆಲಸಕ್ಕೆ ಪೂರಕವಾಗಿ ಏನನ್ನು ಎಂಬ ಪ್ರಶ್ನೆಯನ್ನು ತೋರುವುದೇ ಕರ್ಮಪದವೆಂದು ಕರೆಯುತ್ತಾರೆ.

ಉದಾ:-1,ರೋಜಾಳು ಗೆಳತಿಯನ್ನು ಮೆಚ್ಚಿದಳು.

2.ಪಾರಿವಾಳವು ಕಾಳುಗಳನ್ನು ನೋಡಿತು.

3.ಗೆಳೆಯರು ಆಟವನ್ನು ಆಡಿದರು.

| ಕ್ರ.ಸ | ಕರ್ತೃಪದ | ಕರ್ಮಪದ | ಕ್ರಿಯಾಪದಗಳು |
|---|---|---|---|
| 01 | ರೋಜಾ | ಗೆಳತಿಯನ್ನು | ಮೆಚ್ಚಿದಳು |
| 02 | ಪಾರಿವಾಳ | ಕಾಳುಗಳನ್ನು | ನೋಡಿತು. |
| 03 | ಗೆಳೆಯರು | ಆಟವನ್ನು | ಆಡಿದರು |

1.ಸಕರ್ಮಕ ಧಾತುಗಳು:-ಯಾವ ಒಂದು ವಾಕ್ಯದಲ್ಲಿ ಕರ್ತೃ,ಕರ್ಮ, ಕ್ರಿಯಾಪದ ಮೂರು ಇರುತ್ತದೆಯೋ ಅದು ಸಕರ್ಮಕ ಧಾತುವೆಂದು ಕರೆಯುತ್ತಾರೆ. ಉದಾ: ತಿನ್ನು,ತಿದ್ದು,ಮುಚ್ಚು,ಬಿಡು,ದಾಟು,ಕೊಡು,ಉಜ್ಜು

| ಕರ್ತೃಪದ | ಕರ್ಮಪದ | ಕ್ರಿಯಾಪದ | ಧಾತು |
|---|---|---|---|
| ದೇವರು | ಲೋಕವನ್ನು | ರಕ್ಷಿಸುವನು | ರಕ್ಷಿಸು |
| ಶಿಲ್ಪಿಗಳು | ಗುಡಿಯನ್ನು | ಕಟ್ಟಿದರು | ಕಟ್ಟು |
| ವಿದ್ಯಾರ್ಥಿಗಳು | ಪಾಠವನ್ನು | ಓದಿದರು | ಓದು |
| ಹುಡುಗರು | ಮನೆಯನ್ನು | ಸೇರಿದರು | ಸೇರು |



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

2. ಅಕರ್ಮಕ ಧಾತುಗಳು :- ಯಾವ ವಾಕ್ಯದಲ್ಲಿ ಕರ್ಮ ಸೂಚಕವಿಲ್ಲದೆ ಕೇವಲ ಕರ್ತೃಕಾರಕ, ಕ್ರಿಯಾಕಾರಕ ಮಾತ್ರ ಇರುತ್ತದೆಯೋ ಅದು ಅಕರ್ಮಕ ಧಾತುಗಳೆಂದು ಕರೆಯುತ್ತಾರೆ.

ಉದಾ: ಬಾಳು, ಹೋಗು,ಬರು,ನಾಚು,ಮಲಗು,ಬೀಳು,ಏರು,ಹೆದರು,ಇಳಿ

| ಕರ್ತೃಪದ | ಕ್ರಿಯಾಪದ | ಧಾತು |
|---|---|---|
| ಕೂಸು | ಮಲಗಿತು | ಮಲಗು |
| ರಾಮನು | ಓಡಿದನು | ಓಡು |
| ಆಕಾಶ | ಹೊಳೆಯುತ್ತದೆ | ಹೊಳೆ |
| ಅವನು | ಬದುಕಿದನು | ಬದುಕು |
| ಗಿಡವು | ಹುಟ್ಟಿತ್ತು | ಹುಟ್ಟು |

# ಕಾಲಸೂಚಕ ಪ್ರತ್ಯಯಗಳು

1.ವರ್ತಮಾನಕಾಲ:ಈಗ ನಡೆಯುತ್ತಿರುವ ಕಾಲ

ಕಾಲ ಸೂಚಕ ಪ್ರತ್ಯಯ "ಉತ್ತ"

೨.ಭೂತಕಾಲ: ಹಿಂದೆ ನಡೆದ ಕಾಲ.

ಕಾಲ ಸೂಚಕ ಪ್ರತ್ಯಯ "ದ"

೩.ಭವಿಷ್ಯತ್ ಕಾಲ: ಮುಂದೆ ನೆಡೆಯುವ ಕಾಲ.

ಕಾಲ ಸೂಚಕ ಪ್ರತ್ಯಯ "ವ"

## ಋತುಗಳು

1.ವಸಂತ ಋತು

2.ಗ್ರೀಷ್ಮ ಋತು

3.ವರ್ಷ ಋತು

4.ಶರ ದೃತು

5.ಹೇಮಂತ ಋತು

6.ಶಿಶಿರ ಋತು



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

# ಕರ್ತರಿ ಮತ್ತು ಕರ್ಮಣಿ ಪ್ರಯೋಗ(Active&Passive voice)

**೧.ಕರ್ತರಿ ಪ್ರಯೋಗ:** ಕರ್ತರಿ ಎಂದರೆ ಕರ್ತೃ ಎಂದರ್ಥ. ಕರ್ತೃಪದವು ಪ್ರಥಮಾ ವಿಭಕ್ತಿಯೊಂದಿಗೆ ಪ್ರಾಧಾನ್ಯವನ್ನು ಹಾಗೂ ಕರ್ಮಪದವು ದ್ವಿತೀಯಾವಿಭಕ್ತಿ ಹೊಂದಿ ,ಕ್ರಿಯಾಪದವು ಕರ್ತೃವಿನ ಲಿಂಗ,ವಚನವನ್ನು ಅನುಸರಿಸುವಂತಿದ್ದರೆ ಈ ಪ್ರಯೋಗ ಕರ್ತರಿ ಪ್ರಯೋಗ ಎನ್ನುತ್ತೇವೆ.

ಕ್ರಿಯಾಪದವು ವಾಕ್ಯಗಳಲ್ಲಿ ಕರ್ತೃ ಪದವನ್ನು ಪ್ರಧಾನವಾಗಿ ಅನುಸರಿಸುತ್ತಿದ್ದರೆ ಅದನ್ನು ಕರ್ತರಿ ಪ್ರಯೋಗ ಎನ್ನುತ್ತೇವೆ

ಉದಾ:1.ಅಣ್ಣನು ಅನ್ನವನ್ನು ಉಂಡನು. 2.ಕೃಷ್ಣನು ಕಾಳಿಂಗನನ್ನು ಮರ್ದಿಸಿದನು.

3.ಭೀಮನು ಅನ್ನವನ್ನು ತಿಂದನು. 4.ಅಕ್ಕ ತಂಗಿಯನ್ನು ಕರೆದಳು.

5.ರಾಮನು ರಾವಣನನ್ನು ಕೊಂದನು.

**೨.ಕರ್ಮಣಿ ಪ್ರಯೋಗ:–**ಕರ್ಮಪದವು ಪ್ರಾಧಾನ್ಯವನ್ನು ಹೊಂದಿದ್ದು, ಪ್ರಥಮಾ ವಿಭಕ್ತ್ಯಂತವಾಗಿರುತ್ತದೆ. ಕರ್ತೃಪದವು ತೃತೀಯಾ ವಿಭಕ್ತಿಯಿಂದ ಅಂತ್ಯಗೊಂಡು, ಕ್ರಿಯಾಪದದ ಅಂತ್ಯದಲ್ಲಿ ಅಲ್ಪಡು/ಅಲ್ಪಟ್ಟಿತು ಎಂಬ ಪ್ರತ್ಯಯಗಳೊಂದಿಗೆ ಆಗುವ ಪ್ರಯೋಗವೇ ಕರ್ಮಣಿ ಪ್ರಯೋಗ ಎನ್ನುತ್ತೇವೆ.

ಕರ್ಮಪದವನ್ನು ಅನುಸರಿಸಿ ಕ್ರಿಯಾಪದ ಪ್ರಯೋಗವಾಗುವುದಕ್ಕೆ ಕರ್ಮಣಿ ಪ್ರಯೋಗ ಎನ್ನುತ್ತೇವೆ.

ಉದಾ:1.ಭೀಮನಿಂದ ಅನ್ನವು ತಿನ್ನಲ್ಪಟ್ಟಿತು. 2.ಕೃಷ್ಣನಿಂದ ಕಾಳಿಂಗವು ಮರ್ದಿಸಲ್ಪಟ್ಟಿತು.

3.ಅಕ್ಕನಿಂದ ತಂಗಿಯು ಕರೆಯಲ್ಪಟ್ಟಳು. 4.ಕವಿಯಿಂದ ಕಾವ್ಯವು ಬರೆಯಲ್ಪಡುತ್ತದೆ.

5.ಅಣ್ಣನಿಂದ ಅನ್ನವು ಉಣ್ಣಲ್ಪಟ್ಟಿತ್ತು. 6.ರಾವಣನು ರಾಮನಿಂದ ಕೊಲ್ಲಲ್ಪಟ್ಟನು.

## ಕ್ರಿಯಾಪದದ ಮೂಲರೂಪಗಳು

**1.ವಿಧ್ಯರ್ಥಕ ಕ್ರಿಯಾಪದ:–**ಆಜ್ಞೆ,ಆಶೀರ್ವಾದ,ಆಶೈಕೆ,ಅಪ್ಪಣೆ ಸಮ್ಮತಿ ಇತ್ಯಾದಿ ಅರ್ಥಗಳನ್ನು ಹೇಳುವ ಕ್ರಿಯಾಪದಗಳಿಗೆ ವಿಧ್ಯರ್ಥಕ ಕ್ರಿಯಾಪದವೆಂದು ಕರೆಯುತ್ತಾರೆ.

ಉದಾ: ಮಾಡಲಿ, ತಿನ್ನಲಿ, ಓದಲಿ, ನೋಡಲಿ, ಹೋಗಲಿ,ಕೇಳಲಿ, ಬರೆಯಲಿ,ಹಾಡಲಿ,ಆಗಲಿ,ಬರಲಿ

**2.ನಿಷೇಧಾರ್ಥಕ ಕ್ರಿಯಾಪದ:–**ಕ್ರಿಯೆ ನಡೆಯದೆ ಇರುವುದನ್ನು ಸೂಚಿಸುವ ಕ್ರಿಯಾಪದವನ್ನು "ನಿಷೇಧಾರ್ಥಕ ಕ್ರಿಯಾಪದ"ವೆಂದು ಕರೆಯುತ್ತಾರೆ.



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

ಉದಾ:ತಿನ್ನನು,ಹೋಗರು,ಕೇಳರು,ನೋಡರು,ಮಾಡರು,ಹೋಗದು,ತಿನ್ನರು,ಆಗದು,ಬಾರಳು,ಹೇಳರು

**3.ಸಂಭಾವನಾರ್ಥಕ ಕ್ರಿಯಾಪದ:**–ಕ್ರಿಯೆ ನಡೆಯುವ ಬಗ್ಗೆ ಸಂದೇಹ ಅಥವಾ ಊಹೆಯನ್ನು ವ್ಯಕ್ತಪಡಿಸುವಂತಹ ಕ್ರಿಯಾಪದವನ್ನು "ಸಂಭಾವನಾರ್ಥಕ ಕ್ರಿಯಾಪದ"ವೆಂದು ಕರೆಯುತ್ತಾರೆ.

ಉದಾ:ಬಂದಾರು,ತಿಂದಾರು,ಮಾಡಿಯಾರು,ಕೇಳಿಯಾರು,ನೋಡಿಯಾರು,ನೋಡೀತು,ಹೋದೀತು,ತಿಂದಾಳು, ಬಂದಾಳು,ಆಗೀತು,ಹೇಳಿಯಾರು,ಬರೆದಾರು,

| ವಿಧ್ಯರ್ಥಕ ಕ್ರಿಯಾಪದ | ನಿಷೇಧಾರ್ಥಕ ಕ್ರಿಯಾಪದ | ಸಂಭಾವನಾರ್ಥಕ ಕ್ರಿಯಾಪದ |
|---|---|---|
| ಬರೆಯಲಿ | ಬರೆಯನು | ಬರೆದಾನು |
| ಬನ್ನಿರಿ | ಬಾರರು/ಬರರು | ಬಂದಾರು |
| ಹಾಡಲಿ | ಹಾಡರು | ಹಾಡಿಯಾರು |
| ಓದಲಿ | ಓದಳು | ಓದಿಯಾಳು |

# ಚಾಂದ್ರಮಾನ ಮಾಸಗಳು

| | |
|---|---|
| 1.ಚೈತ್ರ ಮಾಸ | ಮಾರ್ಚ್–ಎಪ್ರಿಲ್ |
| 2.ವೈಶಾಖ ಮಾಸ | ಎಪ್ರಿಲ್–ಮೇ |
| 3.ಜ್ಯೇಷ್ಠ ಮಾಸ | ಮೇ–ಜೂನ್ |
| 4.ಆಷಾಢ ಮಾಸ | ಜೂನ್–ಜುಲೈ |
| 5.ಶ್ರಾವಣ ಮಾಸ | ಜುಲೈ–ಆಗಸ್ಟ್ |
| 6.ಭಾದ್ರಪದ ಮಾಸ | ಆಗಸ್ಟ್–ಸೆಪ್ಟೆಂಬರ್ |
| 7ಅಶ್ವೀಜ ಮಾಸ | ಸೆಪ್ಟೆಂಬರ್–ಅಕ್ಟೋಬರ್ |
| 8.ಕಾರ್ತೀಕ ಮಾಸ | ಅಕ್ಟೋಬರ್–ನವೆಂಬರ್ |
| 9.ಮಾರ್ಗಶಿರ ಮಾಸ | ನವೆಂಬರ್–ಡಿಸೆಂಬರ್ |
| 10.ಪುಷ್ಯ ಮಾಸ | ಡಿಸೆಂಬರ್–ಜನವರಿ |
| 11.ಮಾಘ ಮಾಸ | ಜನವರಿ–ಫೆಬ್ರವರಿ |
| 12.ಫಾಲ್ಗುಣ | ಫೆಬ್ರವರಿ–ಮಾರ್ಚ |



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

# ಕೃದಂತಗಳು

ಧಾತುಗಳಿಗೆ ಕೃತ್ ಪ್ರತ್ಯಯಗಳು ಸೇರಿದಾಗ ಉಂಟಾಗುವ ಪದರಚನೆಗೆ ''ಕೃದಂತ''ಗಳು ಅಥವಾ ''ಕೃನ್ನಾಮ''ವೆಂದು ಕರೆಯುತ್ತಾರೆ.

(ಕ್ರಿಯಾಪದಗಳನ್ನು ನೆನಪಿಸಿಕೊಳ್ಳಿ)

# ಕೃದಂತಗಳ ವಿಧಗಳು

ಕೃದಂತಗಳಲ್ಲಿ ೩ ವಿಧ ಅವುಗಳೆಂದರೆ

1.ಕೃದಂತ ನಾಮ

2.ಕೃದಂತ ಭಾವನಾಮ

3.ಕೃದಂತಾವ್ಯಯ

**1.ಕೃದಂತ ನಾಮ:-**ಧಾತುಗಳಿಗೆ ಕರ್ತೃ ಮೊದಲಾದ ಅರ್ಥದಲ್ಲಿ ''ಅ'' ಎಂಬ ಕೃತ್ ಪ್ರತ್ಯಯ ಬರುವುದು ಧಾತುವಿಗೂ ಮತ್ತು ಅಖ್ಯಾತ ಪ್ರತ್ಯಯಕ್ಕೂ ಮಧ್ಯದಲ್ಲಿ ಕಾಲಸೂಚಕ ಪ್ರತ್ಯಯ ಸೇರಿಕೊಳ್ಳುತ್ತದೆ ಇವುಗಳನ್ನು ಕೃದಂತ ನಾಮವೆಂದು ಕರೆಯುತ್ತಾರೆ.

| ಧಾತು ಪದ | ಕಾಲಸೂಚಕ ಪ್ರತ್ಯಯ | ಆಖ್ಯಾತ | ಕೃದಂತ ನಾಮ |
|---|---|---|---|
| ಓದು | ವ | ಅ | ಓದುವ |
| ನಿಲ್ಲು | ವ | ಅ | ನಿಲ್ಲುವ |
| ಬರೆ | ಉವ | ಅ | ಬರೆಯುವ |
| ಹೊಳೆ | ಉವ | ಅ | ಹೊಳೆಯುವ |
| ನೋಡು | ದ | ಅ | ನೋಡದ |
| ಕೇಳು | ದ | ಅ | ಕೇಳಿದ |
| ಮಾಡು | ಆದ | ಅ | ಮಾಡದ |
| ಹೊಗಳು | ಆದ | ಅ | ಹೊಗಳದ |

ಆಖ್ಯಾತ ಪ್ರತ್ಯಯ:-ಕ್ರಿಯಾಪದದ ಕೊನೆಯಲ್ಲಿ ಹತ್ತುವ ಪ್ರತ್ಯಯಗಳನ್ನು ಆಖ್ಯಾತ ಪ್ರತ್ಯಯವೆಂದು ಕರೆಯುತ್ತಾರೆ.



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

**2.ಕೃದಂತ ಭಾವನಾಮ:-** ಧಾತುಗಳಿಗೆ ಭಾವಾರ್ಥದಲ್ಲಿ ಕೃತ್ ಪ್ರತ್ಯಯಗಳು ಸೇರಿದಾಗ ಉಂಟಾಗುವ ಪದ ರಚನೆಗೆ ಕೃದಂತ ಭಾವನಾಮವೆಂದು ಕರೆಯುತ್ತಾರೆ.

[ಗುರುತಿಸುವಿಕೆ:-ಕ್ರಿಯೆಯ ಭಾವವನ್ನು ನೆನೆಯಿರಿ] ಓಡುವ ಕ್ರಿಯೆಯ ಭಾವ-ಓಟ

## ಕೃದಂತ ಭಾವನಾಮದ ಕೃತ್ ಪ್ರತ್ಯಯಗಳು:-

**ಇಕೆ,ವಣಿಗೆ,ವಳಿಕೆ,ವಳಿ,ಟ,ತ,ಪು,ಅಕೆ,ಎ,ಉ,ಉದು,ಗೆ,ಇಗೆ,ವು,ಅವು,**

| ಧಾತು ಪದ | ಕೃತ್ ಪ್ರತ್ಯಯ | ಕೃದಂತ ಭಾವನಾಮ |
|---|---|---|
| ನೋಡು | ಇಕೆ | ನೋಡುವಿಕೆ,ಮಾಡುವಿಕೆ,ಹುಡುಕುವಿಕೆ |
| ಬರೆ | ವಣಿಗೆ | ಬರವಣಿಗೆ,ಉರವಣಿಗೆ,ಮೆರವಣಿಗೆ, |
| ತಿಳಿ | ವಳಿಕೆ | ತಿಳುವಳಿಕೆ,ನಡವಳಿಕೆ,ಕಳುವಳಿಕೆ |
| ನಡೆ | ವಳಿ | ನಡಾವಳಿ,ಸಲುವಳಿ, |
| ಮಾಡು | ಟ | ಮಾಟ,ನೋಟ,ಕೂಟ,ಆಟ,ಓಟ |
| ಕುಡಿ | ತ | ಕುಡಿತ,ಎಸೆತ,ಕೊರೆತ,ಸೆಳೆತ |
| ಹೊಳೆ | ಪು | ಹೊಳಪು,ನೆನಪು,ತೀರ್ಪು |
| ಬಳಸು | ಅಕೆ | ಬಳಕೆ,ಬೆರಕೆ,ಮೊಳಕೆ |
| ನಗು | ಎ | ನಗೆ,ಹೊಗೆ,ಹೊರೆ |
| ನೋವು | ಉ | ನೋವು,ಕಾವು |
| ಉಡು | ಉದು | ಉಡುವುದು,ಮಾಡುವುದು,ಬೇಡುವುದು |
| ತೊಡು | ಗೆ | ತೊಡುಗೆ,ಉಡುಗೆ |
| ಹಾಸು | ಇಗೆ | ಹಾಸಿಗೆ,ಉಡಿಗೆ, |
| ದಣಿ | ವು | ಸಾವು, ನೋವು,ಕಾವು,ದಣಿವು, |
| ಸೆಳೆ | ಅವು | ಬರವು,ಸೆಳವು,ಒಲವು,ತೆರೆವು |



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

**3.ಕೃದಂತಾವ್ಯಯ :–**ಧಾತುಗಳಿಂದ ಹುಟ್ಟಿ ಅವ್ಯಯದ ಗುಣವನ್ನು ಪಡೆದ ಪದಗಳನ್ನು ಕೃದಂತಾವ್ಯಯವೆಂದು ಕರೆಯುತ್ತಾರೆ.

## ಕೃದಂತಾವ್ಯಯದ ಕೃತ್ ಪ್ರತ್ಯಯಗಳು:–

## ಉತ್ತ,ಅದೆ,ದರೆ,ಅಲು,ಅಲಿಕೆ,ಅ,ಇ,ದು

| ಧಾತು ಪದ | ಕೃತ್ ಪ್ರತ್ಯಯ | ಕೃದಂತಾವ್ಯಯ |
|---|---|---|
| ಮಾಡು | ಉತ್ತ | ಮಾಡುತ್ತ,ಬರೆಯುತ್ತ,ಹಾಡುತ್ತ |
| ನೋಡು | ಅದೆ | ನೋಡದೆ,ತಿನ್ನದೆ,ಕೇಳದೆ, |
| ಕೇಳು | ದರೆ | ಕೇಳಿದರೆ,ಹಾಡಿದರೆ,ನೋಡಿದರೆ, |
| ಬರು | ಅಲು | ಬರಲು,ಜಿಗಿಯಲು,ಕರೆಯಲು |
| ಮಾಡು | ಅಲಿಕೆ | ಮಾಡಲಿಕ್ಕೆ,ನೋಡಲಿಕ್ಕೆ, ಕೇಳಲಿಕ್ಕೆ |
| ಬರೆ | ದು | ಬರೆದು ತಿಳಿದು, ಕೊಂದು |

## ಪ್ರಸಿದ್ಧ ವಚನಕಾರರ ಅಂಕಿತನಾಮ

| ವಚನಕಾರರ ಹೆಸರು | ಅಂಕಿತನಾಮ |
|---|---|
| ಬಸವಣ್ಣ | ಕೂಡಲಸಂಗಮದೇವ |
| ಸಿದ್ಧರಾಮ | ಕಪಿಲಸಿದ್ಧ ಮಲ್ಲಿಕಾರ್ಜುನ |
| ಅಲ್ಲಮಪ್ರಭು | ಗುಹೇಶ್ವರ |
| ಚೆನ್ನಬಸವಣ್ಣ | ಕೂಡಲ ಚೆನ್ನಸಂಗಯ್ಯ |
| ಜೇಡರದಾಸಿಮಯ್ಯ | ರಾಮನಾಥ |
| ನಗೆಯ ಮಾರಿ ತಂದೆ | ಆತುರ ವೈರಿ ಮಾರೇಶ್ವರಾ |
| ಸಕಲೇಶ ಮಾದರಸ | ಸಕಲೇಶ್ವರಾ |
| ಆದಯ್ಯ | ಸೌರಾಷ್ಟ್ರ ಸೋಮೇಶ್ವರ |
| ನಿಜಗುಣಶಿವಯೋಗಿ | ಗುರುಶಂಭುಲಿಂಗ |



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

# ವಾಕ್ಯಗಳು Sentences

**ಪದ**:-ಅಕ್ಷರ ಅಕ್ಷರಗಳು ಕೂಡಿ ಒಂದು ಅರ್ಥಪೂರ್ಣ ಘಟಕವಾದರೆ ಅದನ್ನು ಪದವೆಂದು ಕರೆಯುತ್ತಾರೆ.

**ವಾಕ್ಯ:**-ಕರ್ತೃ,ಕರ್ಮ,ಕ್ರಿಯಾಪದಗಳಿಂದ ಕೂಡಿರುವ ಪದಗಳ ಗುಂಪಿಗೆ ವಾಕ್ಯವೆಂದು ಕರೆಯುತ್ತಾರೆ.

ಒಂದು ಸಂಪೂರ್ಣ ಅರ್ಥ ನೀಡುವ ಪದಗಳ ವ್ಯವಸ್ಥಿತ ಜೋಡಣೆಯೇ ವಾಕ್ಯವೆಂದು ಕರೆಯುತ್ತಾರೆ.

| | ಕರ್ತೃ | ಕರ್ಮ | ಕ್ರಿಯಾಪದ |
|---|---|---|---|
| ಉದಾ:- | ದೇವರು | ಎಲ್ಲರನ್ನು | ಕಾಪಾಡುತ್ತಾನೆ, |

೧. ಈಗ ಬಂದನು (ಕರ್ತೃ ಪದ ಇಲ್ಲ)

೨. ಅವನು ಈಗ ತಾನೆ ಬಂದನು(ಕರ್ಮಪದ ಇಲ್ಲ)

೩,ಹುಡುಗ ಬುದ್ಧಿವಂತ(ಕ್ರಿಯಾಪದ ಇಲ್ಲ) ಇಂತಹ ವಾಕ್ಯಗಳನ್ನು "ಅಧ್ಯಾಹಾರಯುಕ್ತ" ವಾಕ್ಯಗಳು ಎಂದು ಕರೆಯುತ್ತಾರೆ.

## ವಾಕ್ಯಗಳ ವಿಧಗಳು

ವಾಕ್ಯಗಳ ವಿಧಗಳಲ್ಲಿ ೩ ವಿಧ ಅವುಗಳೆಂದರೆ

1.ಸಾಮಾನ್ಯ ವಾಕ್ಯ **Simple sentence**

2.ಸಂಯೋಜಿತ ವಾಕ್ಯ **compound sentence**

3.ಮಿಶ್ರವಾಕ್ಯ **complex sentence**

**1.ಸಾಮಾನ್ಯ ವಾಕ್ಯ:**-ಒಂದು ಪೂರ್ಣಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯವನ್ನು ಸಾಮಾನ್ಯವಾಕ್ಯವೆಂದು ಕರೆಯುತ್ತಾರೆ.

ಉದಾ:-1.ವಿದ್ಯಾರ್ಥಿಗಳು ಶಾಲೆಗೆ ಬಂದರು.

2.ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತು.

3.ಕಾರವಾರದಲ್ಲಿ ಉದ್ಯೋಗಿಯಾಗಿದ್ದ ವೀರೇಶ್ವರ ಪಾಠಕ್ ಮಲೇರಿಯಾದಿಂದ ಬಳಲಿದರು.

4.ವೀರೇಶ್ವರ ಪಾಠಕ್ ರನ್ನು ಬೆಂಗಳೂರಿಗೆ ವರ್ಗಾವಣೆ ಮಾಡಲಾಯಿತು.



Use E-Papers, Save Tress
Above Line Hide When Print Out

**2.ಸಂಯೋಜಿತ ವಾಕ್ಯ:-**ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು ಸಂಯೋಜಿತ ವಾಕ್ಯವೆಂದು ಕರೆಯುತ್ತಾರೆ.

**(ಆದರೆ,ಆದ್ದರಿಂದ,ಹೀಗಾಗಿ,ಏಕೆಂದರೆ,ಆದರಿಂದ ಈ ಮೊದಲಾದ ಶಬ್ಧಗಳು ಎರಡು ವಾಕ್ಯಗಳ ನಡುವೆ ಸಂಬಂಧ ಕಲ್ಪಿಸುತ್ತವೆ.)**

**ಉದಾ:-1**. **ಕಾರವಾರದಲ್ಲಿ ಮಲೇರಿಯಾ** ಹಬ್ಬಿತ್ತು;**ಆದ್ದರಿಂದ** ವೀರೇಶ್ವರ **ಪಾಠಕ್ ರವರು ಮಲೇರಿಯಾದಿಂದ** ಬಳಲಬೇಕಾಯ್ತು;**ಈ ಕಾರಣದಿಂದ ಅವರನ್ನು ಅಲ್ಲಿಂದ** ವರ್ಗಾಯಿಸಲಾಯ್ತು.

**2**.ಲವನು ಕುದುರೆಯನ್ನು **ಕಟ್ಟಿದನು**.ಆದ್ದರಿಂದ ಮುನಿಸುತರು **ಹೆದರಿದರು**.

**3**.ಅವನು ಜೋರಾಗಿ **ಓಡಿದನು**. ಆದರೆ ಬಹುಮಾನ **ಸಿಗಲಿಲ್ಲ**

**3.ಮಿಶ್ರವಾಕ್ಯ:-**ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂಥ ವಾಕ್ಯವನ್ನು ಮಿಶ್ರವಾಕ್ಯವೆಂದು ಕರೆಯುತ್ತಾರೆ.

**(ಮಿಶ್ರವಾಕ್ಯದಲ್ಲಿ ಎರಡಕ್ಕಿಂತ ಹೆಚ್ಚು ಕ್ರಿಯಾಪದಗಳು ಬಂದರೂ ಅವು ಸ್ಪಷ್ಟವಾಗಿರದೆ ಅದೀನವಾಗಿ ಬಂದಿರುತ್ತದೆ.)**

**ಉದಾ:-1.**ಏನಾದರೂ **ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯನವರು** ನಿರ್ಧರಿಸಿದರಾದರೂ **ಅವರು ನಿರ್ದಾರಕ್ಕೆ ಬ್ರಿಟಿಷ್ ಸರಕಾರದ ಅಪ್ಪಣೆ** ದೊರೆಯಲಿಲ್ಲವೆಂಬ **ವಿಷಯ ತಿಳಿದಾಗ ಅವರು ಬಹುವಾಗಿ** ಮರುಗಿದರು,

**2.**ಗಾಯಿತ್ರಿ **ಗಾಯನ ಸ್ಪರ್ಧೆಯಲ್ಲಿ** ಗೆದ್ದಳಾದರೂ **ಅವಳಿಗೆ ಬಹುಮಾನ ಸ್ವಿಕರಿಸಲು** ಸಾಧ್ಯವಾಗದಿದ್ದಾಗ **ಆಕೆ ತುಂಬಾ** ನೊಂದುಕೊಂಡಳು.

3.ಶಂಕರನಿಗೆ ವಿದ್ಯಾರ್ಥಿ ವೇತನ **ಸಿಕ್ಕಿತೆಂ**ಬುದನ್ನು ಅವನಿಂದಲೇ **ಕೇಳಿದೆನು.**

*****************************************************************************

ಎದ್ದು ನಿಲ್ಲಿ ! ಧೀರರಾಗಿ ! ಬಲಾಢ್ಯರಾಗಿ!
ಜಬಾಬ್ದಾರಿಯನ್ನೆಲ್ಲಾ ನೀವು ವಹಿಸಿ
ನಿಮ್ಮ ಅದೃಷ್ಟಕ್ಕೆ ನೀವೆ ಹೊಣೆ ಎಂದು
ತಿಳಿದುಕೊಳ್ಳಿ.ನಿಮಗೆ ಬೇಕಾದ ಶಕ್ತಿ
ಸಹಾಯವೆಲ್ಲ ನಿಮ್ಮಲ್ಲೆ ಇದೆ!ಆದ ಕಾರಣ
ನಿಮ್ಮ ಭವಿಷ್ಯವನ್ನು ನೀವೇ ನಿರ್ಮಿಸಿಕೊಳ್ಳಿ.
ನಿಮ್ಮ ಏಳ್ಗೆಗೆ ನೀವೇ ಶಿಲ್ಪ ... ಸ್ವಾಮಿ ವಿವೇಕಾನಂದ





Use E-Papers, Save Tress
Above Line Hide When Print Out

# ಲೇಖನ ಚಿಹ್ನೆಗಳು

ಬರವಣಿಗೆಯಲ್ಲಿ ಉಚಿತ ಸ್ಥಳದಲ್ಲಿ ಬಳಸುವ ಲಿಖಿತ ಸಂಕೇತಗಳನ್ನು ಲೇಖನ ಚಿಹ್ನೆಗಳು ಎನ್ನುವರು. ಪ್ರತಿಯೊಂದು ಭಾಷೆಯಲ್ಲೂ ಲೇಖನ ಚಿಹ್ನೆಗಳ ಪಾತ್ರ ಅತೀ ಮುಖ್ಯವಾಗಿರುತ್ತದೆ. ಲೇಖನ ಚಿಹ್ನೆಗಳಿಲ್ಲದ ಬರವಣಿಗೆ ಸ್ಪಷ್ಟ ಅರ್ಥವನ್ನು ಕೊಡದೆ ದ್ವಂದ್ವಾರ್ಥಗಳಿಗೆ ಕಾರಣ ವಾಗಬಹುದು.

## ಲೇಖನ ಚಿಹ್ನೆಗಳಲ್ಲಿ ಈ ಕೆಳಗಿನಂತೆ ವಿಧಗಳಿವೆ.

1.ಪೂರ್ಣವಿರಾಮ (.)

2.ಅರ್ಧವಿರಾಮ (;)

3.ಅಲ್ಪವಿರಾಮ (,)

4.ಪ್ರಶ್ನಾರ್ಥಕ ಚಿಹ್ನೆ (?)

5.ಭಾವಸೂಚಕ ಚಿಹ್ನೆ (!)

6.ವಾಕ್ಯವೇಷ್ಠನ ಚಿಹ್ನೆ (' ')

7.ಉದ್ಧರಣ ಚಿಹ್ನೆ (" ")

8.ಆವರಣ ಚಿಹ್ನೆ ( )

9.ವಿವರಣಾತ್ಮಕ ಚಿಹ್ನೆ (: , :-)

**1.ಪೂರ್ಣವಿರಾಮ(.)** ಒಂದು ಪೂರ್ಣಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಈ ಪೂರ್ಣವಿರಾಮ ಚಿಹ್ನೆಯನ್ನು ಬಳಸಬೇಕು ಉದಾ:-ಕಾಗೆಯು ಮರದ ಮೇಲಕ್ಕೆ ಹಾರಿತು.

**2.ಅರ್ಧವಿರಾಮ (;)**ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಲಾಗುತ್ತದೆ.

ಉದಾ:-ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ.

**3.ಅಲ್ಪವಿರಾಮ (,)** ಸಂಬೋಧನೆಯ ಮುಂದೆ ಹಾಗೂ ಕರ್ತೃ,ಕರ್ಮ,ಕ್ರಿಯಾಪದಗಳಿಗೆ ಬೇರೆ ಬೇರೆ ವಿಶೇಷಣಗಳು ಬರುವಾಗ ಕೊನೆಯ ವಿಶೇಷಣ ಬಿಟ್ಟು ಉಳಿದವುಗಳ ಮುಂದೆ ಅಲ್ಪವಿರಾಮ ಬಳಸಬೇಕು.

ಉದಾ:-ಬಟ್ಟೆಗಿರಣಿ,ರಟ್ಟು,ಪೆನ್ಸಿಲ್,ಬೆಂಕಿಕಡ್ಡಿ ತಯಾರಿಕಾ ಘಟಕಗಳನ್ನು ಸ್ಥಾಪಿಸಲಾಗಿದೆ.



Use E-Papers, Save Tress
Above Line Hide When Print Out

**4.ಪ್ರಶ್ನಾರ್ಥಕ ಚಿಹ್ನೆ(?)** ಪ್ರಶ್ನೆರೂಪದ ಪದ ಮತ್ತು ವಾಕ್ಯಗಳ ಮುಂದೆ ಪ್ರಶ್ನಾರ್ಥಕ ಚಿಹ್ನೆ ಚಿಹ್ನೆಯನ್ನು ಬಳಸಲಾಗುವುದು. ಉದಾ;ಯಾರು? ಏನು?ಏಕೆ?ಹೇಗೆ?ಯಾವುದು?ಎಲ್ಲಿ?ಇತ್ಯಾದಿ

ಉದಾ;-ದಾಶರಥಿ ಯಾರು? ಶಬರಿ ಯಾರು? ಶ್ರೀರಾಮನ ತಂದೆಯ ಹೆಸರೇನು?

**5.ಭಾವಸೂಚಕ ಚಿಹ್ನೆ (!)** ಹರ್ಷ,ಆಶ್ಚರ್ಯ,ಸಂತೋಷ,ವಿಷಾದ,ದುಃಖ ಮುಂತಾದ ಭಾವನೆಗಳನ್ನು ಸೂಚಿಸುವ ಪದಗಳ ಮುಂದೆ ಈ ಚಿಹ್ನೆಯನ್ನು ಬಳಸಲಾಗುವುದು.

ಉದಾ:-ಓಹೋ!, ಆಹಾ! ಛೇ!, ಥೂ!, ಅಯ್ಯೋ!, ಅಬ್ಬಾ!, ಎಲೇ!, ಭಲೇ!, ಇತ್ಯಾದಿ.

ಅಯ್ಯೋ! ಹೀಗಾಗಬಾರದಿತ್ತು!

**6.ವಾಕ್ಯವೇಷ್ಠನ ಚಿಹ್ನೆ (' ')** ಪಾರಿಭಾಷಿಕ ಪದಗಳನ್ನು ಬಳಸುವಾಗ,ಅನ್ಯಭಾಷೆಯ ಪದಗಳನ್ನು ಪ್ರಮುಖ ಪದಗಳನ್ನು ಸೂಚಿಸುವಾಗ ಈ ಚಿಹ್ನೆಯನ್ನು ಬಳಸಲಾಗುವುದು.

ಉದಾ;- 1. ಇಂದು ನಾವು 'ಅಕ್ಸಿಜನ್' ವಿಷಯವಾಗಿ ಕಲಿತೆವು.

2. ಕನ್ನಡದಲ್ಲಿ ಅನೇಕ ' ಸಂಸ್ಕೃತ ' ಪದಗಳು ಸೇರಿಕೊಂಡಿವೆ.

3.ನಮ್ಮ ಶಾಲೆಯ ' ರಸ್ತೆ ' ದುರಸ್ತಿ ಮಾಡಬೇಕು.

**7.ಉದ್ಧರಣ ಚಿಹ್ನೆ(" ")** ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು.

ಉದಾ:- 1.ಬಸವಣ್ಣನವರು"ದಯವೇ ಧರ್ಮದ ಮೂಲ" ಎಂದು ಹೇಳಿದರು.

2. ಗಾಂಧೀಜಿಯವರು "ಮಾಡು ಇಲ್ಲವೆ ಮಡಿ"ಹೋರಾಟಕ್ಕೆ ಕರೆ ಕೊಟ್ಟರು.

3. ವಿಶ್ವೇಶ್ವರಯ್ಯನವರು" ಕೈಗಾರಿಕೀಕರಣ ಇಲ್ಲವೆ ಅವನತಿ" ಎಂದು ಹೇಳಿದರು

**8.ಆವರಣ ಚಿಹ್ನೆ ( )** ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಈ ಚಿಹ್ನೆಯನ್ನು ಬಳಸಲಾಗುವುದು.

ಉದಾ:- 1.ಲವನು ಯಜ್ಞದ ಅಶ್ವ (ಕುದುರೆ)ವನ್ನು ಕಟ್ಟಿದನು.

2.ಸೂರ್ಯನು(ರವಿ) ಪೂರ್ವ (ಮೂಡಣ) ದಿಕ್ಕಿನಲ್ಲಿ ಉದಯಿಸಿದನು.

3.ನೀರನ್ನು ವಿಭಜಿಸಿದರೆ ಆಮ್ಲಜನಕ (ಅಕ್ಸಿಜನ್) ಜಲಜನಕ (ಹೈಡ್ರೋಜನ್)ಗಳು ಉತ್ಪತ್ತಿಯಾಗುತ್ತವೆ.



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

**9.ವಿವರಣಾತ್ಮಕ ಚಿಹ್ನೆ (: , :-)**ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಈ ಚಿಹ್ನೆಯನ್ನು ಬಳಸಲಾಗುವುದು.

ಉದಾ:-1.ಪಂಚಮಹಾವಾದ್ಯಗಳು:ತಾಳ, ಹಳಗ, ಗಂಟೆ,ಮೌರಿ,ಸನಾದಿ.

2.ಜನಸಂಖ್ಯಾ ಸ್ಫೋಟ:

3.ಮಹಿಳಾ ಸಾಕ್ಷರತೆ=

## ನವರಸಗಳು

ಸಹೃದಯರಯ / ಕೇಳುವವರು ಮೈಮರೆತು ಸಾಧಾರಣವಾದ ಆನಂದಕ್ಕಿಂತಲೂ ಮಿಗಿಲಾದ ಅವರ್ಣನೀಯ ಆನಂದಕ್ಕಿಂತಲೂ ಮಿಗಿಲಾದ ಅವರ್ಣನೀಯ ಆನಂದವನ್ನು ಅನುಭವಿಸುವಂತಹ ಅಲೌಕಿಕ ತಲ್ಲಿನತೆಯನ್ನು "ರಸ"ಎನ್ನುವರು.

ಕಾವ್ಯಗಳಲ್ಲಿ ಒಂಭತ್ತು ರಸವನ್ನು ಗುರುತಿಸಲಾಗಿದೆ.ಇದನ್ನು "ನವರಸ"ಎಂದೂ ಕರೆಯಲಾಗುವುದು.ಅವುಗಳೆಂದರೆ

1.ಶೃಂಗಾರ ರಸ:- ಸಹೃದಯ ಜನರ ಹೃದಯದಲ್ಲಿ ರಸಾವಸ್ಥೆಯನ್ನುಂಟು ಮಾಡುವ ರತಿಭಾವಕ್ಕೆ ಶೃಂಗಾರ ರಸ ಎಂದು ಹೆಸರು ಇದನ್ನು "ರಸರಾಜ"ವೆಂತಲೂ ಕರೆಯುವರು.

2.ಹಾಸ್ಯರಸ:-ಬೇರೆಯವರ ವಿಕೃತ ವೇಷಭೂಷಣ ಕ್ರಿಯೆ ಚೇಷ್ಟೆ /ಮಾತುಗಳನ್ನು ಕೇಳಿದಾಗ ಹೃದಯದಲ್ಲಿ ಉಂಟಾಗುವ ಉಲ್ಲಾಸ ಹೆಸರು ಹಾಸ್ಯರಸ.

3.ಅದ್ಭುತ ರಸ:-ಆಶ್ಚರ್ಯವನ್ನುಂಟು ಮಾಡುವ ವಸ್ತುಗಳು ಕಂಡು ಜಾಗೃತವಾಗಿರುವ ವಿಸ್ಮಯ ಭಾವವನ್ನು ಅದ್ಭುತ ರಸ ಎನ್ನುವರು.

4.ಕರುಣಾರಸ:-ಬೇರೆಯವರ ತೊಂದರೆ,ನಾಶವನ್ನು ಕಂಡು ಹೃದಯದಲ್ಲಿ ಉಂಟಾಗುವ ಕ್ಷೋಭೆಯನ್ನು ಕರುಣಾರಸ ಎನ್ನುವರು.

5.ರೌದ್ರರಸ:-ಅಪಮಾನ,ನಿಂದನೆ,ಅಪಕಾರ ಮೊದಲಾದವುಗಳಿಂದ ಉಂಟಾಗುವ ಪ್ರತಿಕಾರದ ಉಗ್ರ ಭಾವನೆಯನ್ನು ರೌದ್ರರಸ ಎನ್ನುವರು.

6.ಭೀಭತ್ಸರಸ:- ತಿರಸ್ಕಾರ ಮಾಡಬಹುದಾದ ಅಪಹಾಸ್ಯ ಪಟಿಸಬಹುದಾದ ವಸ್ತುಗಳನ್ನು ಕಂಡಾಗ ಉಂಟಾಗುವ ಭಾವವೇ ಭೀಭತ್ಸರಸ ಎನ್ನುವರು.

7.ವೀರರಸ:-ಶತ್ರುವಿನ ಕೆಣಕುವಿಕೆಯಿಂದುಂಟಾಗುವ ಆನಂದ ಭಾವದಿಂದ ಕರ್ಮಕ್ಷೇತ್ರದಲ್ಲಿ ಪ್ರವೃತರಾಗುವುದು ವೀರರಸ ಎನ್ನುವರು.

8.ಭಯಾನಕ ರಸ:-ಭಯಾನಕ ವಸ್ತುವನ್ನು ಕಂಡಾಗ ಹೃದಯದಲ್ಲಿ ಉಂಟಾಗುವ ನಡುಕವೇ ಭಯಾನಕ ರಸ ಎನ್ನುವರು.

9.ಶಾಂತರಸ:-ಪ್ರಪಂಚದ ನಶ್ವರತೆಯ ಬಗ್ಗೆ ಹೃದಯದಲ್ಲಿ ಉಂಟಾಗುವ ಭಾವನೆಯೇ ಶಾಂತರಸ.





Use E-Papers, Save Tress
Above Line Hide When Print Out

# ಗಾದೆಗಳು

**ಪೀಠಿಕೆ:–** ಗಾದೆ ವೇದಗಳಿಗೆ ಸಮಾನ.ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು.ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ.ಗಾದೆಗಳು ಜೀವನದ ಅನುಭವಕ್ಕೆ ಹಿಡಿದ ಕನ್ನಡಿಯಾಗಿವೆ.ಅದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ.ಅಂತಹ ಗಾದೆಗಳಲ್ಲಿ ಈ ಮೇಲಿನ ಗಾದೆಯು ಅತ್ಯಂತ ಪ್ರಸಿದ್ಧವಾದ ಗಾದೆಯಾಗಿದೆ.

**ಗಾದೆಯವಿಸ್ತರಣೆ**..........................................................................................................

..........................................................................................................................................

**ಉಪಸಂಹಾರ** ಈಮೇಲಿನ ಗಾದೆಯು ನಮಗೆ,ನಮ್ಮಜೀವನಕ್ಕೆ ಮಾರ್ಗದರ್ಶನವನ್ನು ನೀಡುತ್ತವೆ.ಈ ರೀತಿಯಾಗಿ ಈ ಗಾದೆಯು ಅತ್ಯಂತ ಮಹತ್ವಪೂರ್ಣವಾದ ಸಂದೇಶವನ್ನು ನಮಗೆ ನೀಡುತ್ತದೆ.

1.ಕೈ ಕೆಸರಾದರೆ ಬಾಯಿ ಮೊಸರು

2.ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ

3.ಕಟ್ಟುವುದು ಕಠಿಣ;ಕೆಡಹುವುದು ಸುಲಭ

4.ಹೆತ್ತ ತಾಯಿ; ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು.

5.ಸತ್ಯಕ್ಕೆ ಸಾವಿಲ್ಲ;ಸುಳ್ಳಿಗೆ ಸುಖವಿಲ್ಲ

6.ಅಳಾಗಬಲ್ಲವನು;ಅರಸಾಗಬಲ್ಲನು.

7.ತುಂಬಿದ ಕೊಡ ತುಳುಕುವುದಿಲ್ಲ

8.ಬೆಳ್ಳಗಿರುವುದೆಲ್ಲ ಹಾಲಲ್ಲ

9.ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು?

10.ಇರುಳು ಕಂಡ ಬಾವಿಗೆ ಹಗಲು ಬಿದ್ದಂತೆ.

11.ಹಿತ್ತಲ ಮದ್ದಲ್ಲ

12.ದೂರದ ಬೆಟ್ಟ ನುಣ್ಣಗೆ

13.ಆರೋಗ್ಯವೇ ಭಾಗ್ಯ

14.ಕೊಟ್ಟಿದ್ದು ತನಗೆ;ಬಚ್ಚಿಟ್ಟಿದ್ದು ಪರರಿಗೆ



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

1ಮಾತೇ ಮೃತ್ಯು:ಮಾತೇ ಮುತ್ತು.

2.ಊಟ ಬಲ್ಲವನಿಗೆ ರೋಗವಿಲ್ಲ:ಮಾತು ಬಲ್ಲವನಿಗೆ ಜಗಳವಿಲ್ಲ.

3.ಮಾತು ಆಡಿದರೆ ಹೋಯಿತು;ಮುತ್ತು ಒಡೆದರೆ ಹೋಯಿತು.

4.ಮಾತು ಬೆಳ್ಳಿ:ಮೌನ ಬಂಗಾರ.

5.ಮಾತು ಮನೆ ಕೆಡಿಸಿತು;ತೂತು ಒಲೆ ಕೆಡಿಸಿತು.

6.ಸತ್ಯಕ್ಕೆ ಸಾವಿಲ್ಲ:ಸುಳ್ಳಿಗೆ ಸುಖವಿಲ್ಲ

(ಈ ಮೇಲಿನ ಗಾದೆಗಳಿಗೆಲ್ಲಾ ಅನ್ವಯಿಸುವ ಒಂದೇ ಉತ್ತರ)

ಗಾದೆ ವೇದಗಳಿಗೆ ಸಮಾನ.ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು.ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ.ಗಾದೆಗಳು ಜೀವನದ ಅನುಭವಕ್ಕೆ ಹಿಡಿದ ಕನ್ನಡಿಯಾಗಿವೆ.ಅದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ.ಅಂತಹ ಗಾದೆಗಳಲ್ಲಿ ಈ ಮೇಲಿನ ಗಾದೆಯು ಅತ್ಯಂತ ಪ್ರಸಿದ್ಧವಾದ ಗಾದೆಯಾಗಿದೆ.

ಮಾನವನು ಮಾತನಾಡುವ ಮತ್ತು ಆಲೋಚನಾ ಶಕ್ತಿಯಿಂದಲೇ ಇತರೆ ಪ್ರಾಣಗಳಿಗಿಂತ ಭಿನ್ನವಾಗಿದ್ದಾನೆ ಅಂತಹ ಅಮೂಲ್ಯವಾದ ಮಾತನ್ನು ಉತ್ತಮ ರೀತಿಯಲ್ಲಿ ಬಳಸಿಕೊಳ್ಳಬೇಕು.ಹಾಗಲ್ಲದೆ ನಾಲಿಗೆ ಹರಿದ ಕಡೆಗೆಲ್ಲಾ ಬಿಟ್ಟರೆ ಬಾಯಿ ಬಿಟ್ಟರೆ ಬಣ್ಣಗೇಡು ಎಂಬಂತಾಗುತ್ತದೆ.

ಬಸವಣ್ಣನವರು ಹೇಳಿರುವಂತೆ "ನುಡಿದರೆ ಮುತ್ತಿನ ಹಾರದಂತೆ,ಮಾಣಿಕ್ಯದ ದೀಪ್ತಿಯಂತೆ,ಸ್ಫಟಿಕದ ಶಲಾಕೆಯಂತೆ"ಇರಬೇಕು ಅಂದರೆ ನಮ್ಮ ಮಾತು ಇತರರಿಗೆ ನೋವುಂಟು ಮಾಡದಂತೆ ಹಿತ-ಮಿತ-ಮೃದುವಾಗಿರಬೇಕು,ಇಲ್ಲದಿದ್ದರೆ ಅದು ಅನಾಹುತಕ್ಕೂ ಕಾರಣವಾಗುತ್ತದೆ.ಅಲ್ಲದೇ ನಮ್ಮ ಮಾತಿನಲ್ಲಿ ಸತ್ಯವಂತಿಕೆ ಇರಬೇಕು.ಸುಳ್ಳ ಕ್ಷಣಿಕ ಸಂತೋಷವನ್ನು ನೀಡಿದರೆ ಸತ್ಯ ಶಾಶ್ವತ ಸುಖ ನೀಡುತ್ತದೆ. ಎಂಬುದು ಈ ಗಾದೆಯ ಅಶಯವಾಗಿದೆ.

2.1.ದುಡಿಮೆಯೇ ದುಡ್ಡಿನ ತಾಯಿ

2.ಕೈ ಕೆಸರಾದರೆ ಬಾಯಿ ಮೊಸರು

3.ಕಾಯಕವೇ ಕೈಲಾಸ

4.ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು

5.ಆಳಾಗಬಲ್ಲವನು ಅರಸನಾಗಬಲ್ಲನು





Use E-Papers, Save Tress
Above Line Hide When Print Out

ಗಾದೆ ವೇದಗಳಿಗೆ ಸಮಾನ.ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು.ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ.ಗಾದೆಗಳು ಜೀವನದ ಅನುಭವಕ್ಕೆ ಹಿಡಿದ ಕನ್ನಡಿಯಾಗಿವೆ.ಅದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ.ಅಂತಹ ಗಾದೆಗಳಲ್ಲಿ ಈ ಮೇಲಿನ ಗಾದೆಯು ಅತ್ಯಂತ ಪ್ರಸಿದ್ಧವಾದ ಗಾದೆಯಾಗಿದೆ

ಇದು ಒಂದು ಜನಪ್ರಿಯ ಗಾದೆ ಮಾತಾಗಿದ್ದು:ದುಡಿಮೆ ಅಥವಾ ದೈಹಿಕ ಶ್ರಮ ಹಾಗೂ ಅದರ ಮಹತ್ವವೇನು ಎಂಬುದನ್ನು ತಿಳಿಸುತ್ತದೆ.

12ನೇಯ ಶತಮಾನದಲ್ಲೇ ಶಿವಶರಣರು ಕಾಯಕದ ಮಹತ್ವವನ್ನು ಸಾರಿದರು.ಕಾಯಕ ಎಂದರೆ ಪ್ರತಿಯೊಬ್ಬ ವ್ಯಕ್ತಿಯು ಏನಾದರೊಂದು ದೈಹಿಕ ಶ್ರಮದ ಮೂಲಕ ಸಂಪಾದನೆ ಮಾಡಿ ಜೀವ ನಡೆಸಬೇಕು"ಸೋಮಾರಿಯಾಗಿ ಕಾಲಕಳೆಯದೆ ಕಷ್ಟಪಟ್ಟು ದುಡಿದು ಬದುಕುವುದರಿಂದ ಹಣ ಸಂಪಾದನೆ ಸಾಧ್ಯ.ಕೂತು ಉಣ್ಣುವವನಿಗೆ ಕುಡುಕೆ ಹೊನ್ನು ಸಾಲದು ಎಂಬಂತೆ ಇರುವ ಆಸ್ತಿ ಕರಗಿದ ಮೇಲೆ ಕಷ್ಟ ಪಡಬೇಕಾಗುತ್ತದೆ.ಆದ್ದರಿಂದ ಕಷ್ಟಪಟ್ಟರೆ ಸುಖವಿದೆ ಎಂಬುದು ಈ ಗಾದೆಯ ಆಶಯವಾಗಿದೆ.

3.1.ಅರಮನೆಗಿಂತ ನೆರಮನೆ ಲೇಸು

2.ಹಾಸಿಗೆ ಇದ್ದಷ್ಟು ಕಾಲು ಚಾಚು

3.ಅತಿ ಆಸೆ ಗತಿ ಕೇಡಿಸಿತು

ಗಾದೆ ವೇದಗಳಿಗೆ ಸಮಾನ.ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು.ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ.ಗಾದೆಗಳು ಜೀವನದ ಅನುಭವಕ್ಕೆ ಹಿಡಿದ ಕನ್ನಡಿಯಾಗಿವೆ.ಅದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ.ಅಂತಹ ಗಾದೆಗಳಲ್ಲಿ ಈ ಮೇಲಿನ ಗಾದೆಯು ಅತ್ಯಂತ ಪ್ರಸಿದ್ಧವಾದ ಗಾದೆಯಾಗಿದೆ.

ಇದು ಒಂದು ಜನಪ್ರಿಯ ಗಾದೆ ಮಾತಾಗಿದ್ದು:ನಮ್ಮ ಆಸೆಗಳಿಗೆ ಇತಿ–ಮಿತಿಯಿರಬೇಕು ಎಂಬುದನ್ನು ತಿಳಿಸುತ್ತದೆ.

"ಆಸೆಯೇ ದುಃಖಕ್ಕೆ ಕಾರಣ"ಎಂದು ಬುದ್ಧ ಹೇಳಿದ್ದಾನೆ.

ಜೀವನದಲ್ಲಿ ಆಸೆಯೇ ಇರಬಾರದೆಂದಲ್ಲ ಆದರೆ ಅದು ಅತಿಯಾಗದೆ ಮಿತವಾಗಿರಬೇಕು.ಅರಮನೆಯ ಸುಖಕ್ಕಿಂತ ನಮ್ಮಲ್ಲಿ ಲಭ್ಯವಿರುವಷ್ಟರಲ್ಲಿ ಬದುಕುವುದರಲ್ಲಿ ನೆಮ್ಮದಿ ಇದೆ.ಆಸೆಗಳು ಅತಿಯಾಗಿ ಆದಾಯ ಕಡಿಮೆ ಇದ್ದಾಗ ಸಾಲ ಮಾಡಬೇಕಾಗುತ್ತದೆ.ಆದ್ದರಿಂದ ಹಾಸಿಗೆ ಇದ್ದಷ್ಟು ಕಾಲುಚಾಚಬೇಕು ಉಚಿತವಾಗಿ ಸಿಗುತ್ತದೆಂದು ಅಗತ್ಯಕ್ಕಿಂತ ಹೆಚ್ಚು ಸಂಗ್ರಹಣೆ ಮಾಡಲು ಪ್ರಯತ್ನಿಸಬಾರದು ಹಾಗೆ ಮಾಡಿದರೆ ಚಿನ್ನದ ಮೊಟ್ಟೆ ಇಡುವ ಕೋಳಿಯ ಕಥೆಯಂತೆ ಅತಿಯಾಸೆಯಿಂದಾಗಿ ಇದ್ದದ್ದನ್ನೂ ಕಳೆದುಕೊಳ್ಳಬೇಕಾಗುತ್ತದೆ. ಎಂಬುದು ಈ ಗಾದೆಯ ಆಶಯವಾಗಿದೆ.



Use E-Papers, Save Tress
Above Line Hide When Print Out

4.1.ತಾಳಿದವನು ಬಾಳಿಯಾನು.

2.ಕೋಪದಲ್ಲಿ ಕೊಯ್ದ ಮೂಗು ಮತ್ತೆ ಬಂದಿತೇ?

3.ಕಟ್ಟುವುದು ಕಠಿಣ ಕೆಡಹುವುದು ಸುಲಭ

4.ಕುಂಬಾರನಿಗೆ ವರುಷ:ದೊಣ್ಣೆಗೆ ನಿಮಿಷ

ಗಾದೆ ವೇದಗಳಿಗೆ ಸಮಾನ.ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು.ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ.ಗಾದೆಗಳು ಜೀವನದ ಅನುಭವಕ್ಕೆ ಹಿಡಿದ ಕನ್ನಡಿಯಾಗಿವೆ.ಅದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ.ಅಂತಹ ಗಾದೆಗಳಲ್ಲಿ ಈ ಮೇಲಿನ ಗಾದೆಯು ಅತ್ಯಂತ ಪ್ರಸಿದ್ಧವಾದ ಗಾದೆಯಾಗಿದೆ.

ಇದು ಒಂದು ಜನಪ್ರಿಯ ಗಾದೆ ಮಾತಾಗಿದ್ದು:ಅತಿಯಾಗಿ ಕೋಪಮಾಡಿಕೊಳ್ಳದೆ ಸಮಾಧಾನದಿಂದ ಇರಬೇಕು.ಕೋಪ ಅನಾಹುತಕ್ಕೆ ಕಾರಣವಾಗುತ್ತದೆ ಎಂಬುದನ್ನು ತಿಳಿಸುತ್ತದೆ.

ಕೋಪಂ ಅನರ್ಥ ಸಾಧನಂ ಎಂಬ ಮಾತಿನಂತೆ ಕೋಪವು ಕೆಡುಕನ್ನು ಉಂಟು ಮಾಡುತ್ತದೆ.ಕ್ಷಣಕಾಲ ಕೋಪದ ಕೈಗೆ ಬುದ್ಧಿ ಕೊಟ್ಟರೆ ಅದು ನಮ್ಮನ್ನು ಮಾತ್ರವಲ್ಲದೆ ಅದಕ್ಕೆ ಗುರಿಯಾದವರನ್ನು ಅಪಾಯಕ್ಕೆ ನೂಕುತ್ತದೆ. ಕುಂಬಾರನು ಹಲವು ದಿನಗಳು ಶ್ರಮಪಟ್ಟು ತಯಾರಿಸಿದ ಮಡಿಕೆಯನ್ನು ಒಂದು ದೊಣ್ಣೆಯಿಂದ ನಾಶ ಮಾಡಿದಂತೆ ಕೋಪವು ಅನಾಹುತವನ್ನು ಉಂಟುಮಾಡುತ್ತದೆ.ಆದರೆ ಅದನ್ನು ಸರಿಪಡಿಸಲಾಗುತ್ತದೆಯೇ?ತಾಳ್ಮೆಯಿಂದ ಆಲೋಚಿಸಿ ಮುನ್ನಡೆದವರೇ ಜೀವನದಲ್ಲಿ ವಿಜಯಶಾಲಿಗಳಾಗಲು ಸಾಧ್ಯ.ಎಂಬುದು ಈ ಗಾದೆಯ ನೀತಿಯಾಗಿದೆ.

## ಕನ್ನಡದ ಮೊದಲುಗಳು

1.ಅಚ್ಚ ಕನ್ನಡದ ಮೊದಲ ದೊರೆ–ಮಯೂರವರ್ಮ

2.ಕನ್ನಡದ ಮೊದಲ ಕವಿ–ಪಂಪ

3.ಕನ್ನಡದ ಮೊದಲ ಶಾಸನ–ಹಲ್ಮಿಡಿ ಶಾಸನ

4.ಕನ್ನಡದ ಮೊದಲ ಲಕ್ಷಣ ಗ್ರಂಥ–ಕವಿರಾಜಮಾರ್ಗ

5.ಕನ್ನಡದ ಮೊದಲ ನಾಟಕ–ಮಿತ್ರಾವಿಂದ ಗೋವಿಂದ

6.ಕನ್ನಡದ ಮೊದಲ ಕವಯತ್ರಿ–ಅಕ್ಕಮಹಾದೇವಿ

7.ಕನ್ನಡದ ಮೊದಲ ವಚನಕಾರ–ದೇವರದಾಸಿಮಯ್ಯ

8.ಹೊಸಗನ್ನಡದ ಮೊದಲ ಮಹಾಕಾವ್ಯ–ಶ್ರೀರಾಮಾಯಣ ದರ್ಶನಂ

9.ಕನ್ನಡದ ಮೊದಲ ಕಾವ್ಯ–ಆದಿಪುರಾಣ

10ಕನ್ನಡದ ಮೊದಲ ಗದ್ಯಕೃತಿ–ವಡ್ಡಾರಾಧನೆ



Use E-Papers, Save Tress
Above Line Hide When Print Out

# ಅವ್ಯಯಗಳು (Indeclinables)

“ನಾಮಪದ,ಕ್ರಿಯಾಪದಗಳಂತೆ ಲಿಂಗ,ವಚನ,ವಿಭಕ್ತಿಗಳಿಂದ ರೂಪಭೇದವನ್ನು ಹೊಂದದೆ ಏಕರೂಪವಾಗಿರುವ ಪದಗಳನ್ನು “ಅವ್ಯಯ” ಎಂದು ಕರೆಯುತ್ತಾರೆ. (ಬದಲಾಯಿಸುವುದಕ್ಕೆ ಆಗುವುದಿಲ್ಲ.)

# ಅವ್ಯಯದ ವಿಧಗಳು

ಅವ್ಯಯದ ವಿಧಗಳಲ್ಲಿ 6 ವಿಧಗಳು ಅವುಗಳೆಂದರೆ

1.ಸಾಮಾನ್ಯಾರ್ಥಕಾವ್ಯಯ
2.ಅನುಕರಣಾವ್ಯಯಗಳು
3.ಭಾವಸೂಚಕಾವ್ಯಯಗಳು
4.ಕ್ರಿಯಾರ್ಥಕಾವ್ಯಯಗಳು
5.ಸಂಬಂಧಾರ್ಥಕಾವ್ಯಯಗಳು
6.ಅವಧಾರಣಾರ್ಥಕಾವ್ಯಯ

**1.ಸಾಮಾನ್ಯಾರ್ಥಕಾವ್ಯಯ:–** ಯಾವುದಾದರೊಂದು ಕ್ರಿಯೆ ನಡೆದ ರೀತಿಯನ್ನು ಹೇಳುವಂತಹ ಅವ್ಯಯಗಳೇ “ಸಾಮಾನ್ಯಾರ್ಥಕಾವ್ಯಯ”ವೆಂದು ಕರೆಯುತ್ತಾರೆ.ಇವು ಹೆಚ್ಚಾಗಿ ವಿಶೇಷಣಗಳಾಗಿರುತ್ತವೆ.

ಉದಾ;–ಬೇಗನೆ,ಮೆಲ್ಲನೆ,ಸೊಗಸಾಗಿ,ಸುಮ್ಮನೆ,ತಟ್ಟನೆ,ತರುವಾಯ,ಹಾಗೆ,ಅಂತು, ಬೇರೆ,ಬಳಿಕ, ಕೂಡಲೇ,ಚೆನ್ನಾಗಿ,

**2.ಅನುಕರಣಾವ್ಯಯ:–** ನಿರ್ದಿಷ್ಟ ಅರ್ಥವಿಲ್ಲದ ಧ್ವನಿ ವಿಶೇಷಣಗಳನ್ನು ತಾನು ಕಿವಿಯಿಂದ ಕೇಳಿದಂತೆ ಅನುಕರಣೆ ಮಾಡಿ ಹೇಳುವ ಪದಗಳನ್ನು “ಅನುಕರಣಾವ್ಯಯ”ಗಳೆಂದು ಕರೆಯುತ್ತಾರೆ.

| | | | | | |
|---|---|---|---|---|---|
| ಚಟಚಟ | ಕರಕರ | ಚುರುಚುರು | ಧಗಧಗ | ರೊಯ್ಯನೆ | ಸುಯ್ಯನೆ |
| ಘುಳುಘಳು | ದಡದಡ | ಗುಜುಗುಜು | ಸರಸರ | ಝಣಝಣ | ಘಮಘಮ |
| ಗುಡುಗುಡು | ಪಟಪಟನೆ | ಫಳಫಳ | ಢಣಢಣ | ಜುಳುಜುಳು | ರಫರಫ |
| ಪರಪರ | ಗುನುಗುನು | ಚುಮುಚುಮು | ಲಕಲಕ | ಗಭಗಭ | ತಟತಟ |

**3.ಭಾವಸೂಚಕಾವ್ಯಯ:–** ಮನಸ್ಸಿನಲ್ಲಿಉಂಟಾಗುವ ಕೋಪ,ಹರ್ಷ,ದುಃಖ,ಮೆಚ್ಚುಗೆ,ಆಕ್ಷೇಪ,ತಿರಸ್ಕಾರ, ಇತ್ಯಾದಿ ಭಾವಗಳನ್ನು ವ್ಯಕ್ತಪಡಿಸುವಾಗ ಅರ್ಥವಿಲ್ಲದ ಕೆಲವು ಪದಗಳನ್ನು ಬಳಸುತ್ತೇವೆ.ಅಂತಹ ಪದಗಳನ್ನು “ಭಾವಸೂಚಕ ಅವ್ಯಯ”ಗಳೆಂದು ಕರೆಯುತ್ತಾರೆ.

ಉದಾ:–ಆಹಾ! ಭಳಿರೆ! ಅಯ್ಯೋ! ಓಹೋ! ಹೋ! ಅಂ! ಆಃ! ಓ! ಇತ್ಯಾದಿ



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

**4.ಕ್ರಿಯಾರ್ಥಕಾವ್ಯಯ:**–ಕ್ರಿಯಾಪದದ ಸ್ಥಾನದಲ್ಲಿದ್ದು ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಅವ್ಯಯಗಳನ್ನು "ಕ್ರಿಯಾರ್ಥಕಾವ್ಯಯ"ಎಂದು ಕರೆಯುತ್ತಾರೆ.

ಉದಾ:–ಅಹುದು,ಸಾಕು,ಅಲ್ಲ,ಹೌದು,ಬೇಡ,ಉಂಟು, ಇತ್ಯಾದಿ

**5.ಸಂಬಂಧಾರ್ಥಕಾವ್ಯಯ:**–ಎರಡು ಪದಗಳನ್ನಾಗಲೀ ಹಲವು ಪದ ಸಮುಚ್ಚಯಗಳನ್ನಾಗಲೀ, ವಾಕ್ಯಗಳನ್ನಾಗಲೀ,ಜೋಡಿಸುವಂತಹ ಅಥವಾ ಸಂಬಂಧಗೊಳಿಸುವಂತಹ ಪದಗಳೇ "ಸಂಬಂಧಾರ್ಥಕಾವ್ಯಯ" ಎಂದು ಕರೆಯುತ್ತಾರೆ. ಉದಾ:–ಮತ್ತು, ಅಥವಾ, ಆದ್ದರಿಂದ, ಊ,ಉಂ, ಅಲ್ಲದೆ ಇತ್ಯಾದಿ.

**6.ಅವಧಾರಣಾರ್ಥಕಾವ್ಯಯ:**–ಒಂದು ನಿಶ್ಚಯಾರ್ಥದಲ್ಲಿರುವ ಅವ್ಯಯವನ್ನು "ಅವಧಾರಣಾರ್ಥಕಾವ್ಯಯ"ಎಂದು ಕರೆಯುತ್ತಾರೆ.ಹಲವು ವಸ್ತುಗಳಲ್ಲಿ ಒಂದನ್ನು ನಿಶ್ಚಯವಾಗಿ ಹೇಳುವ ಸಂದರ್ಭದಲ್ಲಿ ಈ ಅವ್ಯಯವನ್ನು ಬಳಸಲಾಗುತ್ತದೆ.

ಉದಾ:–ಅವನೇ,ಅದುವೇ,ನೀನೇ, ಅವಳೇ,ಅವರೇ, ಇತ್ಯಾದಿ.ಪದಗಳ ಕೊನೆಯಲ್ಲಿರಯವ "ಏ"ಎಂಬ ಅಕ್ಷರವೇ "ಅವಧಾರಣಾರ್ಥಕಾವ್ಯಯ"

## ಗ್ರಾಂಥಿಕ ರೂಪಗಳು

| | | |
|---|---|---|
| 1.ಮಾಡು–ಮಾಡುತ್ತಾ | 12.ಕಟ್ತಾ ಇದ್ದೀವಿ–ಕಟ್ಟುತ್ತಾ ಇದ್ದೇವೆ | 23.ನಂಗ್ಹೇಳಿ–ನನಗೆ ಹೇಳಿ |
| 2.ಕೆಲ್ಸ ನಿಲ್ಸಿ–ಕೆಲಸ ನಿಲ್ಲಿಸಿ | 13.ಬ್ಯಾಡರೆಲ್ಲ ಕಲ್ತು–ಬೇಡರೆಲ್ಲ ಕಲೆತು | 24.ಇಚಾರಾ–ವಿಚಾರ |
| 3.ಹೋಯ್ತು– ಹೋಯಿತು | 14.ಕಡಕೊಂಡು–ಕಡಿದುಕೊಂಡನು | 25.ಇಲ್ಲೈತೆ–ಇಲ್ಲಿದೆ |
| 4.ಕುದುರಿ–ಕುದುರೆ | 15.ತಗೊಂಡು–ತೆಗೆದುಕೊಂಡು | 26.ತಕ್ಕಳಪ್ಪ–ತೆಗೆದುಕೊಳ್ಳಪ್ಪ |
| 5.ಸಿಡಿದ್ಹಾಂಗ–ಸಿಡಿದ ಹಾಗೆ | 16.ತಿರಿತಿರ್ಗಿ–ತಿರುತಿರುಗಿ | 27.ನಂದಲ್ಲ–ನನ್ನದಲ್ಲ |
| 6.ಇಸವಾಸ–ವಿಶ್ವಾಸ | 17.ಗುಡದಾಗ–ಗುಡ್ಡದ ಕಡೆಗೆ | 28.ನಿಂದ್ರಬ್ಯಾಡ–ನಿಲ್ಲಬೇಡ |
| 7.ಮೈಮ್ಯಾಗ–ಮೈಮೇಲೆ | 18.ಗುರ್ತುಳಿಯಲಿಲ್ಲ–ಗುರುತು ಉಳಿಯಲಿಲ್ಲ | 29.ಹ್ವಾದ–ಹೋದ |
| 8.ಸಕ್ಕಾರಿ–ಸಕ್ಕರೆ | 19.ವಿಲಾತಿ–ವಿಲಾಯಿತಿ | 30.ಮನಿಸ್ಯ–ಮನುಷ್ಯ |
| 9..ಕೊಳ್ಳಿ–ಬೆಂಕಿ | 20.ಹೋಗೋರ–ಹೋಗುವವರ | 31ಹಾವ್ಳಿ–ಹಾವಳಿ |
| 10.ಕೊಡುತಿವಿ–ಕೊಡುತ್ತೇವೆ | 21.ಉಳುವಾನ–ಉಳುವವನ | |
| 11.ಮುಂದಿತ್ತ–ಮುಂಭಾಗ | 22.ತಿಂಬೂದು–ತಿನ್ನುವುದು | |





Use E-Papers, Save Tress
Above Line Hide When Print Out

# ಛಂದಸ್ಸು

ಛಂದಸ್ಸು ಎಂಬ ಪದವು ಛದ್ ಎಂಬ ಧಾತುವಿನಿಂದ ಹುಟ್ಟಿದ್ದು ಒಂದರ್ಥದಲ್ಲಿ ಛಂದಸ್ಸು ಎಂದರೆ ಆಹ್ಲಾದವನ್ನುಂಟು ಮಾಡುವುದು ಎಂದರ್ಥ.ರಸವೇ ಕಾವ್ಯದ ಆತ್ಮವಾದಂತೆ ಛಂದಸ್ಸು ಕಾವ್ಯದ ಆತ್ಮವಾಗಿದೆ.ಈ ಛಂದಶ್ಶಾಸ್ತ್ರವನ್ನು ಮೊಟ್ಟ ಮೊದಲಿಗೆ ಕ್ರಿ.ಶ. 990ರಲ್ಲಿ ಒಂದನೇ ನಾಗವರ್ಮ ಎಂಬ ಕವಿಯು ತನ್ನ ಛಂದೋಂಬುದಿ ಎಂಬ ಗ್ರಂಥದಲ್ಲಿ ಮೊದಲಿಗೆ ಬಳಸಿದನು.

ಪದ್ಯ ರಚನಾ ವಿನ್ಯಾಸವನ್ನು ತಿಳಿಸುವ ಶಾಸ್ತ್ರವೇ ಛಂದಸ್ಸು

ಇದರಲ್ಲಿ ಪ್ರಾಸ ಯತಿ ಮತ್ತು ಗಣಗಳೆಂಬ ಮೂರು ವಿಭಾಗಗಳಿವೆ.

**ಪ್ರಾಸ:**–ಒಂದು ನಿರ್ದಿಷ್ಟ ವ್ಯಂಜನವು ಪದ್ಯದ ಪ್ರತಿ ಸಾಲಿನ ಆದಿ,ಮಧ್ಯ,ಅಥವಾ ಅಂತ್ಯದಲ್ಲಿ ನಿಯತವಾಗಿ ಬರುವುದೇ ಪ್ರಾಸವೆಂದು ಕರೆಯುತ್ತಾರೆ.

## ಪ್ರಾಸದ ವಿಧಗಳು:–ಪ್ರಾಸದ ವಿಧಗಳಲ್ಲಿ 3 ವಿಧ

**1.ಆದಿಪ್ರಾಸ:**–ಪದ್ಯದ ಪ್ರತಿ ಸಾಲಿನ ಎರಡನೇ ಅಕ್ಷರ ಸ್ಥಾನದಲ್ಲಿ ಒಂದೇ ಜಾತಿಯ ವ್ಯಂಜನವಿದ್ದರೆ ಅದು ಆದಿಪ್ರಾಸ.

**2.ಮಧ್ಯಪ್ರಾಸ:**– ಪದ್ಯದ ಪ್ರತಿ ಸಾಲಿನ ಮಧ್ಯದಲ್ಲಿ ಒಂದೇ ಜಾತಿಯ ವ್ಯಂಜನವಿದ್ದರೆ ಅದು ಮಧ್ಯಪ್ರಾಸ.

**3.ಅಂತ್ಯಪ್ರಾಸ:**– ಪದ್ಯದ ಪ್ರತಿ ಸಾಲಿನ ಕೊನೆಯ ಅಕ್ಷರ ಸ್ಥಾನದಲ್ಲಿ ಒಂದೇ ಜಾತಿಯ ವ್ಯಂಜನವಿದ್ದರೆ ಅದು ಅಂತ್ಯಪ್ರಾಸ.

### ಪ್ರಾಸದಲ್ಲಿರುವ ಇತರೆ ಆರು ವಿಧಗಳು

| | |
|---|---|
| **1.ಸಿಂಹಪ್ರಾಸ** | **4.ಅಜಪ್ರಾಸ** |
| **2.ಗಜಪ್ರಾಸ** | **5.ಶರಭಪ್ರಾಸ** |
| **3.ವೃಷಭಪ್ರಾಸ** | **6.ಹಯಪ್ರಾಸ** |

**1.ಸಿಂಹಪ್ರಾಸ:**–ಪ್ರಾಸಾಕ್ಷರದ ಹಿಂದಿನ ಸ್ವರವು ಹ್ರಸ್ವವಾಗಿದ್ದರೆ ಅದನ್ನು ಸಿಂಹಪ್ರಾಸ ಎನ್ನುವರು.

ಉದಾ:–1.ಕಪಟತನದಲಿ ಕಾಡುತ ಜನರನು 2. ಜಪವನು ಮಾಡಿದರೇನು ಫಲ



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

**2.ಗಜಪ್ರಾಸ:–** ಪ್ರಾಸಾಕ್ಷರದ ಹಿಂದಿನ ಸ್ವರವು ಧೀರ್ಘವಾಗಿದ್ದರೆ ಅದನ್ನು ಗಜಪ್ರಾಸ ಎನ್ನುವರು.

ಉದಾ:–1.**ಮಾತಾಪಿತರನು ಬಳಲಿಸಿದಾತನು**

2.**ಯಾತ್ರೆಯ** ಮಾಡಿದರೇನು ಫಲ

**3.ವೃಷಭಪ್ರಾಸ:–** ಪ್ರಾಸಾಕ್ಷರದ ಹಿಂದಿನ ಸ್ವರವು ಅನುಸ್ವರವಾಗಿದ್ದರೆ ಅದನ್ನು ವೃಷಭಪ್ರಾಸ ಎನ್ನುವರು.

ಉದಾ:–1.ಇಂದು ಬರಹೇಳರ್ಜುನ ರಣ

2. ಇಂದು ಲೇ ಭೀಮಂಗೆ ಮನದಲಿ

**4.ಅಜಪ್ರಾಸ:–** ಪ್ರಾಸಾಕ್ಷರದ ಹಿಂದಿನ ಸ್ವರವು ವಿಸರ್ಗವಾಗಿದ್ದರೆ ಅದನ್ನು ಅಜಪ್ರಾಸ ಎನ್ನುವರು.

ಉದಾ:–1.ಆಃ ಪೊರೆವನವನೆ ಪರಮ ಯ

2..ಶಃ ಪಾತ್ರನೆನಲ್ಕೆ ಜನಮನಿನಿಸಲಸದೆಯುಂ

**5.ಶರಭಪ್ರಾಸ:–** ಪ್ರಾಸಾಕ್ಷರವು ವಿಜಾತಿಯ ಸಂಯುಕ್ತಾಕ್ಷರದಿಂದ ಕೂಡಿದ್ದರೆ ಅದನ್ನು ಶರಭಪ್ರಾಸ ಎನ್ನುವರು.

ಉದಾ:–1.ಸತ್ಯವಂತರ ಸಂಗವಿರಲು ತೀರ್ಥವೇತಕೆ

2.ನಿತ್ಯಜ್ಞಾನಿಯಾದ ಮೇಲೆ ಚಿಂತೆಯೇತಕೆ

**6.ಹಯಪ್ರಾಸ:–** ಪ್ರಾಸಾಕ್ಷರವು ಸಜಾತಿಯ ಸಂಯುಕ್ತಾಕ್ಷರದಿಂದ ಕೂಡಿದ್ದರೆ ಅದನ್ನು ಹಯಪ್ರಾಸ ಎನ್ನುವರು.

ಉದಾ:–1.ನಿನ್ನ ಬಾಂದಳದಂತೆ

2.ನಿನ್ನ ಸಾಗರದಂತೆ

3.ನನ್ನ ಬಾಂದಳವಿಲಿ

4. .ನನ್ನ ಎದೆಯಿರಲಿ

**2.ಯತಿ:–**ಯತಿ ಎಂದರೆ ವಿರಾಮ ಎಂದರ್ಥ. ಪದ್ಯವಾಚನ ಮಾಡುವಾಗ ಅಥವಾ ಓದುವಾಗ ಪದ್ಯದ ಅರ್ಥಕ್ಕೆ ಅಡ್ಡಿಯಾಗದಂತೆ ಉಸಿರು ತೆಗೆದುಕೊಳ್ಳಲು ನಿಲ್ಲಿಸಿ ಓದುವ ಸ್ಥಾನವನ್ನು "ಯತಿ" ಎಂದು ಕರೆಯುತ್ತಾರೆ.



Use E-Papers, Save Tress
Above Line Hide When Print Out

**3.ಗಣ:–**ಗಣ ಎಂದರೆ ಗುಂಪು ಅಥವಾ ಸಮೂಹ ಎಂದರ್ಥ.ಛಂಧಸ್ಸು ಶಾಸ್ತ್ರದಲ್ಲಿ ಗಣ ಎಂದರೆ ಪದ್ಯದ ಪ್ರತಿ ಸಾಲಿನ ಅಕ್ಷರ ಅಥವಾ ಮಾತ್ರೆ ಅಥವಾ ಅಂಶಗಳ ಗುಂಪಿಗೆ "ಗಣ"ಎಂದು ಕರೆಯುತ್ತಾರೆ.

## ಗಣಗಳಲ್ಲಿ ಮೂರು ವಿಧ

**1.ಮಾತ್ರಾಗಣ:–**ಮಾತ್ರೆಗಳ ಆಧಾರದಿಂದ ಗಣ ವಿಭಾಗ ಮಾಡುವುದೇ ಮಾತ್ರಾಗಣ.ಅಕ್ಷರವನ್ನು ಉಚ್ಚರಿಸಲು ಬೇಕಾದ ಕಾಲವನ್ನು ಮಾತ್ರೆ ಎಂದು ಕರೆಯುತ್ತಾರೆ. ಉದಾ:–ಕಂದಪದ್ಯ,ಷಟ್ಪದಿ,ರಗಳೆಗಳು.

**2.ಅಕ್ಷರಗಣ:–**ಅಕ್ಷರಗಳ ಆಧಾರದಿಂದ ಗಣ ವಿಭಾಗ ಮಾಡುವುದೇ ಅಕ್ಷರ ಗಣ ಎಂದು ಕರೆಯುತ್ತಾರೆ ಉದಾ:–ವೃತ್ತಗಳು.

**3.ಅಂಶಗಣ:–**ಅಂಶಗಳ ಆಧಾರದಿಂದ ಗಣ ವಿಭಾಗ ಮಾಡುವುದೇ ಅಂಶಗಣ ಎಂದು ಕರೆಯುತ್ತಾರೆ

## ಅಂಶಗಣದಲ್ಲಿ ಈ ಕೆಳಗಿನಂತೆ ವಿಧಗಳಿವೆ

**1.ಬ್ರಹ್ಮಗಣ:–**ಎರಡು ಅಂಶಗಳ ಗಣವನ್ನು ಬ್ರಹ್ಮಗಣ ಎಂದು ಕರೆಯುತ್ತಾರೆ.

**2.ವಿಷ್ಣು ಗಣ:–**ಮೂರು ಅಂಶಗಳ ಗಣವನ್ನು ವಿಷ್ಣುಗಣ ಎಂದು ಕರೆಯುತ್ತಾರೆ.

**3.ರುದ್ರ ಗಣ:–**ನಾಲ್ಕು ಅಂಶಗಳ ಗಣವನ್ನು ರುದ್ರ ಗಣ ಎಂದು ಕರೆಯುತ್ತಾರೆ.

**ಮಾತ್ರಾಗಣ:–**ಮಾತ್ರೆಗಳ ಆಧಾರದಿಂದ ಗಣ ವಿಭಾಗ ಮಾಡುವುದೇ ಮಾತ್ರಾಗಣ ಎಂದು ಕರೆಯುತ್ತಾರೆ.

ಮಾತ್ರೆಗಳಲ್ಲಿ ಎರಡು ವಿಧ ಅವುಗಳೆಂದರೆ **1.ಲಘು 2.ಗುರು**

**1.ಲಘು:–**ಒಂದು ಮಾತ್ರಾ ಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರವನ್ನು ಲಘು ಎನ್ನುವರು ಇದರ ಸಂಕೇತ "U"ಲಘುವಿನ ಬೆಲೆ 1(ಒಂದು)

### ಲಘು ಆಗುವ ಸಂದರ್ಭಗಳು

1.ಹ್ರಸ್ವಸ್ವರಗಳು ಬಂದಾಗ ಲಘು ಆಗುತ್ತವೆ.



Use E-Papers, Save Tress
Above Line Hide When Print Out

| | | | | | |
|---|---|---|---|---|---|
| U | U | U | U | U | U |
| ಅ | ಇ | ಉ | ಋ | ಎ | ಒ |

2.ಹ್ರಸ್ವಸ್ವರಾಕ್ಷರದಿಂದ ಕೂಡಿದ  ಗುಣಿತಾಕ್ಷರಗಳು ಬಂದಾಗ

| | | | | | |
|---|---|---|---|---|---|
| U | U | U | U | U | U |
| ಕ | ಕಿ | ಕು | ಕೃ | ಕೆ | ಕೊ |

3.ಶಿಥಿಲದ್ವಿತ್ವದಿಂದ ಕೂಡಿದ ಅಕ್ಷರಗಳು ಬಂದಾಗ ಲಘು ಆಗುತ್ತವೆ. ಕುಳಿಗಾರ್ಳಿ  ಬೆಮರ್ವ ಎರ್ದೆ

[ಒತ್ತಿ ಹೇಳಬೇಕಾದ ಅಕ್ಷರವನ್ನು ತೇಲಿಸಿ ಹೇಳುವುದಕ್ಕೆ ಶಿಥಿಲದ್ವಿತ್ವ ಎಂದು ಕರೆಯುತ್ತಾರೆ.]

**2.ಗುರು:–**ಎರಡು ಅಥವಾ ಎರಡಕ್ಕಿಂತ ಹೆಚ್ಚು ಮಾತ್ರಾಕಾಲದಲ್ಲಿ ಉಚ್ಚಾರ ಮಾಡಲಾಗುವ ಅಕ್ಷರಗಳನ್ನು "ಗುರು"ಎಂದು ಕರೆಯುತ್ತಾರೆ. ಇದರ ಸಂಕೇತ (–) ಗುರುವಿನ ಬೆಲೆ 2(ಎರಡು)

## ಗುರು  ಆಗುವ ಸಂದರ್ಭಗಳು

1.ಅಕ್ಷರ ಪ್ರಕರಣದಲ್ಲಿ ದೀರ್ಘಸ್ವರಾಕ್ಷರಗಳು  ಬಂದಾಗ

| | | | | | |
|---|---|---|---|---|---|
| – | – | – | – | – | – |
| ಆ | ಈ | ಊ | ಏ | ಐ | ಔ |

2. ದೀರ್ಘಸ್ವರದಿಂದ ಕೂಡಿರುವ ಗುಣಿತಾಕ್ಷರಗಳು ಬಂದಾಗ

| | | | | | |
|---|---|---|---|---|---|
| – | – | – | – | – | – |
| ಕಾ | ಕೀ | ಕೂ | ಕೇ | ಕೈ | ಕೋ |

3.ಅನುಸ್ವರ,ವಿಸರ್ಗಗಳಿಂದ ಕೂಡಿರುವ ಅಕ್ಷರಗಳು ಬಂದಾಗ

| | | | |
|---|---|---|---|
| __U | __ | ___ | _ _ UU |
| ದುಃಖ | ಸಂ | ಅಂ | ಅಂತಃಪುರ |

4.ಸಂಯುಕ್ತಾಕ್ಷರದ ಹಿಂದಿನ ಅಕ್ಷರಕ್ಕೆ ಗುರು ಬಂದಾಗ

| | | | | | | |
|---|---|---|---|---|---|---|
| __U | __U | _U | _U | _U | _U | _UU |
| ಅಕ್ಕ | ಅಮ್ಮ | ಕಲ್ಲು | ಹಣ್ಣು | ಬೆಟ್ಟ | ಶಾಸ್ತ್ರ | ಸುಮ್ಮನೆ |



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು  ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

5.ವ್ಯಂಜನಾಕ್ಷರದ ಹಿಂದಿನ ಅಕ್ಷರ

| ___ | ___ | ___ | ___ | — — | – – |
|---|---|---|---|---|---|
| ನಿಲ್ | ಕಲ್ | ಷಣ್ | ತಿನ್ | ತಾಂಕಲ್ | ಮೇಣ್ |

**ಪಾದ:**–ಪದ್ಯದ ಪ್ರತಿ ಸಾಲನ್ನು ಪಾದ ಎಂದು ಕರೆಯುತ್ತಾರೆ.

**ದ್ವಿಪದಿ:**–ಎರಡು ಪಾದಗಳುಳ್ಳ ಪದ್ಯಜಾತಿಯನ್ನು ದ್ವಿಪದಿ ಎಂದು ಕರೆಯುತ್ತಾರೆ

**ತ್ರಿಪದಿ:**–ಮೂರು ಪಾದಗಳುಳ್ಳ ಪದ್ಯಜಾತಿಯನ್ನು ತ್ರಿಪದಿ ಎಂದು ಕರೆಯುತ್ತಾರೆ.

**ಚೌಪದಿ:**–ನಾಲ್ಕು ಪಾದಗಳುಳ್ಳ ಪದ್ಯಜಾತಿಯನ್ನು ಚೌಪದಿ ಎಂದು ಕರೆಯುತ್ತಾರೆ.

**ಷಟ್ಪದಿ:**–ಆರು ಪಾದಗಳುಳ್ಳ ಪದ್ಯಜಾತಿಯನ್ನು ಷಟ್ಪದಿ ಎಂದು ಕರೆಯುತ್ತಾರೆ.

**ಸಾನೆಟ್/ಅಷ್ಟ ಷಟ್ಪದಿ:**–14 ಪಾದಗಳುಳ್ಳ ಪದ್ಯಜಾತಿಯನ್ನು ಸಾನೆಟ್ ಎಂದು ಕರೆಯುತ್ತಾರೆ.

**ಪ್ರಸ್ತಾರ:**–ಪದ್ಯದ ಸಾಲುಗಳಲ್ಲಿರುವ ಅಕ್ಷರಗಳಿಗೆ ಲಘು,ಗುರುಗಳನ್ನು ನಿಯಾಮಾನುಸಾರವಾಗಿ ಗುರುತಿಸುವುದಕ್ಕೆ ಪ್ರಸ್ತಾರ ಎಂದು ಕರೆಯುತ್ತಾರೆ.

**ಚಂಪೂ:**–ಗದ್ಯ-ಪದ್ಯ ಮಿಶ್ರಿತ ಕಾವ್ಯವೇ ಚಂಪೂ ಎಂದು ಕರೆಯುತ್ತಾರೆ.

**ಶಿಥಿಲದ್ವಿತ್ವ:**– ಒತ್ತಿ ಹೇಳಬೇಕಾದ ಅಕ್ಷರವನ್ನು ತೇಲಿಸಿ ಹೇಳುವುದಕ್ಕೆ ಶಿಥಿಲದ್ವಿತ್ವ ಎಂದು ಕರೆಯುತ್ತಾರೆ.

**1.ಮಾತ್ರಾಗಣ:**–ಮಾತ್ರೆಗಳ ಆಧಾರದಿಂದ ಗಣ ವಿಭಾಗ ಮಾಡುವುದೇ ಮಾತ್ರಾಗಣ.ಅಕ್ಷರವನ್ನು ಉಚ್ಚರಿಸಲು ಬೇಕಾದ ಕಾಲವನ್ನು ಮಾತ್ರೆ ಎಂದು ಕರೆಯುತ್ತಾರೆ.  ಉದಾ:–ಕಂದಪದ್ಯ,ಷಟ್ಪದಿ,ರಗಳೆಗಳು.



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು  ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

# ಕಂದಪದ್ಯ

ಕಂದಪದ್ಯ ಎಂದರೆ ನಾಲ್ಕು ಸಾಲಿನ ಪದ್ಯವನ್ನು ಕಂದಪದ್ಯವೆಂದು ಕರೆಯುತ್ತಾರೆ.

## ಕಂದ ಪದ್ಯದ ಲಕ್ಷಣಗಳು

1.ಕಂದಪದ್ಯದ ನಾಲ್ಕು ಪಾದಗಳಲ್ಲಿ ಒಂದು ಮತ್ತು ಮೂರನೆಯ ಪಾದಗಳು ಹಾಗೂ ಎರಡು ಮತ್ತು ನಾಲ್ಕುನೆಯ ಪಾದಗಳು ಪರಸ್ಪರ ಸಮವಾಗಿರುತ್ತೇವೆ.

2.ಒಂದು ಮತ್ತು ಮೂರನೆಯ ಪಾದಗಳಲ್ಲಿ ನಾಲ್ಕು ಮಾತ್ರೆಯ ಮೂರು-ಮೂರು ಗಣಗಳು ಕಂಡು ಬರುತ್ತವೆ.

3. ಎರಡು ಮತ್ತು ನಾಲ್ಕನೆಯ ಪಾದಗಳಲ್ಲಿ ನಾಲ್ಕು ಮಾತ್ರೆಯ ಐದು-ಐದು ಗಣಗಳು ಕಂಡು ಬರುತ್ತವೆ.

4.ಕಂದಪದ್ಯದಲ್ಲಿ ಒಟ್ಟು 64 ಮಾತ್ರೆಗಳು16 ಗಣಗಳು ಕಂಡು ಬರುತ್ತೇವೆ.

| | | | | | |
|---|---|---|---|---|---|
| **4** | **4** | **4** | **12** | | |
| **UUU U** | **— —** | **UUUU** | | | |
| ಒಡೆಯಲು | ಜಾಂಡಂ | ಕುಲಗಿರಿ | | | |
| **4** | **4** | **4** | **4** | **4** | **20** |
| **UU___** | **UU__** | **UUUU** | **UU___** | **UU__** | |
| ಕೆಡೆಯಲ್ | ನಡುಗ | ಲ್ಕೊಡರಿಸು | ದಿವಿಜರ್ | ಸೆಡೆಯ | |
| **4** | **4** | **4** | **12** | | |
| **UUUU** | **U__U** | **__UU** | | | |
| ಲ್ಕೊಡರಿಸು | ವಿನಂಜ | ಟಾಸುರ | | | |
| **4** | **4** | **4** | **4** | **4** | **20** |
| **U__U** | **UU__** | **U__U** | **_ _** | **UU__** | |
| ಹಿಡಿಂಬ | ಬಕವೈ | ರಿಸಿಂಹ | ನಾದಂ | ಸೆಡೆಯ | |

*****ಪರೀಕ್ಷೆಯಲ್ಲಿ ಛಂದಸ್ಸು ಗುರುತಿಸಲು ಎರಡು ಸಾಲುಗಳನ್ನು ನೀಡಲಾಗುತ್ತದೆ.******





Use E-Papers, Save Tress
Above Line Hide When Print Out

# ಷಟ್ಪದಿಗಳು

ಆರು ಪಾದಗಳುಳ್ಳ ಪದ್ಯವೇ ಷಟ್ಪದಿಗಳು ಎಂದು ಕರೆಯುತ್ತಾರೆ.ಷಟ್ ಎಂದರೆ "ಆರು" ಪದಿ ಎಂದರೆ ಸಾಲು ಎಂದು ಕರೆಯುತ್ತಾರೆ. ಆರು ಸಾಲುಗಳನ್ನೊಳಗೊಂಡ ಪದ್ಯಜಾತಿಗೆ ಷಟ್ಪದಿಗಳು ಎಂದು ಕರೆಯುತ್ತಾರೆ.

## ಷಟ್ಪದಿಯ ಸಾಮಾನ್ಯ ಲಕ್ಷಣಗಳು

1.ಒಟ್ಟು ಆರು ಸಾಲುಗಳಿರುತ್ತವೆ.

2.ಮೊದಲ ಮೂರು ಸಾಲುಗಳಿಗೆ ಪೂರ್ವಾರ್ಧ,ನಂತರದ ಮೂರು ಸಾಲುಗಳಿಗೆ ಉತ್ತರಾರ್ಧ ಎಂದು ಕರೆಯುತ್ತಾರೆ. ಪೂರ್ವಾರ್ಧದ ಲಕ್ಷಣಗಳೇ ಉತ್ತರಾರ್ಧಕ್ಕೂ ಇರುತ್ತವೆ.

3.1,2,4,5,ನೇ ಸಾಲುಗಳು ಸಮವಾಗಿರುತ್ತವೆ.

4.3 ಮತ್ತು 6ನೇ ಸಾಲುಗಳು ಸಮವಾಗಿರುತ್ತವೆ..

## ಷಟ್ಪದಿಯ ವಿಧಗಳು

ಷಟ್ಪದಿಯಲ್ಲಿ 6 ವಿಧಗಳು ಅವುಗಳೆಂದರೆ

| ಷಟ್ಪದಿಯ ಹೆಸರು | 1,2,4,5ನೇಸಾಲುಗಳು | 3 ಮತ್ತು6ನೇ ಸಾಲು | ಒಟ್ಟುಮಾತ್ರೆಗಳು |
|---|---|---|---|
| 1.ಶರಷಟ್ಪದಿ | 4ಮಾತ್ರೆಯ2ಗಣ 08 | 4ಮಾತ್ರೆಯ3ಗಣ ಕೊನೆಯಲ್ಲಿ ಗುರು 14 | 60 |
| 2.ಕುಸುಮಷಟ್ಪದಿ | 5ಮಾತ್ರೆಯ2ಗಣ 10 | 5ಮಾತ್ರೆಯ3ಗಣ ಕೊನೆಯಲ್ಲಿ ಗುರು 17 | 74 |
| 3.ಭೋಗಷಟ್ಪದಿ | 3ಮಾತ್ರೆಯ4ಗಣ 12 | 3ಮಾತ್ರೆಯ6ಗಣ ಕೊನೆಯಲ್ಲಿ ಗುರು 20 | 88 |
| 4.ಭಾಮಿನಿಷಟ್ಪದಿ | 3 ಮಾತ್ರೆಯ2 ಗಣ<br>4ಮಾತ್ರೆಯ2ಗಣ 14 | 3ಮಾತ್ರೆಯ3ಗಣ3x3=9 1ಗುರು<br>4ಮಾತ್ರೆಯ3ಗಣ4X3=12 23 | 102 |
| 5.ಪರಿವರ್ಧಿನಿಷಟ್ಪದಿ | 4ಮಾತ್ರೆಯ4ಗಣ 16 | 4ಮಾತ್ರೆಯ6ಗಣ ಕೊನೆಯಲ್ಲಿ ಗುರು 26 | 116 |
| 6.ವಾರ್ಧಕಷಟ್ಪದಿ | 5ಮಾತ್ರೆಯ4ಗಣ 20 | 5ಮಾತ್ರೆಯ6ಗಣ ಕೊನೆಯಲ್ಲಿ ಗುರು 32 | 144 |

# ಭಾಮಿನಿ ಷಟ್ಪದಿ

## ಭಾಮಿನಿ ಷಟ್ಪದಿಯ ಲಕ್ಷಣಗಳು

1.1,2,4,5,ನೇಯ ಸಾಲುಗಳು ಸಮನಾಗಿದ್ದು ಮತ್ತು 3 ಮತ್ತು 4 ಮಾತ್ರೆಗಳ ಎರಡೆರಡು ಗಣಗಳು ಪ್ರತಿ ಸಾಲಿನಲ್ಲಿ ಕಂಡು ಬರುತ್ತವೆ.



Use E-Papers, Save Tress
Above Line Hide When Print Out

2.3ಮತ್ತು 6ನೇ ಸಾಲುಗಳು ಒಂದು ಸಮವಾಗಿದ್ದು 3 ಮತ್ತು 4 ಮಾತ್ರೆಗಳ 3–3 ಗಣಗಳು ಕಂಡು ಬರುತ್ತವೆ.

3.3 ಮತ್ತು 6ನೇ ಪಾದಗಳ ಕೊನೆಯ ಅಕ್ಷರ ಲಘುವಾಗಿದ್ದರೂ ಸಹ ಗುರುವೆಂದು ಪರಿಗಣಿಸಬೇಕು.

4. ಭಾಮಿನಿ ಷಟ್ಪದಿಯಲ್ಲಿ 102 ಮಾತ್ತೆಗಳು 28 ಗಣಗಳು ಕಂಡು ಬರುತ್ತವೆ.

| | | | | | | | |
|---|---|---|---|---|---|---|---|
| 03 | 04 | 03 | 04 | 14 | | | |
| —U | —UU | —U | UUUU | | | | |
| ಮಕ್ಕ | ಳೈವರೊ | ಳಾನು | ಹಿರಿಯನು | | | | |
| 03 | 04 | 03 | 04 | 14 | | | |
| —U | —UU | —U | – – | | | | |
| ತಕ್ಕ | ಮಾತೆಯ | ಮಾತು | ಸಂದೇ | | | | |
| 03 | 04 | 03 | 04 | 03 | 04 | ಗುರು | 21 |
| —U | UU— | UUU | UU— | UUU | UUUU | — | |
| ಹಕ್ಕೆ | ನೆಲೆಯಿ | ಲ್ಲದುನಿ | ಲಲಿಥಾ | ರುಣಿಯ | ಬಯಸುವ | ರೆ | |
| 03 | 04 | 03 | 04 | 14 | | | |
| —U | — – | —U | UUUU | | | | |
| ತಕ್ಕು | ದೇವಾ | ತಾರ | ನರಸಿಯೊ | | | | |
| 03 | 04 | 03 | 04 | 14 | | | |
| —U | UUUU | —U | —UU | | | | |
| ಚೊಕ್ಕ | ತನವಿರ | ಲಾರು | ಮೆಚ್ಚುವ | | | | |
| 03 | 04 | 03 | 04 | 03 | 04 | ಗುರು | 21 |
| —U | — — | —U | —UU | —U | UU— | — | |
| ರಕ್ಕ | ಹೇಳೌ | ಹೇಸ | ಳೇಜಯ | ಲಕ್ಷ್ಮಿ | ತನಗೆಂ | ದ | |

***ಪರೀಕ್ಷೆಯಲ್ಲಿ ಛಂದಸ್ಸು ಗುರುತಿಸಲು ಮೂರು ಸಾಲುಗಳನ್ನು ನೀಡಲಾಗುತ್ತದೆ.****

## ಭಾಮಿನಿ ಷಟ್ಪದಿಯಲ್ಲಿ ಮೊದಲ ಸಾಲಿನಲ್ಲಿ 14 ಮಾತ್ರೆಗಳು ಬರುತ್ತವೆ.

## ವಾರ್ಧಕ ಷಟ್ಪದಿಯಲ್ಲಿ ಮೊದಲ ಸಾಲಿನಲ್ಲಿ 20 ಮಾತ್ರೆಗಳು ಬರುತ್ತವೆ.



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

# ವಾರ್ಧಕ ಷಟ್ಪದಿ

## ವಾರ್ಧಕ ಷಟ್ಪದಿಯ ಲಕ್ಷಣಗಳು

1.1,2,4,5,ನೇಯ ಸಾಲುಗಳು ಸಮವಾಗಿದ್ದು 5 ಮಾತ್ರೆಗಳ 4 ಗಣಗಳು ಪ್ರತಿ ಸಾಲಿನಲ್ಲಿ ಕಂಡು ಬರುತ್ತವೆ.

2.3 ಮತ್ತು 6ನೇ ಸಾಲುಗಳು ಸಮವಾಗಿದ್ದು 5 ಮಾತ್ರೆಗಳ 6 ಗಣಗಳು ಕಂಡು ಬರುತ್ತವೆ.

3.3 ಮತ್ತು 6ನೇ ಪಾದಗಳ ಕೊನೆಯ ಅಕ್ಷರ ಲಘುವಾಗಿದ್ದರೂ ಸಹ ಗುರುವೆಂದು ಪರಿಗಣಿಸಬೇಕು.

4.ವಾರ್ಧಕ ಷಟ್ಪದಿಯಲ್ಲಿ 144 ಮಾತ್ತೆಗಳು 28 ಗಣಗಳು ಕಂಡು ಬರುತ್ತವೆ.

| | | | | | | | |
|---|---|---|---|---|---|---|---|
| 05 | 05 | 05 | 05 | 20 | | | |
| UU_U | __U__ | UUUUU | UUUUU | | | | |
| ತೆಗೆದುತ್ತ | ರೀಯಮಂ | ಮುರಿದುಕುದು | ರೆಯಗಳಕೆ | | | | |
| 05 | 05 | 05 | 05 | 20 | | | |
| UUUUU | __UUU | _ _U | UUU__ | | | | |
| ಬಿಗಿದುಕದ | ಳೀದ್ರಮಕೆ | ಕಟ್ಟಲ್ಕೆ | ಮುನಿಸುತರ್ | | | | |
| 05 | 05 | 05 | 05 | 05 | 05 | ಗುರು | 30+2 |
| UUUUU | _U_ | UUUUU | __U__ | UUUUU | _UUU | __ | |
| ಮಿಗೆನಡುಗಿ | ಬೇಡಬೇ | ಡರಸುಗಳ | ವಾಜಿಯಂ | ಬಿಡುಬಡಿವ | ರೆಮ್ಮನೆನ | ಲು | |
| 05 | 05 | 05 | 05 | 20 | | | |
| UUU- | U U__U | __UUU | _UUU | | | | |
| ನಗುತೆಪಾ | ರ್ವರಮಕ್ಕ | ಳಂಜಿದೊಡೆ | ಜಾನಕಿಯ | | | | |
| 05 | 05 | 05 | 05 | 20 | | | |
| UUUUU | UUUUU | _U__ | __UUU | | | | |
| ಮಗನಿದಕೆ | ಬೆದರುವನೆ | ಪೋಗಿನೀ | ವೆಂದುಲವ | | | | |
| 05 | 05 | 05 | 05 | 05 | 05 | ಗುರು | 30+2 |
| UUUUU | _U_ | UUU_ | UU_U | _ _U | __ _U | __ | |
| ನಗುಡುತನ | ದಿಂದೆಬಿ | ಲ್ದಿರುವನೇ | ರಿಸಿತೀಡಿ | ಜೇಗೈದು | ನಿಂತಿರ್ದ | ನು | |



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

**2.ಅಕ್ಷರಗಣ:–**ಅಕ್ಷರಗಳ ಆಧಾರದಿಂದ ಗಣ ವಿಭಾಗ ಮಾಡುವುದೇ ಅಕ್ಷರ ಗಣ ಎಂದು ಕರೆಯುತ್ತಾರೆ ಮೂರು–ಮೂರು ಅಕ್ಷರಗಳಿಗೆ ಒಂದೊಂದರಂತೆ ಗಣ ವಿಭಾಗ ಮಾಡಲಾಗುತ್ತದೆ.ವೃತ್ತಗಳು ಅಕ್ಷರಗಣಕ್ಕೆ ಸೇರಿದ ಪದ್ಯ ಪ್ರಕಾರವಾಗಿದೆ ಆರು ವೃತ್ತಗಳನ್ನು ಖ್ಯಾತ ಕರ್ನಾಟಕಗಳೆಂದು ಕರೆಯುತ್ತಾರೆ.

**ಸೂತ್ರ:–ಯಮಾತಾರಾಜಭಾನಸಲಗಂ**

| | | | |
|---|---|---|---|
| ಯಮಾತಾ | U— — | ಲಘು ಮೊದಲಲ್ಲಿ ಬರಲು= | ಯಗಣ |
| ಮಾತಾರಾ | — — — | ಗುರು ಮೂರಿರೆ= | ಮಗಣ |
| ತಾರಾಜ | — —U | ಲಘು ಕೊನೆಯಲ್ಲಿ ಬರಲು= | ತಗಣ |
| ರಾಜಭಾ | —U— | ಲಘು ಮಧ್ಯದಲ್ಲಿ ಬರಲು= | ರಗಣ |
| ಜಭಾನ | U—U | ಗುರು ಮಧ್ಯದಲ್ಲಿ ಬರಲು= | ಜಗಣ |
| ಭಾನಸ | —UU | ಗುರು ಮೊದಲಲ್ಲಿ ಬರಲು= | ಭಗಣ |
| ನಸಲ | UUU | ಲಘು ಮೂರಿರೆ= | ನಗಣ |
| ಸಲಗಂ | UU— | ಗುರು ಕೊನೆಯಲ್ಲಿ ಬರಲು= | ಸಗಣ |

**ಮನೆಯಲ್ಲಿ ಭಯ ಬಂದು ಜರ ಬಂದು ಸತ್ತ**

1. ಗುರು–ಲಘು ಮೂರಿರೆ ಮ–ನಗಣ (ಮಗಣ _ _ _) (ನಗಣ UUU)

2.ಗುರು–ಲಘು ಮೊದಲಲ್ಲಿ ಬರಲು ಭ–ಯಗಣ (ಭಗಣ —UU) (ಯಗಣ U– –)

3. ಗುರು–ಲಘು ನಡುವಿರೆ ಜ–ರಗಣ (ಜಗಣ U—U) (ರಗಣ —U—)

4. ಗುರು–ಲಘು ಕೊನೆಯಲ್ಲಿ ಬರಲು ಸ–ತಗಣ (ಸಗಣ UU—) (ತಗಣ _ _ U)

# ವೃತ್ತಗಳ ವಿಧಗಳು

ವೃತ್ತಗಳಲ್ಲಿ 6 ವಿಧಗಳು ಅವುಗಳೆಂದರೆ

1.ಚಂಪಕ ಮಾಲಾ ವೃತ್ತ 21 ಅಕ್ಷರಗಳು

2.ಸ್ರಗ್ಧರಾ ವೃತ್ತ 21 ಅಕ್ಷರಗಳು





Use E-Papers, Save Tress
Above Line Hide When Print Out

3.ಉತ್ಪಲಮಾಲಾ ವೃತ್ತ 20 ಅಕ್ಷರಗಳು

4.ಮತ್ತೇಭವಿಕ್ರೀಡಿತ ವೃತ್ತ 20 ಅಕ್ಷರಗಳು

5.ಶಾರ್ದೂಲ ವಿಕ್ರೀಡಿತ ವೃತ್ತ 19 ಅಕ್ಷರಗಳು

6.ಮಹಾಸ್ರಗ್ಧರಾ ವೃತ್ತ 22 ಅಕ್ಷರಗಳು

ಖ್ಯಾತ ಕರ್ನಾಟಕಗಳಲ್ಲಿ ಅತ್ಯಂತ ದೊಡ್ಡ ವೃತ್ತ **ಮಹಾಸ್ರಗ್ಧರಾ ವೃತ್ತ**

ಖ್ಯಾತ ಕರ್ನಾಟಕಗಳಲ್ಲಿ ಅತ್ಯಂತ ಚಿಕ್ಕ ವೃತ್ತ **ಶಾರ್ದೂಲ ವಿಕ್ರೀಡಿತ ವೃತ್ತ**

**1.ಚಂಪಕ ಮಾಲಾ ವೃತ್ತ :–**ನಾಲ್ಕು ಸಮಾನ ಪಾದಗಳುಳ್ಳ ಪದ್ಯ ಜಾತಿ ಪ್ರತಿಯೊಂದು ಪಾದದಲ್ಲಿ **21** ಅಕ್ಷರಗಳು ಕಂಡು ಬರುತ್ತವೆ ಪ್ರತಿ ಪಾದದಲ್ಲಿಯೂ **ನ,ಜ,ಭ,ಜ,ಜ,ಜ,ರ,**ಎಂಬ 7 ಗಣಗಳಿರುತ್ತವೆ. ಮೊದಲು 4 ಲಘುಗಳಿದ್ದರೆ ಅದು .ಚಂಪಕ ಮಾಲಾ ವೃತ್ತವೆಂದು ಕರೆಯುತ್ತಾರೆ.

| ನಗಣ | ಜಗಣ | ಭಗಣ | ಜಗಣ | ಜಗಣ | ಜಗಣ | ರಗಣ |
|---|---|---|---|---|---|---|
| UUU | U__U | __UU | U__U | U__U | U__U | _U__ |
| ಖಳನೊ | ಳವಿಂಗೆ | ಕುಪ್ಪೆವ | ರಮೆಂಬ | ವೊಲಾಂಬ | ರಮುಂಟೆ | ನಿನ್ನದೊಂ |

**ಸೂತ್ರ:–**

| ನಗಣ | ಜಗಣ | ಭಗಣ | ಜಗಣ | ಜಗಣ | ಜಗಣ | ರಗಣ |
|---|---|---|---|---|---|---|
| UUU | U__U | __UU | U__U | U__U | U__U | __U__ |
| ನಜಭ | ಜಜಂಜ | ರಂಬಗೆ | ಗೊಳುತ್ತಿ | ರೆಚಂಪ | ಕಮಾಲೆ | ಯೆಂದಪರ್ |

**2.ಸ್ರಗ್ಧರಾ ವೃತ್ತ:–** ನಾಲ್ಕು ಸಮಾನ ಪಾದಗಳುಳ್ಳ ಪದ್ಯ ಜಾತಿ ಪ್ರತಿಯೊಂದು ಪಾದದಲ್ಲಿ **21** ಅಕ್ಷರಗಳು ಕಂಡು ಬರುತ್ತವೆ ಪ್ರತಿ ಪಾದದಲ್ಲಿಯೂ **ಮ,ರ,ಭ,ನ,ಯ,ಯ,ಯ,**ಎಂಬ 7 ಗಣಗಳಿರುತ್ತವೆ. ಮೊದಲು 4 ಗುರುಗಳಿದ್ದರೆ ಅದು ಸ್ರಗ್ದರಾ ವೃತ್ತವೆಂದು ಕರೆಯುತ್ತಾರೆ.

| ಮಗಣ | ರಗಣ | ಭಗಣ | ನಗಣ | ಯಗಣ | ಯಗಣ | ಯಗಣ |
|---|---|---|---|---|---|---|
| _ _ _ | __U__ | _UU | UUU | U– – | U– – | U– – |
| ಕಾರುಣ್ಯಂ | ಗೆಯ್ದುಸ | ದ್ದೀಕ್ಷೆಯ | ನೆಸಗಿ | ಲಸಚ್ಚಿ | ತ್ರಿಯಾಮಾ | ರ್ಗಮಂಪೇ |



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

## ಸೂತ್ರ:-

| ಮಗಣ | ರಗಣ | ಭಗಣ | ನಗಣ | ಯಗಣ | ಯಗಣ | ಯಗಣ |
|---|---|---|---|---|---|---|
| — —— — | —U— | — UU | UUU | U– – | U– – | U– – |
| ತೋರಲ್ ಮಂ | ರಂಭನಂ | ಮೂಯಗ | ಣಮುಮ | ದೆತಾಂಸ್ರ | ಗ್ಧರಾವೃ | ತ್ತಮಕ್ಕುಂ |

**3.ಉತ್ಪಲಮಾಲಾ ವೃತ್ತ :-** ನಾಲ್ಕು ಸಮಾನ ಪಾದಗಳುಳ್ಳ ಪದ್ಯ ಜಾತಿ ಪ್ರತಿಯೊಂದು ಪಾದದಲ್ಲಿ 20 ಅಕ್ಷರಗಳು ಕಂಡು ಬರುತ್ತವೆ ಪ್ರತಿ ಪಾದದಲ್ಲಿಯೂ **ಭ,ರ,ನ,ಭ,ಭ,ರ,**ಎಂಬ 6 ಗಣಗಳಿರುತ್ತವೆ. ಮತ್ತು ಒಂದು ಲಘು ಮತ್ತು ಒಂದು ಗುರು ಕಂಡು ಬರುತ್ತವೆ.

| ಭಗಣ | ರಗಣ | ನಗಣ | ಭಗಣ | ಭಗಣ | ರಗಣ | ಲ+ಗು |
|---|---|---|---|---|---|---|
| _UU | —U— | UUU | _UU | _UU | —U— | U_ |
| ಚಾಗದ | ಭೋಗದ | ಕ್ಕರದ | ಗೇಯದ | ಗೊಟ್ಟಿಯ | ಲಂಪಿನಿಂ | ಪುಗ |

## ಸೂತ್ರ:-

| ಭಗಣ | ರಗಣ | ನಗಣ | ಭಗಣ | ಭಗಣ | ರಗಣ | ಲ+ಗು |
|---|---|---|---|---|---|---|
| _UU | —U— | UUU | _UU | _ UU | —U— | U _ |
| ಉತ್ಪಲ | ಮಾಲೆಯ | ಪ್ಪುದುಭ | ರಂನಭ | ಭಂರಲ | ಗಂನೆಗ | ಳ್ದಿರಲ್ |

**4.ಮತ್ತೇಭವಿಕ್ರೀಡಿತ ವೃತ್ತ:-** ನಾಲ್ಕು ಸಮಾನ ಪಾದಗಳುಳ್ಳ ಪದ್ಯ ಜಾತಿ ಪ್ರತಿಯೊಂದು ಪಾದದಲ್ಲಿ 20 ಅಕ್ಷರಗಳು ಕಂಡು ಬರುತ್ತವೆ ಪ್ರತಿ ಪಾದದಲ್ಲಿಯೂ **ಸ,ಭ,ರ,ನ,ಮ,ಯ,**ಎಂಬ 6 ಗಣಗಳಿರುತ್ತವೆ. ಮತ್ತು ಒಂದು ಲಘು ಮತ್ತು ಒಂದು ಗುರು ಕಂಡು ಬರುತ್ತವೆ.

| ಸಗಣ | ಭಗಣ | ರಗಣ | ನಗಣ | ಮಗಣ | ಯಗಣ | ಲ+ಗು |
|---|---|---|---|---|---|---|
| UU— | _UU | —U— | UUU | _ _ _ | U– – | U _ |
| ಕೆಲವುಂ | ಬಲ್ಲವ | ರಿಂದಕ | ಲ್ತುಕೆಲ | ವಂಶಾಸ್ತ್ರಂ | ಗಳಂಕೇ | ಳು ತಂ |



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

## ಸೂತ್ರ:-

| ಸಗಣ | ಭಗಣ | ರಗಣ | ನಗಣ | ಮಗಣ | ಯಗಣ | ಲ+ಗು |
|---|---|---|---|---|---|---|
| UU__ | _UU | __U__ | UUU | __ __ _ | U- - | U _ |
| ಸಭರಂ | ನಂದುಯ | ಲಂಗಮುಂ | ಬಗೆಗೊ | ಳಲ್ ಮತ್ತೇ | ಭವಿಕ್ರೀ | ಡಿತಂ |

**5.ಶಾರ್ದೂಲ ವಿಕ್ರೀಡಿತ ವೃತ್ತ:-** ನಾಲ್ಕು ಸಮಾನ ಪಾದಗಳುಳ್ಳ ಪದ್ಯ ಜಾತಿ ಪ್ರತಿಯೊಂದು ಪಾದದಲ್ಲಿ **19** ಅಕ್ಷರಗಳು ಕಂಡು ಬರುತ್ತವೆ ಪ್ರತಿ ಪಾದದಲ್ಲಿಯೂ **ಮ,ಸ,ಜ,ಸ,ತ,ತ,**ಎಂಬ **6** ಗಣಗಳಿರುತ್ತವೆ. ಮತ್ತು ಕೊನೆಯಲ್ಲಿ ಒಂದು ಗುರು ಕಂಡು ಬರುತ್ತದೆ.

| ಮಗಣ | ಸಗಣ | ಜಗಣ | ಸಗಣ | ತಗಣ | ತಗಣ | ಗುರು |
|---|---|---|---|---|---|---|
| _ _ _ | UU__ | U__U | UU__ | _ _ U | _ _ U | ___ |
| ಮಾತಂಗಾ | ಸುರವೈ | ರಿಯಲ್ಲಿ | ಪಡೆದುಂ | ಬಿಲ್ಲಂಥ | ನುರ್ವಿದ್ಯೆ | ಗಂ |

## ಸೂತ್ರ

| ಮಗಣ | ಸಗಣ | ಜಗಣ | ಸಗಣ | ತಗಣ | ತಗಣ | ಗುರು |
|---|---|---|---|---|---|---|
| _ _ ___ | UU__ | U__U | UU___ | _ _ U | _ _ U | __ |
| ಕಣ್ಗೊ ಪ್ಪಲ್ | ಮಸಜಂ | ಸತಂತ | ಗಮುಮೂ | ಶಾರ್ದೂಲ | ವಿಕ್ರೀಡಿ | ತಂ |

**6.ಮಹಾಸ್ರಗ್ಧರಾ ವೃತ್ತ :-** ನಾಲ್ಕು ಸಮಾನ ಪಾದಗಳುಳ್ಳ ಪದ್ಯ ಜಾತಿ ಪ್ರತಿಯೊಂದು ಪಾದದಲ್ಲಿ **22** ಅಕ್ಷರಗಳು ಕಂಡು ಬರುತ್ತವೆ ಪ್ರತಿ ಪಾದದಲ್ಲಿಯೂ **ಸ,ತ,ತ,ನ,ಸ,ರ,ರ,**ಎಂಬ **7** ಗಣಗಳಿರುತ್ತವೆ. ಮತ್ತು ಕೊನೆಯಲ್ಲಿ ಒಂದು ಗುರು ಕಂಡು ಬರುತ್ತದೆ.

| ಸಗಣ | ತಗಣ | ತಗಣ | ನಗಣ | ಸಗಣ | ರಗಣ | ರಗಣ | ಗುರು |
|---|---|---|---|---|---|---|---|
| UU__ | _ _ U | _ _ U | UUU | UU__ | __U__ | __U__ | ___ |
| ಹರಿಸಂ | ಧಾನಕ್ಕೆ | ವಂದಂದ | ವಗಡಿ | ಸಿದಹಂ | ಕಾರಮೆ | ಲ್ಲಿತ್ತೊಕ್ಕ | ಷ್ಣಾಂ |



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

## ಸೂತ್ರ:-

| ಸಗಣ | ತಗಣ | ತಗಣ | ನಗಣ | ಸಗಣ | ರಗಣ | ರಗಣ | ಗುರು |
|---|---|---|---|---|---|---|---|
| UU— | – – U | – – U | UUU | UU— | —U— | —U— | —— |
| ಸತತಂ | ನಂಸಂರ | ರಗಂನೆ | ರೆದೆಸೆ | ಯೆಮಹಾ | ಸ್ರಗ್ದರಾ | ವೃತ್ತಮ | ಕ್ಕುಂ |

| ಕ್ರ.ಸಂಖ್ಯೆ | ವೃತ್ತಗಳ ಹೆಸರು | ಅಕ್ಷರಗಳ ಸಂಖ್ಯೆ | ಗಣಗಳು | ಗಣಗಳಸಂಖ್ಯೆ |
|---|---|---|---|---|
| 01 | ಚಂಪಕ ಮಾಲಾ ವೃತ್ತ | 21 ಅಕ್ಷರಗಳು<br>UUUU | ನ,ಜ,ಭ,ಜ,ಜ,ಜ,ರ, | 07 |
| 02 | ಸ್ರಗ್ದರಾ ವೃತ್ತ | 21 ಅಕ್ಷರಗಳು<br>– – – – | ಮ,ರ,ಭ,ನ,ಯ,ಯ,ಯ, | 07 |
| 03 | ಉತ್ಪಲಮಾಲಾ ವೃತ್ತ | 20 ಅಕ್ಷರಗಳು<br>_UU | ಭ,ರ,ನ,ಭ,ಭ,ರ, | 06 |
| 04 | ಮತ್ತೇಭವಿಕ್ರೀಡಿತ ವೃತ್ತ | 20 ಅಕ್ಷರಗಳು<br>UU— | ಸ,ಭ,ರ,ನ,ಮ,ಯ, | 06 |
| 05 | ಶಾರ್ದೂಲ ವಿಕ್ರೀಡಿತ ವೃತ್ತ | 19 ಅಕ್ಷರಗಳು<br>– – – | ಮ,ಸ,ಜ,ಸ,ತ,ತ, | 06 |
| 06 | ಮಹಾಸ್ರಗ್ಧರಾ ವೃತ್ತ | 22 ಅಕ್ಷರಗಳು<br>UU_ – – | ಸ,ತ,ತ,ನ,ಸ,ರ,ರ, | 07 |

***ಪರೀಕ್ಷೆಯಲ್ಲಿ ಛಂದಸ್ಸು ಗುರುತಿಸಲು ಒಂದು ಸಾಲನ್ನು ನೀಡಲಾಗುತ್ತದೆ.****

| | | |
|---|---|---|
| 1.ಗುರು ಆದಿಯಲ್ಲಿ ಬಂದರೆ | _UU | ಉತ್ಪಲಮಾಲಾ ವೃತ್ತ |
| 2.ಮೂರು ಗುರು ಮೊದಲು ಬಂದರೆ | – – – | ಶಾರ್ದೂಲ ವಿಕ್ರೀಡಿತ ವೃತ್ತ |
| 3. ಗುರು ನಾಲ್ಕಾಗಿದ್ದರೆ | – – – – | ಸ್ರಗ್ದರಾ ವೃತ್ತ |
| 4.ಎರಡು ಲಘು, ಎರಡು ಗುರು | UU_ – | ಮತ್ತೇಭವಿಕ್ರೀಡಿತ ವೃತ್ತ |
| 5. ಎರಡು ಲಘು, ಮೂರು ಗುರು ಬಂದರೆ | UU– – – | ಮಹಾಸ್ರಗ್ಧರಾ ವೃತ್ತ |
| 6.ನಾಲ್ಕು ಲಘುವಾದರೆ | UUUU | ಚಂಪಕ ಮಾಲಾ ವೃತ್ತ |



Use E-Papers, Save Tress
Above Line Hide When Print Out

# ರಗಳೆಗಳು

ರಗಳೆ ಎಂಬುದು "ರಘಟಾ" ಎಂಬ ಸಂಸ್ಕೃತ ಶಬ್ದದ ತದ್ಭವವಾಗಿದೆ.ರಗಳೆಗಳು ಇಷ್ಟೇ ಸಾಲುಗಳಿರಬೇಕೆಂಬ ನಿಯಮವಿಲ್ಲ ಆದರೆ ಎಲ್ಲ ಸಾಲುಗಳೂ ಸಮಾನವಾದ ಮಾತ್ರಾಗಣಗಳಿಂದ ಕೂಡಿರುತ್ತವೆ.ಮತ್ತು ಎರಡೆರಡು ಸಾಲುಗಳಲ್ಲಿ ಪ್ರಾಸದ ನಿಯಮವಿರುತ್ತದೆ.ಅಂತ್ಯ ಪ್ರಾಸವೂ ಇರುತ್ತದೆ.

# ರಗಳೆಯ ವಿಧಗಳು

ರಗಳೆಯ ವಿಧಗಳಲ್ಲಿ 3 ವಿಧ ಅವುಗಳೆಂದರೆ

1.ಉತ್ಸಾಹ ರಗಳೆ

2.ಮಂದಾನಿಲ ರಗಳೆ

3.ಲಲಿತ ರಗಳೆ

**1.ಉತ್ಸಾಹ ರಗಳೆ:-** ಎರಡೆರಡು ಸಾಲುಗಳಲ್ಲಿ ಪ್ರಾಸವನ್ನಿಟ್ಟುಕೊಂಡು ಮೂರು ಮಾತ್ರೆಯ ನಾಲ್ಕು ಗಣಗಳ ಗಣನಿಯಮದಿಂದ ಸಾಲುಗಳ ನಿಯಮವಿಲ್ಲದೆ ಇರುವ ಪದ್ಯವನ್ನು ಉತ್ಸಾಹ ರಗಳೆ ಎಂದು ಕರೆಯುತ್ತಾರೆ.

| | | | |
|---|---|---|---|
| 03 | 03 | 03 | 03 |
| —U | —U | —U | —U |
| ತುಂಬಿ | ವಿಂಡಿ | ನಂತೆ | ಪಾಡಿ |
| 03 | 03 | 03 | 03 |
| —U | —U | —U | —U |
| ಜಕ್ಕ | ವಕ್ಕಿ | ಯಂತೆ | ಕೂಡಿ |

**2. ಮಂದಾನಿಲ ರಗಳೆ:-**ನಾಲ್ಕು ಮಾತ್ರೆಗಳ ನಾಲ್ಕು ಗಣಗಳು ಪ್ರತಿಪಾದದಲ್ಲೂ ಇರುತ್ತವೆ. ಎರಡೆರಡು ಸಾಲುಗಳಿಗೆ ಪ್ರಾಸ ನಿಯಮವಿರುತ್ತದೆ.ಅಂತ್ಯಪ್ರಾಸವೂ ಇರುತ್ತದೆ.

| | | | |
|---|---|---|---|
| 04 | 04 | 04 | 04 |
| —UU | — — | UUUU | — — |
| ಆಡುವ | ಗುಂಡ | ಯ್ಯನಹೊಸ | ನೃತ್ಯಂ |



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

| | | | |
|---|---|---|---|
| 04 | 04 | 04 | 04 |
| __UU | UU_ | _UU | __ __ |
| ನೋಡುವ | ಶಿವನಂ | ಮುಟ್ಟಿತು | ಸತ್ಯಂ |

**3.ಲಲಿತ ರಗಳೆ:-** ಐದು ಮಾತ್ರೆಗಳ ನಾಲ್ಕು ಗಣಗಳ ಪ್ರತಿ ಪಾದದಲ್ಲೂ ಇರುತ್ತವೆ. ಎರಡೆರಡು ಸಾಲುಗಳಿಗೆ ಪ್ರಾಸ ನಿಯಮವಿರುತ್ತದೆ.ಅಂತ್ಯಪ್ರಾಸವೂ ಇರುತ್ತದೆ

| | | | |
|---|---|---|---|
| 05 | 05 | 05 | 05 |
| UUUUU | __U__ | UU__U | _ _ U |
| ಸುರುಚಿರಮೆ | ನಿಷ್ಟಮೀ | ಸಲಮೊಗ್ಗೆ | ಯಂಕೊಂಡು |
| 05 | 05 | 05 | 05 |
| UU__U | ___UUU | UUUUU | __ __U |
| ಇರುವಂತಿ | ಯೊಳ್‌ಮೆರೆವ | ಬಿರಿಮುಗುಳ | ಳಂಕೊಂಡು |

*******************************

ಗುರುವೊಂದಾದಿಯೊಳುತ್ಪಲಂ ಗುರುಮೊದಲ್ ಮೂರಾಗೆ ಶಾರ್ದೂಲಮಾ ।
ಗುರುನಾಲ್ಕಾಗಿರಲಂತು ಸ್ರಗ್ಧರೆ ಲಘು ದ್ವಂದ್ವಂ ಗುರುದ್ವಂದ್ವಮಾ ।
ಗಿರೆ ಮತ್ತೇಭ ಲಘುದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಾ ।
ಹರಿಣಾಕ್ಷೀ,ಲಘು ನಾಲ್ಕು ಚಂಪಕಮಿವಾರುಂ ಖ್ಯಾತಕರ್ಣಾಟಕಂ

***********************

ಶೂಲದ ಮೇಲಣ ವಿಭೋಗವೇನಾದಡೇನೊ !
ನಾನಾ ವರ್ಣದ ಸಂಸಾರ ಹಾವು ಹಾವಾಡಿಗನ ಸ್ನೇಹದಂತೆ
ತನ್ನಾತ್ಮ ತನಗೆ ಹಗೆಯಾದ ಮತ್ತೆ
ಬಿನ್ನಾಣವುಂಟೆ,ಮಹಾದಾನಿ ಕೂಡಲ ಸಂಗಮದೇವಾ?



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು  ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

# ಅಲಂಕಾರಗಳು

ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವ ಶಬ್ದಾರ್ಥಗಳ ಚಮತ್ಕಾರವೇ ಅಲಂಕಾರವೆಂದು ಕರೆಯುತ್ತಾರೆ.

## ಅಲಂಕಾರದ ವಿಧಗಳು

ಅಲಂಕಾರಗಳಲ್ಲಿ 2 ವಿಧ ಅವುಗಳೆಂದರೆ

1.ಶಬ್ದಾಲಂಕಾರ

2.ಅರ್ಥಾಲಂಕಾರ

**1.ಶಬ್ದಾಲಂಕಾರ:–** ಶಬ್ದ ಅಥವಾ ಪದಗಳ ಜೋಡಣೆಯ ಮೂಲಕ ಕಾವ್ಯ ಅಥವಾ ಮಾತಿನ ಸೌಂದರ್ಯ ಹೆಚ್ಚಿಸಿದರೆ ಅದನ್ನು ಶಬ್ದಾಲಂಕಾರವೆಂದು ಕರೆಯುತ್ತಾರೆ.

## ಶಬ್ದಾಲಂಕಾರದ ವಿಧಗಳು

ಶಬ್ದಾಲಂಕಾರದಲ್ಲಿ 3 ವಿಧ ಅವುಗಳೆಂದರೆ

1.ಅನುಪ್ರಾಸ

2.ಯಮಕ

3.ಚಿತ್ರಕವಿತ್ವ

**1.ಅನುಪ್ರಾಸ:–**ಅಕ್ಷರಗಳ ಪುನರಾವರ್ತನೆಯನ್ನು ಅನುಪ್ರಾಸವೆಂದು ಕರೆಯುತ್ತಾರೆ.

## ಅನುಪ್ರಾಸದ ವಿಧಗಳು

1.ವೃತ್ತ್ಯನುಪ್ರಾಸ

2.ಛೇಕಾನುಪ್ರಾಸ

**1.ವೃತ್ತ್ಯನುಪ್ರಾಸ:–**ಒಂದು ಅಥವಾ ಎರಡು ವ್ಯಂಜನಾಕ್ಷರಗಳು ಪದ್ಯದ ಸಾಲುಗಳಲ್ಲಿ ಮತ್ತೆ-ಮತ್ತೆ ಬಂದರೆ ಅಂದರೆ ಪುನರಾವರ್ತನೆಗೊಂಡರೆ ಅದನ್ನು ವೃತ್ತ್ಯನುಪ್ರಾಸ ಎಂದು ಕರೆಯುತ್ತಾರೆ.

ಉದಾ:–1.ಪಿಟ್ಟಂ ತಿಂದಂ ಬೆಟ್ಟಂ ಕಿತ್ತಿಟ್ಟಂ.

2.''ಎಳಗಿಳಿಗಳ ಬಳಗಗಳು ನಳನಳಿಸಿ ಬೆಳೆದ ಕಳವೆಯ ಎಳೆಯ ಕಾಳಿಗೆ ಎಳಸಿ ಬಂದವು''



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

**2.ಛೇಕಾನುಪ್ರಾಸ:**–ಎರಡೆರೆಡು ವ್ಯಂಜನಗಳು ಪುನರಾವರ್ತನೆಗೊಂಡರೆ ಅದನ್ನು ಛೇಕಾನುಪ್ರಾಸ ಎಂದು ಕರೆಯುತ್ತಾರೆ.

ಉದಾ:–ಹಾಡಿ ಹಾಡಿ ರಾಗ ಬಂತು

ಉಗುಳಿ ಉಗುಳಿ ರೋಗ ಬಂತು

**2.ಯಮಕ:**–ಮೂರು ಅಥವಾ ಮೂರಕ್ಕಿಂತ ಹೆಚ್ಚು ಪದವು ಒಂದು ಪದ್ಯಭಾಗದಲ್ಲಿ ಆದಿ ಅಂತ್ಯ ಮಧ್ಯದಲ್ಲಿ ನಿಯತವಾಗಿ ಬರುವುದನ್ನು ಯಮಕ ಎಂದು ಕರೆಯುತ್ತಾರೆ

ಉದಾ:–ಹರಿವ ಬದಿ ಭೋರ್ಗರೆತ ಕನ್ನಡ

ಸರಸ ಪಕ್ಷಿಗಳಲ್ಲಿಯೂ ಕನ್ನಡ

ಗುರುವಿಕೆಯ ವರಕೇಸರಿಯ ಗರ್ಜನೆಯೂ ಕನ್ನಡ.

**3.ಚಿತ್ರಕವಿತ್ವ:**–ಬುದ್ಧಿ ಸಾಮರ್ಥ್ಯ ಪ್ರದರ್ಶನಕ್ಕಾಗಿ ಶಬ್ಧಗಳ ಚಮತ್ಕಾರದಿಂದ ರಚನೆಯಾದ ಪದ್ಯಗಳನ್ನು ಚಿತ್ರಕವಿತ್ವ ಎನ್ನುವರು.

ಉದಾ:–ನನ್ದನ ನನ್ದನ ನಿನ್ನೋನನ್ದನ

ಮನ್ದದ ಮನ್ದಿಯ ಅನ್ದದ ಚನ್ದನವನ

**2.ಅರ್ಥಾಲಂಕಾರ:**–ಪದಗಳ ಅರ್ಥ ಚಮತ್ಕಾರದಿಂದ ಕಾವ್ಯದ ಸೌಂದರ್ಯ ಹೆಚ್ಚಿದರೆ ಅದನ್ನು ಅರ್ಥಾಲಂಕಾರವೆಂದು ಕರೆಯುತ್ತಾರೆ.

**1.ಉಪಮೇಯ:**–ವಾಕ್ಯದಲ್ಲಿ ಕವಿ ಯಾವುದನ್ನು ವರ್ಣಿಸುತ್ತಾನೋ ಅದು ಉಪಮೇಯ.

[ವರ್ಣಿಸಿಕೊಳ್ಳುವ ಪದ]

**2ಉಪಮಾನ:**–ಯಾವ ವಸ್ತುವನ್ನು ಆಧಾರವಾಗಿಟ್ಟುಕೊಂಡು ವರ್ಣಿಸಲಾಗಿದೆಯೋ ಅದು ಉಪಮಾನ.

[ವರ್ಣಿಸುವ ಪದ]

**3.ಉಪಮ ವಾಚಕ:**–ಉಪಮೇಯ,ಉಪಮಾನಗಳನ್ನು ಕೂಡಿಸುವ ಪದ [ಅಂತೆ,ವೊಲು,ಅಂಗ,ಹಾಂಗ]

**4.ಸಾಧಾರಣ ಧರ್ಮ:**–ಗುಣ,ಕ್ರಿಯೆಗಳು



Use E-Papers, Save Tress
Above Line Hide When Print Out

# ಅರ್ಥಾಲಂಕಾರದ ವಿಧಗಳಲ್ಲಿ 6 ವಿಧಗಳು ಅವುಗಳೆಂದರೆ

1.ಉಪಮಾಲಂಕಾರ

2.ರೂಪಕಾಲಂಕಾರ

3.ಉತ್ಪ್ರೇಕ್ಷಾಲಂಕಾರ

4.ದೃಷ್ಟಾಂತಾಲಂಕಾರ

5.ಅರ್ಥಾಂತರನ್ಯಾಸಲಂಕಾರ

6.ಶ್ಲೇಷಾಲಂಕಾರ

**1.ಉಪಮಾಲಂಕಾರ:**-ಉಪಮಾ ಎಂದರೆ ಹೋಲಿಕೆ ಎಂದರ್ಥ.ಉಪಮೇಯ ಉಪಮಾನಗಳೊಳಗೆ ಹೋಲಿಕೆ ಇರುವ ಅಲಂಕಾರವೇ ಉಪಮಾಲಂಕಾರ.

01."ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ"

ಅಲಂಕಾರದ ಹೆಸರು :ಉಪಮಾಲಂಕಾರ

ಲಕ್ಷಣ:-ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ.

*ಉಪಮೇಯ:* ನೀಚರಿಗೆ ಮಾಡಿದ ಉಪಕಾರ

ಉಪಮಾನ: ಹಾವಿಗೆ ಹಾಲೆರೆಯುವುದು

ಉಪಮಾವಾಚಕ: ಅಂತೆ

ಸಮಾನಧರ್ಮ: ಲುಪ್ತವಾಗಿದೆ

ಸಮನ್ವಯ: ಇಲ್ಲಿ ಉಪಮೇಯವಾದ ನೀಚರಿಗೆ ಮಾಡಿದ ಉಪಕಾರವನ್ನು ಉಪಮಾನವಾದ ಹಾವಿಗೆ ಹಾಲೆರೆಯುವುದಕ್ಕೆ ಹೋಲಿಸಲಾಗಿದೆ.ಉಪಮಾ ವಾಚಕ ಅಂತೆ ಪದವಿದ್ದು ಸಮಾನಧರ್ಮ ಲುಪ್ತವಾಗಿದೆ ಆದ್ದರಿಂದ ಇದು ಉಪಮಾಲಂಕಾರವಾಗಿದೆ.



Use E-Papers, Save Tress
Above Line Hide When Print Out

**02.**ಕಿವಿಯೊಳಗೆ ಹಿತವಚನ ಹೊಕ್ಕಾಗ ತಿಳಿನೀರು ಹೊಕ್ಕಂತೆ ಸಂಕಟಪಟ್ಟುಕೊಳ್ಳುತ್ತಾರೆ.

ಅಲಂಕಾರದ ಹೆಸರು :ಉಪಮಾಲಂಕಾರ

ಲಕ್ಷಣ: ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ

ಉಪಮೇಯ:ಹಿತವಚನ

ಉಪಮಾನ:ತಿಳಿನೀರು

ಉಪಮಾವಾಚಕ: ಅಂತೆ

ಸಮಾನ ಧರ್ಮ:ಸಂಕಟಪಡುವುದು

ಸಮನ್ವಯ:ಉಪಮೇಯವಾದ ಹಿತವಚನ ಎನ್ನುವುದನ್ನು ಉಪಮಾನವಾದ ತಿಳಿನೀರು ಎಂಬ ಪದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

**03.**"ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು "

ಅಲಂಕಾರದ ಹೆಸರು :ಉಪಮಾಲಂಕಾರ

ಲಕ್ಷಣ: ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ

ಉಪಮೇಯ: ಭೀಮ ದುರ್ಯೋಧನರು

ಉಪಮಾನ: ಮದಗಜಗಳು

ಉಪಮಾ ವಾಚಕ: ಅಂತೆ

ಸಮಾನಧರ್ಮ: ಹೋರಾಟ

ಸಮನ್ವಯ: ಇಲ್ಲಿ ಉಪಮೇಯವಾದ ಭೀಮ ದುರ್ಯೋಧನರನ್ನು ಉಪಮಾನವಾದ ಮದಗಜಗಳಿಗೆ ಹೋಲಿಸಲಾಗಿದೆ. ಉಪಮಾವಾಚಕ ಅಂತೆ ಪದವಿದ್ದು ಸಮಾನಧರ್ಮ ಹೋರಾಟ ಎಂಬ ಪದ ಇರುವುದರಿಂದ ಇದು ಉಪಮಾಲಂಕಾರವಾಗಿದೆ.

**04.** ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು .

ಅಲಂಕಾರದ ಹೆಸರು :ಉಪಮಾಲಂಕಾರ

ಲಕ್ಷಣ: ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ

ಉಪಮೇಯ: ಶಲಾಕೆ

ಉಪಮಾನ: ಸ್ಫಟಿಕ

ಉಪಮಾ ವಾಚಕ: ಅಂತೆ



Use E-Papers, Save Tress
Above Line Hide When Print Out

ಸಮಾನಧರ್ಮ: ಅಸ್ಪಷ್ಟವಾಗಿದೆ

ಸಮನ್ವಯ: ಇಲ್ಲಿ ಉಪಮೇಯವಾದ ಶಲಾಕೆಯನ್ನು ಉಪಮಾನವಾದ ಸ್ಫಟಿಕಕ್ಕೆ ಹೋಲಿಸಲಾಗಿದೆ.ಉಪಮಾವಾಚಕ ಅಂತೆ ಪದವಿದ್ದು ಸಮಾನಧರ್ಮ ಅಸ್ಪಷ್ಟವಾಗಿರುವುದರಿಂದ ಇದು ಉಪಮಾಲಂಕಾರವಾಗಿದೆ.

05"ಸಿಡಿಲಸಿಡಿದ್ಹಾಂಗ ಗುಂಡು ಸುರಿದಾವ"

ಅಲಂಕಾರದ ಹೆಸರು: ಉಪಮಾಲಂಕಾರ

ಲಕ್ಷಣ:- ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ

ಉಪಮೇಯ: ಗುಂಡು ಸುರಿಯುವುದು

ಉಪಮಾನ: ಸಿಡಿಲು ಸಿಡಿಯುವುದು

ಉಪಮಾವಾಚಕ:ಹಾಂಗ

ಸಮಾನಧರ್ಮ : ಅಸ್ಪಷ್ಟವಾಗಿದೆ

ಸಮನ್ವಯ: ಇಲ್ಲಿ ಉಪಮೇಯವಾದ ಗುಂಡು ಸುರಿಯುವುದನ್ನು ಉಪಮಾನವಾದ ಸಿಡಿಲು ಸಿಡಿಯುವುದಕ್ಕೆ ಹೋಲಿಸಲಾಗಿದೆ ಆದ್ದರಿಂದ ಇದು ಉಪಮಾಲಂಕಾರವಾಗಿದೆ.

06.ಪೂರ್ವ ದಿಕ್ಕಿನಲ್ಲಿ ಮೂಡಿದ ಸೂರ್ಯನು ಮುತ್ತೈದೆಯ ಹಣೆಯಲ್ಲಿರುವ ಕುಂಕುಮದಂತೆ ಕಂಡನು .

ಅಲಂಕಾರದ ಹೆಸರು :ಉಪಮಾಲಂಕಾರ

ಲಕ್ಷಣ: ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ

ಉಪಮೇಯ: ಪೂರ್ವ ದಿಕ್ಕಿನಲ್ಲಿ ಮೂಡಿದ ಸೂರ್ಯ

ಉಪಮಾನ: ಮುತ್ತೈದೆಯ ಹಣೆಯಲ್ಲಿರುವ ಕುಂಕುಮ

ಉಪಮಾವಾಚಕ: ಅಂತೆ

ಸಮಾನಧರ್ಮ:ಕಾಣುವುದು

ಸಮನ್ವಯ: ಇಲ್ಲಿ ಉಪಮೇಯವಾದ ಪೂರ್ವ ದಿಕ್ಕಿನಲ್ಲಿ ಮೂಡಿದ ಸೂರ್ಯ ಎನ್ನುವುದನ್ನು ಉಪಮಾನವಾದ ಮುತ್ತೈದೆಯ ಹಣೆಯಲ್ಲಿರುವ ಕುಂಕುಮ ಎಂಬ ವಾಕ್ಯಕ್ಕೆ ಹೋಲಿಸಲಾಗಿದೆ.ಆದ್ದರಿಂದ ಇದು ಉಪಮಾಲಂಕಾರ.

07.ರಾಮಲಕ್ಷ್ಮಣರು ಅಶ್ವಿನಿ ದೇವತೆಗಳಂತೆ ಶೋಭಿಸುತ್ತಿದ್ದರು

ಅಲಂಕಾರದ ಹೆಸರು :ಉಪಮಾಲಂಕಾರ

ಲಕ್ಷಣ: ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ



Use E-Papers, Save Tress
Above Line Hide When Print Out

ಉಪಮೇಯ: ರಾಮಲಕ್ಷ್ಮಣರು

ಉಪಮಾನ: ಅಶ್ವಿನಿ ದೇವತೆಗಳು

ಉಪಮಾವಾಚಕ: ಅಂತೆ

ಸಮಾನ ಧರ್ಮ: ಶೋಭಿಸುತ್ತಿದ್ದರು

ಸಮನ್ವಯ: ಇಲ್ಲಿ ಉಪಮೇಯವಾದ ರಾಮಲಕ್ಷ್ಮಣರು ಉಪಮಾನವಾದ ಅಶ್ವಿನಿ ದೇವತೆಗಳಿಗೆ ಹೋಲಿಸಿ ವರ್ಣಿಸಲಾಗಿದೆ ಆದ್ದರಿಂದ ಇದು ಉಪಮಾಲಂಕಾರವಾಗಿದೆ.

**08.**ಸೀತೆಯ ಮುಖ ಕಮಲದಂತೆ ಅರಳಿತು

ಅಲಂಕಾರದ ಹೆಸರು :ಉಪಮಾಲಂಕಾರ

ಲಕ್ಷಣ: ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ

ಉಪಮೇಯ: ಸೀತೆಯ ಮುಖ

ಉಪಮಾನ:ಕಮಲ

ಉಪಮಾವಾಚಕ: ಅಂತೆ

ಸಮಾನಧರ್ಮ:ಅರಳಿತು

ಸಮನ್ವಯ: ಇಲ್ಲಿ ಉಪಮೇಯವಾದ ಸೀತೆಯ ಮುಖ ಎನ್ನುವುದನ್ನು ಉಪಮಾನವಾದ ಕಮಲಕ್ಕೆ ಹೋಲಿಸಲಾಗಿದೆ.ಆದ್ದರಿಂದ ಇದು ಉಪಮಾಲಂಕಾರ.

**09.**ನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನದೊಂದಳವು

ಅಲಂಕಾರದ ಹೆಸರು : ಉಪಮಾಲಂಕಾರ

ಲಕ್ಷಣ: ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ

ಉಪಮೇಯ: ದ್ರುಪನ ಅಳವು

ಉಪಮಾನ:ಕುಪ್ಪೆಯನ್ನೇ ಶ್ರೇಷ್ಠವೆಂದು ಭಾವಿಸಿದ ನೊಣ

ಉಪಮಾವಾಚಕ: ವೊಲ್

ಸಮನ್ವಯ: ಇಲ್ಲಿ ಉಪಮೇಯವಾದ ದ್ರುಪನ ಅಳವನ್ನು ಉಪಮಾನವಾದ ಕುಪ್ಪೆಯನ್ನೇ ಶ್ರೇಷ್ಠವೆಂದು ಭಾವಿಸಿದ ನೊಣಕ್ಕೆ ಹೋಲಿಸಲಾಗಿದೆ.ಆದ್ದರಿಂದ ಇದು ಉಪಮಾಲಂಕಾರ.

**10.**ಮನೋರಮೆಯ ಹಣೆ ಬಾಲಚಂದ್ರನಂತೆ ಆಕರ್ಷಣೀಯವಾಗಿತ್ತು.

ಅಲಂಕಾರದ ಹೆಸರು : ಉಪಮಾಲಂಕಾರ



Use E-Papers, Save Tress
Above Line Hide When Print Out

ಲಕ್ಷಣ: ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ

ಉಪಮೇಯ: ಮನೋರಮೆಯ ಹಣೆ

ಉಪಮಾನ: ಬಾಲಚಂದ್ರ

ಉಪಮಾವಾಚಕ: ಅಂತೆ

ಸಮಾನಧರ್ಮ: ಆಕರ್ಷಣೀಯವಾಗಿರುವುದು

ಸಮನ್ವಯ: ಇಲ್ಲಿ ಉಪಮೇಯವಾದ ಮನೋರಮೆಯ ಹಣೆ ಎನ್ನುವುದನ್ನು ಉಪಮಾನವಾದ ಬಾಲಚಂದ್ರನಿಗೆ ಹೋಲಿಸಲಾಗಿದೆ.ಆದ್ದರಿಂದ ಇದು ಉಪಮಾಲಂಕಾರ.

11.ಮರನೇರಿದ ಮರ್ಕಟನಂತೆ

ಅಲಂಕಾರದ ಹೆಸರು : ಉಪಮಾಲಂಕಾರ

ಲಕ್ಷಣ: ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ

ಉಪಮೇಯ: ಬಿಟ್ಟು ಹೋಗಿದೆ [ಚಂಚಲ ಮನಸ್ಸು]

ಉಪಮಾನ: ಮರನೇರಿದ ಮರ್ಕಟ

ಉಪಮಾವಾಚಕ: ಅಂತೆ

ಸಮಾನಧರ್ಮ: ಸ್ಪಷ್ಟವಾಗಿಲ್ಲ

ಸಮನ್ವಯ: ಇಲ್ಲಿ ಉಪಮೇಯವಾದ ಚಂಚಲ ಮನಸ್ಸನ್ನು ಉಪಮಾನವಾದ ಮರನೇರಿದ ಮರ್ಕಟಕ್ಕೆ ಹೋಲಿಸಲಾಗಿದೆ.ಆದ್ದರಿಂದ ಇದು ಉಪಮಾಲಂಕಾರ.

12.ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷಬೆರೆದಂತೆ

ಅಲಂಕಾರದ ಹೆಸರು : ಉಪಮಾಲಂಕಾರ

ಲಕ್ಷಣ: ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ

ಉಪಮೇಯ: ಸತಿಪತಿಗಳೊಂದಾಗದವನ ಭಕ್ತಿ

ಉಪಮಾನ: ಅಮೃತದೊಳು ವಿಷ

ಉಪಮಾವಾಚಕ: ಅಂತೆ

ಸಮಾನಧರ್ಮ: ಸ್ಪಷ್ಟವಾಗಿಲ್ಲ

ಸಮನ್ವಯ: ಇಲ್ಲಿ ಉಪಮೇಯವಾದ ಸತಿಪತಿಗಳೊಂದಾಗದವನ ಭಕ್ತಿಯನ್ನು ಉಪಮಾನವಾದ ಅಮೃತದೊಳು ವಿಷಕ್ಕೆ ಹೋಲಿಸಲಾಗಿದೆ.ಆದ್ದರಿಂದ ಇದು ಉಪಮಾಲಂಕಾರ.



Use E-Papers, Save Tress
Above Line Hide When Print Out

13.ಹಸುಳೆಯಂದದಿ ಒಲಿದಳು.

ಅಲಂಕಾರದ ಹೆಸರು : ಉಪಮಾಲಂಕಾರ

ಲಕ್ಷಣ: ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ

ಉಪಮೇಯ: ಲುಪ್ತವಾಗಿದೆ (ಶಬರಿ)

ಉಪಮಾನ: ಹಸುಳೆ

ಉಪಮಾವಾಚಕ:ಅಂದದಿ

ಸಮಾನಧರ್ಮ: ಒಲಿಯುವುದು

ಸಮನ್ವಯ: ಇಲ್ಲಿ ಉಪಮೇಯವಾದ ರಾಮನಿಗೆ ಹಂಬಲಿಸಿ ಒಲಿದ ಶಬರಿಯನ್ನು ಉಪಮಾನವಾದ ಹಸುಳೆಗೆ ಹೋಲಿಸಲಾಗಿದೆ.ಆದ್ದರಿಂದ ಇದು ಉಪಮಾಲಂಕಾರ.

14.ಬಳಾರಿಯ ಮನೆಯಂ ಹರಕೆಯ ಕುರಿಯಂ ಪುಗಿಸುವಂತೆ.

ಅಲಂಕಾರದ ಹೆಸರು : ಉಪಮಾಲಂಕಾರ

ಲಕ್ಷಣ: ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ

ಉಪಮೇಯ: ಲುಪ್ತವಾಗಿದೆ

(ದುಷ್ಟಬುದ್ಧಿಯು ತನ್ನ ತಂದೆಯನ್ನುವೃಕ್ಷದ ಪೊಟರೆಯಲ್ಲಿ ಅಡಗಿಸಿದುದು)

ಉಪಮಾನ: ಬಳಾರಿಯ ಮನೆಯಂ ಹರಕೆಯ ಕುರಿಯಂ ಪುಗಿಸುವುದು

ಉಪಮಾವಾಚಕ:ಅಂತೆ

ಸಮಾನಧರ್ಮ:ಪುಗಿಸುವುದು

ಸಮನ್ವಯ: ಇಲ್ಲಿ ಉಪಮೇಯವಾದ ದುಷ್ಟಬುದ್ಧಿಯು ತನ್ನ ತಂದೆಯನ್ನು ವೃಕ್ಷದ ಪೊಟರೆಯಲ್ಲಿ ಅಡಗಿಸಿದುದುನ್ನು ಉಪಮಾನವಾದ ಮಾರಿಯ ಮನೆಯಲ್ಲಿ ಹರಕೆಯ ಕುರಿಯನ್ನು ಹೋಗಿಸುವುದಕ್ಕೆ ಹೋಲಿಸಿರುವುದರಿಂದ ಇದು ಉಪಮಾಲಂಕಾರ.

# ರೂಪಕಾಲಂಕಾರ

ಉಪಮೇಯ ಮತ್ತು ಉಪಮಾನಗಳು ಎರಡೂ ಒಂದೇ ಎಂದು ಭೇದವಿಲ್ಲದಂತೆ ಹೇಳುವ ಅಲಂಕಾರಕ್ಕೆ ರೂಪಕಾಲಂಕಾರ ಎನ್ನುವರು.

01..ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ.





Use E-Papers, Save Tress
Above Line Hide When Print Out

ಅಲಂಕಾರದ ಹೆಸರು :ರೂಪಕಾಲಂಕಾರ

ಲಕ್ಷಣ: ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡು ಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದು ರೂಪಕಾಲಂಕಾರ.

ಉಪಮೇಯ: ಒಡಲಬೇಗೆ

ಉಪಮಾನ: ಬೆಂಕಿಯುರಿ

ಸಮನ್ವಯ: ಇಲ್ಲಿ ಉಪಮೇಯವಾದ ಅಯೋಧ್ಯೆಯ ಪ್ರಜೆಗಳ ಒಡಲ ಬೇಗೆಯನ್ನು ಉಪಮಾನವಾದ ಬೆಂಕಿಯುರಿಗೆ ಅಬೇಧವಾಗಿ ಊಹಿಸಿರುವುದರಿಂದ ಇದು ರೂಪಕಾಲಂಕಾರ.

**02**"ಮಾರಿಗೌತಣವಾಯ್ತು ನಾಳಿನ ಭಾರತವು "

ಅಲಂಕಾರದ ಹೆಸರು:ರೂಪಕಾಲಂಕಾರ

ಲಕ್ಷಣ: ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡು ಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದು ರೂಪಕಾಲಂಕಾರ.

ಉಪಮೇಯ: ನಾಳಿನ ಭಾರತ ಯುದ್ಧ

ಉಪಮಾನ: ಮಾರಿಯ ಔತಣ

ಸಮನ್ವಯ: ಇಲ್ಲಿ ಉಪಮೇಯವಾದ ನಾಳಿನ ಭಾರತ ಯುದ್ಧವನ್ನು ಉಪಮಾನವಾದ ಮಾರಿಯ ಔತಣಕ್ಕೆ ಅಬೇಧವಾಗಿ ಊಹಿಸಿರುವುದರಿಂದ ಇದು ರೂಪಕಾಲಂಕಾರ.

**03**.ಸಜ್ಜನರಿಗೆ ಗುರುವಚನ ಎನ್ನುವುದು ಕಿವಿಗೆ ಒಂದು ಆಭರಣ.

ಅಲಂಕಾರದ ಹೆಸರು:ರೂಪಕಾಲಂಕಾರ

ಲಕ್ಷಣ: ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡು ಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದು ರೂಪಕಾಲಂಕಾರ.

ಉಪಮೇಯ: ಗುರುವಚನ

ಉಪಮಾನ:ಆಭರಣ

ಸಮನ್ವಯ:ಇಲ್ಲಿ ಉಪಮೇಯವಾದ ಗುರುವಚನಕ್ಕೂ ಉಪಮಾನವಾದ ಆಭರಣಕ್ಕೂ ಅಭೇದವಾಗಿ ರೂಪಿಸಿ ವರ್ಣಿಸಲಾಗಿದೆ.



Use E-Papers, Save Tress
Above Line Hide When Print Out

04.ಸೀತೆಯ ಮುಖ ಕಮಲ ಅರಳಿತು.

ಅಲಂಕಾರದ ಹೆಸರು:ರೂಪಕಾಲಂಕಾರ

ಲಕ್ಷಣ: ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡು ಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದು ರೂಪಕಾಲಂಕಾರ.

ಉಪಮೇಯ: ಸೀತೆಯ ಮುಖ

ಉಪಮಾನ:ಕಮಲ

ಸಮನ್ವಯ:ಇಲ್ಲಿ ಉಪಮೇಯವಾದ ಸೀತೆಯ ಮುಖವನ್ನು ಉಪಮಾನವಾದ ಕಮಲ ಎಂದು ಅಭೇದವಾಗಿ ರೂಪಿಸಿ ವರ್ಣಿಸಲಾಗಿದೆ.

05.ಶೋಕದುಲ್ಕೆ

ಅಲಂಕಾರದ ಹೆಸರು:ರೂಪಕಾಲಂಕಾರ

ಲಕ್ಷಣ: ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡು ಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದು ರೂಪಕಾಲಂಕಾರ.

ಉಪಮೇಯ: ಶೋಕ

ಉಪಮಾನ:ಉಲ್ಕೆ

ಸಮನ್ವಯ:ಇಲ್ಲಿ ಉಪಮೇಯವಾದ ಶೋಕವನ್ನುಉಪಮಾನವಾದ ಉಲ್ಕೆಗೆ ಅಭೇದವಾಗಿ ರೂಪಿಸಿ ವರ್ಣಿಸಲಾಗಿದೆ.

06.ಶಿಕ್ಷಣವು ಸಂಜೀವಿನಿ

ಅಲಂಕಾರದ ಹೆಸರು:ರೂಪಕಾಲಂಕಾರ

ಲಕ್ಷಣ: ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡು ಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದು ರೂಪಕಾಲಂಕಾರ.

ಉಪಮೇಯ: ಶಿಕ್ಷಣ

ಉಪಮಾನ: ಸಂಜೀವಿನಿ



Use E-Papers, Save Tress
Above Line Hide When Print Out

ಸಮನ್ವಯ:ಇಲ್ಲಿ ಉಪಮೇಯವಾದ ಶಿಕ್ಷಣವನ್ನು ಉಪಮಾನವಾದ ಸಂಜೀವಿನಿಗೆ ಅಭೇದವಾಗಿ ರೂಪಿಸಿ ವರ್ಣಿಸಲಾಗಿದೆ.

7.ಶಾನುಭೋಗರ ವದನಾರವಿಂದದಲ್ಲಿ ಮುಗುಳ್ನಗೆ ಮೂಡಿತು.

ಅಲಂಕಾರದ ಹೆಸರು:ರೂಪಕಾಲಂಕಾರ

ಲಕ್ಷಣ: ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡು ಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದು ರೂಪಕಾಲಂಕಾರ.

ಉಪಮೇಯ: ವದನ

ಉಪಮಾನ: ಅರವಿಂದ

ಸಮನ್ವಯ:ಇಲ್ಲಿ ಉಪಮೇಯವಾದ ವದನವನ್ನು ಉಪಮಾನವಾದ ಅರವಿಂದಗೆ ಅಭೇದವಾಗಿ ರೂಪಿಸಿ ವರ್ಣಿಸಲಾಗಿದೆ.

**3.ಉತ್ಪ್ರೇಕ್ಷಾಲಂಕಾರ:–**ಉಪಮೇಯವಾದ ವಸ್ತುವನ್ನುಅಥವಾ ಸನ್ನಿವೇಶವನ್ನು ಉಪಮಾನವಾದ ವಸ್ತುವನ್ನಾಗಿ ಅಥವಾ ಸನ್ನಿವೇಶವನ್ನಾಗಿ ಕಲ್ಪಿಸುವುದೇ ಉತ್ಪ್ರೇಕ್ಷಾಲಂಕಾರವೆಂದು ಕರೆಯುತ್ತಾರೆ.

01.ಅಚ್ಛೋದ ಸರೋವರವು ತ್ರೈಲೋಕ್ಯ ಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು .

ಅಲಂಕಾರದ ಹೆಸರು :ಉತ್ಪ್ರೇಕ್ಷಾಲಂಕಾರಲಕ್ಷಣ: ಉಪಮೇಯವಾದ ವಸ್ತುವನ್ನು ಅಥವಾ ಸನ್ನಿವೇಶವನ್ನು ಉಪಮಾನವಾದ ವಸ್ತುವನ್ನಾಗಿ ಅಥವಾ ಸನ್ನಿವೇಶವನ್ನಾಗಿ ಕಲ್ಪಿಸುವುದೇ ಉತ್ಪ್ರೇಕ್ಷಾಲಂಕಾರ

ಉಪಮೇಯ: ಅಚ್ಛೋದ ಸರೋವರ

ಉಪಮಾನ: ರನ್ನಗನ್ನಡಿ

ಸಮನ್ವಯ: ಉಪಮೇಯವಾದ ಅಚ್ಛೋದ ಸರೋವರವನ್ನು ಉಪಮಾನವಾದ ರನ್ನ ಗನ್ನಡಿ ಎಂ ಬು ದಾಗಿ ಕಲ್ಪಿಸಿರುವುದರಿಂದ ಇದು ಉತ್ಪ್ರೇಕ್ಷಾಲಂಕಾರವಾಗಿದೆ.

**4.ದೃಷ್ಟಾಂತಾಲಂಕಾರ:–**ಎರಡು ಬೇರೆ ಬೇರೆ ವಾಕ್ಯಗಳಲ್ಲಿ ಅರ್ಥಸಾದೃಶ್ಯದಿಂದ ಬಿಂಬ ಪ್ರತಿಬಿಂಬ ಭಾವವು ತೋರಿ ಬಂದರೆ ಅದು ದೃಷ್ಟಾಂತಾಲಂಕಾರವೆಂದು ಕರೆಯುತ್ತಾರೆ.



Use E-Papers, Save Tress
Above Line Hide When Print Out

1.ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.

ಅಲಂಕಾರದ ಹೆಸರು :ದೃಷ್ಟಾಂತಾಲಂಕಾರ

ಲಕ್ಷಣ: ಎರಡು ಬೇರೆ ಬೇರೆ ವಾಕ್ಯಗಳು (ಉಪಮೇಯ,ಉಪಮಾನ) ಅರ್ಥ ಸಾದೃಶ್ಯ ದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ ಅದನ್ನು ದೃಷ್ಟಾಂತಾಲಂಕಾರ.

ಉಪಮೇಯ: ಮಾತು ಬಲ್ಲವನಿಗೆ ಜಗಳವಿಲ್ಲ

ಉಪಮಾನ: ಊಟ ಬಲ್ಲವನಿಗೆ ರೋಗವಿಲ್ಲ

ಸಮನ್ವಯ: ಇಲ್ಲಿ ಮಾತು ಬಲ್ಲವನಿಗೆ ಜಗಳವಿಲ್ಲ ಹಾಗೂ ಊಟ ಬಲ್ಲವನಿಗೆ ರೋಗವಿಲ್ಲ ಎಂಬ ಎರಡು ವಾಕ್ಯವು ಬಿಂಬ ಪ್ರತಿಬಿಂಬದಂತೆ ಇರುವುದರಿಂದ ಎರಡು ಒಂದೇ ಎಂಬುದು ಪ್ರತಿಪಾದಿತವಾಗಿದೆ.

**5.ಅರ್ಥಾಂತರನ್ಯಾಸಲಂಕಾರ:–**ಒಂದು ವಿಶೇಷವಾಕ್ಯವನ್ನು ಸಾಮಾನ್ಯ ವಾಕ್ಯದಿಂದ ಅಥವಾ ಸಾಮಾನ್ಯ ವಾಕ್ಯವನ್ನು ವಿಶೇಷ ವಾಕ್ಯದಿಂದ ಸಮರ್ಥನೆ ಮಾಡುವುದೇ ಅರ್ಥಾಂತರನ್ಯಾಸಲಂಕಾರವೆಂದು ಕರೆಯುತ್ತಾರೆ.

ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾದನು .ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ ?

ಅಲಂಕಾರದ ಹೆಸರು :ಅರ್ಥಾಂತರನ್ಯಾಸಾಲಂಕಾರ

ಲಕ್ಷಣ: ಒಂದು ವಿಶೇಷ ವಾಕ್ಯವನ್ನು ಸಾಮಾನ್ಯ ವಾಕ್ಯದಿಂದ ಅಥವಾ ಸಾಮಾನ್ಯ ವಾಕ್ಯವನ್ನು ವಿಶೇಷ ವಾಕ್ಯದಿಂದ ಸಮರ್ಥನೆ ಮಾಡುವುದು .

ಉಪಮೇಯ: ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು

ಉಪಮಾನ: ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ ?

ಸಮನ್ವಯ:ಇಲ್ಲಿ ಉಪಮೇಯವಾದ ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾದನು ಎಂಬ ವಿಶೇಷವಾಕ್ಯವನ್ನು ಉಪಮಾನವಾದ ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ ?ಎಂಬ ಸಾಮಾನ್ಯ ವಾಕ್ಯದಿಂದ ಸಮರ್ಥಿಸಲಾಗಿದೆ.ಆದ್ದರಿಂದ ಇದು ಅರ್ಥಾಂತರನ್ಯಾಸಾಲಂಕಾರಕ್ಕೆ ಉದಾಹರಣೆಯಾಗಿದೆ.

*******************************************************************



Use E-Papers, Save Tress
Above Line Hide When Print Out

# ಕನ್ನಡದ ಸಂಖ್ಯೆಗಳು

| | | | | | | | | | |
|---|---|---|---|---|---|---|---|---|---|
| ೧ | ೧೧ | ೨೧ | ೩೧ | ೪೧ | ೫೧ | ೬೧ | ೭೧ | ೮೧ | ೯೧ |
| ೨ | ೧೨ | ೨೨ | ೩೨ | ೪೨ | ೫೨ | ೬೨ | ೭೨ | ೮೨ | ೯೨ |
| ೩ | ೧೩ | ೨೩ | ೩೩ | ೪೩ | ೫೩ | ೬೩ | ೭೩ | ೮೩ | ೯೩ |
| ೪ | ೧೪ | ೨೪ | ೩೪ | ೪೪ | ೫೪ | ೬೪ | ೭೪ | ೮೪ | ೯೪ |
| ೫ | ೧೫ | ೨೫ | ೩೫ | ೪೫ | ೫೫ | ೬೫ | ೭೫ | ೮೫ | ೯೫ |
| ೬ | ೧೬ | ೨೬ | ೩೬ | ೪೬ | ೫೬ | ೬೬ | ೭೬ | ೮೬ | ೯೬ |
| ೭ | ೧೭ | ೨೭ | ೩೭ | ೪೭ | ೫೭ | ೬೭ | ೭೭ | ೮೭ | ೯೭ |
| ೮ | ೧೮ | ೨೮ | ೩೮ | ೪೮ | ೫೮ | ೬೮ | ೭೮ | ೮೮ | ೯೮ |
| ೯ | ೧೯ | ೨೯ | ೩೯ | ೪೯ | ೫೯ | ೬೯ | ೭೯ | ೮೯ | ೯೯ |
| ೧೦ | ೨೦ | ೩೦ | ೪೦ | ೫೦ | ೬೦ | ೭೦ | ೮೦ | ೮೦ | ೧೦೦ |


ಕರಿ ಘನ:ಅಂಕುಶ ಕಿರಿದೆನ್ನಬಹುದೇ? ಬಾರದಯ್ಯಾ.

ಗಿರಿ ಘನ;ವಜ್ರ ಕಿರಿದೆನ್ನಬಹುದೇ?ಬಾರದಯ್ಯಾ.

ತಮಂಧ ಘನ:ಜ್ಯೋತಿ ಕಿರಿದೆನ್ನಬಹುದೇ?ಬಾರದಯ್ಯಾ.

ಮರಹು ಘನ:ನಿಮ್ಮ ನೆನೆವ ಮನ ಕಿರಿದೆನ್ನಬಹುದೇ? ಬಾರದಯ್ಯಾ

ಕೂಡಲಸಂಗಮದೇವಾ..






ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

# ಪತ್ರಲೇಖನ

ಪ್ರಾಚೀನ ಕಾಲದಿಂದಲೂ ಪತ್ರಗಳು ಪರಸ್ಪರ ಸಂವಹನ ಮಾಧ್ಯಮವಾಗಿ ಕೆಲಸ ನಿರ್ವಹಿಸುವಉಪಯುಕ್ತಸಾಹಿತ್ಯ ಪ್ರಕಾರಗಳಾಗಿವೆ.

# ಪತ್ರಲೇಖನದ ವಿಧಗಳು

1ಖಾಸಗಿ ಪತ್ರಗಳು:ಹಿರಿಯರಿಗೆ,ಬಂಧುಗಳಿಗೆ,ಸ್ನೇಹಿತರಿಗೆ ಬರೆಯುವ ಪತ್ರಗಳನ್ನು ಖಾಸಗಿ ಪತ್ರಗಳು ಎನ್ನುವರು.

2.ವ್ಯವಹಾರಿಕ ಪತ್ರಗಳು:ಅಧಿಕಾರಿಗಳಿಗೆ,ಬರೆಯುವ ಪತ್ರಗಳು,ಸಾರ್ವಜನಿಕರ ಗಮನ ಸೆಳೆಯುವ ಪತ್ರಗಳು.

ಖಾಸಗಿ ಪತ್ರಗಳು

ಸಂಬೋಧನಾ ವಾಕ್ಯಗಳು

1.ತಂದೆಗೆ ಪತ್ರ ಬರೆಯುವಾಗ-ಪೂಜ್ಯ ತೀರ್ಥರೂಪುರವರಿಗೆ

2.ತಾಯಿಗೆ ಪತ್ರ ಬರೆಯುವಾಗ- ಪೂಜ್ಯ ಮಾತೃಶ್ರೀಯವರಿಗೆ

3.ಅಣ್ಣ,ದೊಡ್ಡಪ್ಪ,ಚಿಕ್ಕಪ್ಪ,ಮಾವನಿಗೆ,ಪತ್ರ  ಬರೆಯುವಾಗ- ಪೂಜ್ಯ ತೀರ್ಥರೂಪು ಸಮಾನರಾದ

4.ಅಕ್ಕ, ದೊಡ್ಡಮ್ಮ, ಚಿಕ್ಕಮ್ಮ,ಅತ್ತೆನಿಗೆ ಪತ್ರ  ಬರೆಯುವಾಗ- ಪೂಜ್ಯ ಮಾತೃಶ್ರೀ ಸಮಾನರಾದ

5.ಸ್ನೇಹಿತರಿಗೆ ಪತ್ರ ಬರೆಯುವಾಗ-ನನ್ನ ಪ್ರೀತಿಯ ಸ್ನೇಹಿತ/ತೆ

ನಿಮ್ಮನ್ನು ಬಳ್ಳಾರಿಯ ಶ್ರೀದುರ್ಗಾಂಭಿಕ ಪ್ರೌಢಶಾಲೆಯಲ್ಲಿ ಓದುತ್ತಿರುವ ಸುಮಂತ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆಯುವ ಶಾಲಾ ವಾರ್ಷಿಕ್ಕೋತ್ಸವಕ್ಕೆ ಬರುವಂತೆ ಆಹ್ವಾನಿಸಿ ಮೈಸೂರಿನಲ್ಲಿರುವ ನಿಮ್ಮ ತಂದೆಗೊಂದು ಪತ್ರ ಬರೆಯಿರಿ

ಕ್ಷೇಮ ಶ್ರೀ ಇವರಿಂದ

ಸುಮಂತ

10ನೇ ತರಗತಿ

ಶ್ರೀದುರ್ಗಾಂಭಿಕ ಪ್ರೌಢಶಾಲೆ

ರಾಯಲ್ ವೃತ್ತ ಬಳ್ಳಾರಿ

ದಿನಾಂಕ:15.02.2024

ಪೂಜ್ಯ ತೀರ್ಥರೂಪರವರಿಗೆ ನಿಮ್ಮ ಮಗ/ಳು ಸುಮಂತ ಮಾಡುವ ಶಿರಸಾಷ್ಟಾಂಗ ಪ್ರಣಾಮಗಳು.



Use E-Papers, Save Tress
Above Line Hide When Print Out

ನಾನು ಇಲ್ಲಿ ಆರೋಗ್ಯವಾಗಿದ್ದೀರಿ ಎಂದು ಭಾವಿಸಿರುತ್ತೇನೆ.ನನ್ನ ವಿದ್ಯಾಭ್ಯಾಸವು ಉತ್ತಮವಾಗಿ ನಡೆಯುತ್ತಿದೆ.ತಾಯಿಯವರಿಗೆ ನಮಸ್ಕಾರಗಳು.ದಿನಾಂಕ:-30.02.2024ರಂದು ನಮ್ಮ ಶಾಲೆಯಲ್ಲಿ ಶಾಲಾ ವಾರ್ಷಿಕ್ಕೋತ್ಸವವನ್ನು ಅದ್ದೂರಿಯಿಂದ ಮಾಡಲು ಸಿದ್ದತೆ ಮಾಡುತ್ತಿದ್ದಾರೆ ಸಾಂಸ್ಕೃತಿಕ ಕಾರ್ಯಕ್ತಮಗಳನ್ನು ಏರ್ಪಡಿಸಲಾಗಿದ್ದು ನಾನೂ ಕೂಡ  ಭಾಗವಹಿಸುತ್ತಿದ್ದೇನೆ.ಆದ್ದರಿಂದ ತಾಯಿಯವರೊಂದಿಗೆ ನೀವು ತಪ್ಪದೆ ಬರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಹೊರವಿಳಾಸ                ಪ್ರಣಾಮಗಳೊಂದಿಗೆ                ಇಂತಿ ನಿಮ್ಮ ಪ್ರೀತಿಯ ಮಗ/ಳು


ಶ್ರೀ ರವಿಭೂಷಣ.ಎಸ್                ಸುಮಂತ

ಕುವೆಂಪು ನಗರ 3ನೇ ಮುಖ್ಯರಸ್ತೆ

ಮನೆ ನಂ-625

ಮೈಸೂರು

ಅಂಚೆ ಪೆಟ್ಟಿಗೆ ಸಂಖ್ಯೆ-563421






Use E-Papers, Save Tress
Above Line Hide When Print Out

# ವ್ಯವಹಾರಿಕ ಪತ್ರಗಳು

ನಿಮ್ಮನ್ನು ಬಿಜಾಪುರದ ಗೋಳಗೊಮ್ಮಟ ಪ್ರೌಢಶಾಲೆಯಲ್ಲಿ ಓದುತ್ತಿರುವ ಮಧು ಎಂದು ಭಾವಿಸಿಕೊಂಡು ನಿಮ್ಮ ಊರಿಗೊಂದು ಗ್ರಂಥಾಲಯ ನಿರ್ಮಿಸಿಕೊಡುವಂತೆ ನಿಮ್ಮ ರಾಜ್ಯದ ಶಿಕ್ಷಣ ಸಚಿವರಿಗೊಂದು ಮನವಿ ಪತ್ರ ಬರೆಯಿರಿ

ಇವರಿಂದ, ದಿನಾಂಕ:-14.02.2024

ಮಧು

10ನೇ ತರಗತಿ

ಗೋಳಗೊಮ್ಮಟ ಪ್ರೌಢಶಾಲೆ

ಬಿಜಾಪುರ

ಇವರಿಗೆ,

ಮಾನ್ಯ ಶಿಕ್ಷಣ ಸಚಿವರು

ಕರ್ನಾಟಕ ರಾಜ್ಯ ಸರ್ಕಾರ

ಬೆಂಗಳೂರು

ಮಾನ್ಯರೇ,

ವಿಷಯ:- ಗ್ರಂಥಾಲಯ ನಿರ್ಮಿಸಿಕೊಡುವಂತೆ ಮನವಿ

ಸರ್,ನಮಸ್ಕಾರ ನಮ್ಮ ಊರಿನಲ್ಲಿ ಸಾಕಷ್ಟು ವಿದ್ಯಾವಂತರಿದ್ದಾರೆ.ಆದರೆ ಸಮಯದ ಸದುಪಯೋಗ ಮಾಡಿಕೊಳ್ಳಲು ಹಾಗೂ ಹೆಚ್ಚಿನ ಜ್ಞಾನ ಸಂಪಾದಿಸಲು, ಓದಲು ನಮ್ಮ ಊರಿನಲ್ಲಿ ಗ್ರಂಥಾಲಯವೇ ಇಲ್ಲವಾಗಿದೆ.ನಾನೂ ಕೂಡ 10ನೇ ತರಗತಿಯಲ್ಲಿ ಓದುತ್ತಿದ್ದೇನೆ.ನನ್ನ ವಿದ್ಯಾಭ್ಯಾಸಕ್ಕೆ ಪೂರಕವಾದ ಮಾಹಿತಿ ಸಂಗ್ರಹಿಸಲು ಸಾಧ್ಯವಾಗುತ್ತಿಲ್ಲ.ದಯಮಾಡಿ ನಮ್ಮ ಊರಿಗೊಂದು ಗ್ರಂಥಾಲಯವನ್ನು ನಿರ್ಮಿಸಿ ಕೊಟ್ಟು ಹೆಚ್ಚಿನ ಜ್ಞಾನ ಸಂಪಾದಿಸಲು ಅನುವು ಮಾಡಿಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಹೊರವಿಳಾಸ ಪ್ರಣಾಮಗಳೊಂದಿಗೆ ತಮ್ಮ ವಿಶ್ವಾಸಿ

ಮಾನ್ಯ ಶಿಕ್ಷಣ ಸಚಿವರು ಮಧು

ಕರ್ನಾಟಕ ರಾಜ್ಯ ಸರ್ಕಾರ

ಬೆಂಗಳೂರು



Use E-Papers, Save Tress
Above Line Hide When Print Out

## ವ್ಯವಹಾರಿಕ ಪತ್ರ

ನಿಮ್ಮನ್ನು ದಾವಣಗೆರೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ರುಚಿತ್ ಎಂದು ಭಾವಿಸಿಕೊಂಡು ಬರಗಾಲ ಉಂಟಾದ ನಿಮಿತ್ಯ ಪರಿಹಾರ ನೀಡಬೇಕೆಂದು ನಿಮ್ಮ ಜಿಲ್ಲಾಧಿಕಾರಿಗಳಿಗೊಂದು ಮನವಿ ಪತ್ರ ಬರೆಯಿರಿ

ಇವರಿಂದ, ದಿನಾಂಕ:14.02.2024

ರುಚಿತ್, ಸ್ಥಳ: ದಾವಣಗೆರೆ

ಸರ್ಕಾರಿ ಪ್ರೌಢಶಾಲೆ

ದಾವಣಗೆರೆ,

ಇವರಿಗೆ,

ಮಾನ್ಯ ಜಿಲ್ಲಾಧಿಕಾರಿಗಳು

ಮಿನಿ ವಿಧಾನಸೌಧ

ದಾವಣಗೆರೆ

ಮಾನ್ಯರೇ,

ವಿಷಯ:-ಬರಗಾಲ ಉಂಟಾದ ನಿಮಿತ್ಯ ಪರಿಹಾರ ನೀಡುವ ಕುರಿತು

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ವಿನಂತಿಸುವುದೆನೆಂದರೆ ನಮ್ಮ ಜಿಲ್ಲೆ ಎಲ್ಲಾ ತಾಲ್ಲೂಕುಗಳನ್ನು ಬರಗಾಲ ಎಂದು ಘೋಷಿಸಲಾಗಿದೆ.ಆದರೆ ಇಲ್ಲಿಯವರೆಗೂ ನಮ್ಮ ಊರಿನ ಯಾವುದೇ ನಾಗರೀಕರಿಗೂ ಪರಿಹಾರ ಹಣ ಬಂದಿಲ್ಲ ದಯಾಳುಗಳಾದ ತಾವು ಆದಷ್ಟು ಬೇಗನೆ ಕ್ರಮಗಳನ್ನು ಕೈಗೊಂಡು ನಮ್ಮ ಸುಗಮ ಜೀವನಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ಮೂಲಕ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಹೊರವಿಳಾಸ ವಂದನೆಗಳೊಂದಿಗೆ ಇಂತಿ ತಮ್ಮ ವಿಶ್ವಾಸಿ

ಮಾನ್ಯ ಜಿಲ್ಲಾಧಿಕಾರಿಗಳು ರುಚಿತ್

ಮಿನಿ ವಿಧಾನಸೌಧ

ದಾವಣಗೆರೆ



Use E-Papers, Save Tress
Above Line Hide When Print Out

## ವ್ಯವಹಾರಿಕ ಪತ್ರ

**ಓದುತ್ತಿರುವ ಸಾನ್ವಿತ ಎಂದು ಭಾವಿಸಿಕೊಂಡು ನಿಮ್ಮ ಅಕ್ಕನ ಮದುವೆಗೆ ಹೋಗಲು 3 ದಿನ ರಜೆ ಕೋರಿ ಮುಖ್ಯೋಪಾಧ್ಯಯರಿಗೊಂದು ಪತ್ರ ಬರೆಯಿರಿ**

**ಇವರಿಂದ,** **ದಿನಾಂಕ:14.02.2024**

**ಸಾನ್ವಿತ** **ಸ್ಥಳ: ಕುವೆಂಪು**

**10ನೇ ತರಗತಿ 'ಎ' ವಿಭಾಗ**

**ಕುವೆಂಪು ಪ್ರೌಢಶಾಲೆ**

**ತೀರ್ಥಹಳ್ಳಿ ರಸ್ತೆ**

**ಶಿವಮೊಗ್ಗ-07**

**ಇವರಿಗೆ,**

**ಮಾನ್ಯ ಮುಖ್ಯೋಪಾಧ್ಯಯರು**

**ಕುವೆಂಪು ಪ್ರೌಢಶಾಲೆ**

**ತೀರ್ಥಹಳ್ಳಿ ರಸ್ತೆ**

**ಶಿವಮೊಗ್ಗ-07**

**ಮಾನ್ಯರೇ,**

**ವಿಷಯ:-ಮೂರು ದಿನಗಳ ರಜೆ ಕೋರಿ**

**ಸರ್,ಈ ಮೂಲಕ ತಿಳಿಸುವುದೇನೆಂದರೆ ದಿನಾಂಕ 21.04.2024 ರಿಂದ 23.04.2024ವರೆಗೆ ಹಾವೇರಿಯಲ್ಲಿ ನನ್ನ ಅಕ್ಕನ ಮದುವೆ ನಡೆಯುತ್ತಿದ್ದು ಮದುವೆಗೆ ಹೋಗಲು 3ದಿನಗಳ ಕಾಲ ರಜೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.ಆ ದಿನಗಳಲ್ಲಿ ನಡೆದ ಪಾಠಗಳ ಬಗ್ಗೆ ಬಂದ ನಂತರ ಸ್ನೇಹಿತರಿಂದ ತಿಳಿದುಕೊಳ್ಳುತ್ತೇನೆ ಎಂಬ ಭರವಸೆ ನೀಡುತ್ತಿದ್ದೇನೆ.ದಯಮಾಡಿ ಅನುಮತಿ ನೀಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.**

**ಹೊರವಿಳಾಸ** **ವಂದನೆಗಳೊಂದಿಗೆ** **ಇಂತಿ ತಮ್ಮ ವಿಶ್ವಾಸಿ**

**ಮಾನ್ಯ ಮುಖ್ಯೋಪಾಧ್ಯಯರು** **ಸಾನ್ವಿತ**

**ಕುವೆಂಪು ಪ್ರೌಢಶಾಲೆ ತೀರ್ಥಹಳ್ಳಿ ರಸ್ತೆ**

**ಶಿವಮೊಗ್ಗ-07**



Use E-Papers, Save Tress
Above Line Hide When Print Out

## ವ್ಯಾಕರಣಕ್ಕೆ ಸಂಬಂಧಿಸಿದ ಬಹು ಆಯ್ಕೆ ಪ್ರಶ್ನೆಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ.ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನುಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.**

**1."ಇರುಳಳಿದು"ಪದವು ಈ ಸಂಧಿಗೆ ಉದಾಹರಣೆಯಾಗಿದೆ.**

**1.ಲೋಪಸಂಧಿ** 2.ಆದೇಶಸಂಧಿ 3.ಆಗಮಸಂಧಿ 4.ಯಣ್ ಸಂಧಿ

**2.ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲಾ ಬರುವ ಲೇಖನ ಚಿಹ್ನೆ.**

1.ಅಲ್ಪವಿರಾಮ **2.ಅರ್ಧವಿರಾಮ** 3.ಭಾವಸೂಚಕ 4.ವಾಕ್ಯವೇಷ್ಟನ

**3.ತತ್ಪುರುಷ ಸಮಾಸಕ್ಕೆ ಸೂಕ್ತ ಉದಾಹರಣೆ ಇದಾಗಿದೆ.**

1.ಕಟ್ಟೆಕಾಂತ 2. ಸಾಕ್ಷಿಮಾಡಿ **3.ಪರಧನ** 4.ನೆಯ್ದುವಸ್ತ್ರ

**4."ಜಾಣತನ" ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ.**

1.ತದ್ಧಿತಾಂತಾವ್ಯಯ 2.ತದ್ಧಿತಾಂತನಾಮಪದ 3.ಕೃದಂತಭಾವನಾಮ **4.ತದ್ಧಿತಾಂತಭಾವನಾಮ**

**5."ಪರಿಮಾಣ ವಾಚಕ" ಕ್ಕೆ ಉದಾಹರಣೆಯಾದ ಪದವಿದು.**

**1.ಹಲವು** 2.ಹಳತು 3.ಹಿರಿಮೆ 4.ಒಳ್ಳೆಯ

**6.ಒಂದು ನಿಶ್ಚಯಾರ್ಥದಲ್ಲಿರುವ ಅವ್ಯಯವನ್ನು ಹೀಗೆನ್ನುತ್ತೇವೆ.**

1.ಸಂಬಂಧಾರ್ಥಕ **2.ಅವಧಾರಣಾರ್ಥಕ** 3.ಕ್ರಿಯಾರ್ಥಕ 4.ಸಾಮಾನ್ಯಾರ್ಥಕ

**7."ತಿನ್ನು" ಪದದ ಸಂಭಾವನಾರ್ಥಕ ಕ್ರಿಯಾರೂಪ. ತಿಂದಾನು**

1.ತಿನ್ನನು 2.ತಿನ್ನಲಿ **3.ತಿಂದಾನು** 4.ತಿನ್ನೋಣ

**8.'ಪಂಚಮಿ ವಿಭಕ್ತಿ' ಯ ಕಾರಕಾರ್ಥ ಇದು**

1.ಸಂಬಂಧ 2.ಅಧಿಕರಣ 3.ಸಂಪ್ರದಾನ **4.ಅಪಾದಾನ**

**9.'ಕೃದಂತ ಭಾವನಾಮಕ್ಕೆ' ಸೂಕ್ತ ಉದಾಹರಣೆ ಇದಾಗಿದೆ. ಬಾಳುವಿಕೆ**

**1.ಬಾಳುವಿಕೆ** 2.ಬಾಳಲು 3.ಬಾಳಲಿಕ್ಕೆ 4.ಬಾಳದ

**10.ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂತಹ ವಾಕ್ಯವು.**

1.ಸಂಯೋಜಿತ ವಾಕ್ಯ 2.ಸಾಮಾನ್ಯ ವಾಕ್ಯ **3.ಮಿಶ್ರ ವಾಕ್ಯ** 4.ಪ್ರಶ್ನಾರ್ಥಕ ವಾಕ್ಯ



Use E-Papers, Save Tress
Above Line Hide When Print Out

**11.ಗುಣಸಂಧಿಗೆ ಉದಾಹರಣೆಯಾಗಿರುವ ಪದ.**

1.ಗಿರೀಶ **2.ಮಹರ್ಷಿ** 3.ಮೈದೋರು 4.ಷಣ್ಮುಖ

**12.ಒಂದು ಪದವನ್ನೋ,ವಾಕ್ಯವನ್ನೋ ಹೇಳಿ, ಅದಕ್ಕೆ ಸಮಾನಾರ್ಥಕ ಪದವನ್ನೋ,ವಾಕ್ಯವನ್ನೋ ಹೇಳುವಾಗ ಈ ಚಿಹ್ನೆಯನ್ನು ಬಳಸಲಾಗುತ್ತದೆ.**

1.ವಾಕ್ಯವೇಷ್ಟನ 2.ಉದ್ಧರಣ **3.ಆವರಣ** 4.ಭಾವಸೂಚಕ

**13.ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿರುವ ವಾಕ್ಯ ಇದು**

1.ಸಂಯೋಜಿತ ವಾಕ್ಯ 2.ಸಾಮಾನ್ಯ ವಾಕ್ಯ **3.ಮಿಶ್ರ ವಾಕ್ಯ** 4. ಪ್ರಶ್ನಾರ್ಥಕ ವಾಕ್ಯ

**14.'ಚಂದ್ರನಂತೆ' ಪದವು ವ್ಯಾಕರಣಾಂಶದ ಈ ಗುಂಪಿಗೆ ಸೇರಿದೆ.**

**1.ತದ್ಧಿತಾಂತಾವ್ಯಯ** 2.ಕೃದಂತಾವ್ಯಯ 3.ತದ್ಧಿತಾಂತ ಭಾವನಾಮ 4.ಕೃದಂತ ಭಾವನಾಮ

**15'.ರಾಹುಲ' ಪದವು ನಾಮಪದ ಈ ಗುಂಪಿಗೆ ಸೇರಿದೆ.**

1.ರೂಢನಾಮ 2.ಅನ್ವರ್ಥನಾಮ **3.ಅಂಕಿತನಾಮ** 4.ಭಾವನಾಮ

**16.ಕೃದಂತಭಾವನಾಮಕ್ಕೆ ಉದಾಹರಣೆಯಾಗಿರುವ ಪದ.**

1.ಮಾಡಿದ **2.ಮಾಟ** 3.ಮಾಡಲು 4.ಮಾಡುವ

**17.ಚತುರ್ಥೀ ವಿಭಕ್ತಿ ಪ್ರತ್ಯಯದ ಕಾರಕಾರ್ಥ.**

1.ಸಂಬಂಧ 2.ಅಧಿಕರಣ **3.ಸಂಪ್ರದಾನ** 4.ಅಪಾದಾನ

**18.ಕ್ರಿಯಾರ್ಥಕಾವ್ಯಯಕ್ಕೆ ಉದಾಹರಣೆಯಾಗಿರುವ ಪದ.**

1.ನೀನೇ 2.ಆದ್ದರಿಂದ 3.ಚೆನ್ನಾಗಿ **4..ಸಾಕು**

**19.ವ್ಯಾಪಾರಿ ಪದದ ತದ್ಭವ ರೂಪ.**

1.ಬಿಕಾರಿ 2.ಬೀಮಾರಿ **3.ಬೇಹಾರಿ** 4.ಬಿಹಾರಿ

**20.ಮಾಡಳು ಪದವು ಈ ಕ್ರಿಯಾರೂಪಕ್ಕೆ ಸೇರಿದೆ.**

1.ವಿಧ್ಯರ್ಥಕ 2.ಸಂಭಾವನಾರ್ಥಕ 3.ಪ್ರಶ್ನಾರ್ಥಕ ವಾಕ್ಯ **4.ನಿಷೇಧಾರ್ಥಕ**

**21.'ಸಂಗ್ರಹಾಲಯ" ಪದವು ಈ ಸಂಧಿಗೆ ಉದಾಹರಣೆಯಾಗಿದೆ**

1.ಗುಣಸಂಧಿ **2.ಸವರ್ಣದೀರ್ಘಸಂಧಿ** 3.ವೃದ್ಧಿಸಂಧಿ 4.ಅನುನಾಸಿಕ ಸಂಧಿ



Use E-Papers, Save Trees
Above Line Hide When Print Out

**22.ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ಬೇರೆ ಬೇರೆ ವಿಶೇಷಣಗಳು ಬರುವಾಗ ಕೊನೆಯ ವಿಶೇಷಣ ಬಿಟ್ಟು ಉಳಿದವುಗಳ ಮುಂದೆ ಬಳಸುವ ಲೇಖನ ಚಿಹ್ನೆ.**

**1.ಅಲ್ಪವಿರಾಮ** 2.ಅರ್ಧವಿರಾಮ 3.ಪೂರ್ಣವಿರಾಮ 4.ಉದ್ಧರಣ

**23.ಕರ್ಮಧಾರಯ"ಸಮಾಸಕ್ಕೆ ಉದಾಹರಣೆಯಿದು**

1.ನೆಯ್ದುವಸ್ತ್ರ 2.ಮಹೀಪತಿ 3.ಕಣ್ದೆರೆ **4.ಹೆದ್ದೊರೆ**

**24.ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳ ಸಂಖ್ಯೆ.**

1.ಐದು 2.ಒಂಬತ್ತು **3.ಹತ್ತು** 4.ಹದಿಮೂರು

**25.ಕ್ರಿಯೆ ನಡೆದ ರೀತಿಯನ್ನು ಹೇಳುವಂತಹ ಅವ್ಯಯಗಳನ್ನು ಹೀಗೆನ್ನುತ್ತೇವೆ.**

1.ಕ್ರಿಯಾರ್ಥಕ 2.ಅನುಕರಣ **3.ಸಾಮಾನ್ಯ** 4.ಸಂಬಂಧಾರ್ಥಕ

**26.ಕೃದಂತಭಾವನಾಮಕ್ಕೆ ಉದಾಹರಣೆಯಾಗುವ ಪದವಿದು.**

**1.ನೋಟ** 2.ನೋಡಲು 3.ನೋಡುವ 4.ನೋಡದ

**27.ಕಾರವಾರದಲ್ಲಿ ಮಲೇರಿಯಾ ಹಬ್ಬಿ,ವೀರೇಶ್ವರ ಪಾಠಕ್‌ರವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿ,ಅವರು ಅಲ್ಲಿಂದ ವರ್ಗಾವಣೆ ಹೊಂದುವಂತೆ ಆಯಿತು.–ಈ ವಾಕ್ಯವು**

1.ಸಂಯೋಜಿತ ವಾಕ್ಯ **2.ಸಾಮಾನ್ಯ ವಾಕ್ಯ** 3.ಮಿಶ್ರ ವಾಕ್ಯ 4. ಪ್ರಶ್ನಾರ್ಥಕ ವಾಕ್ಯ

**28.'ಮಾಡೇವು' ಪದವು ಈ ವಾಕ್ಯರಣಾಂಶಕ್ಕೆ ಸೇರಿದೆ.**

1.ವಿಧ್ಯರ್ಥಕ 2.ಸಂಭಾವನಾರ್ಥಕ 3.ಸಂಬಂಧಾರ್ಥಕ **4.ನಿಷೇಧಾರ್ಥಕ**

**29.'ಸಾವಿತ್ರಿಯೊಳ್' ಪದದಲ್ಲಿರುವ ವಿಭಕ್ತಿಯಿದು.**

1.ಪ್ರಥಮಾ 2.ತೃತೀಯಾ 3.ಪಂಚಮೀ **4.ಸಪ್ತಮೀ**

**30.ಆತ್ಮಾರ್ಥಕ ಸರ್ವನಾಮ ಪದವಿದು.**

1.ನಿಮ್ಮ **2.ತಮ್ಮ** 3.ನೀವು 4.ಅವರು

**31.'ಸಪ್ತಮೀ' ವಿಭಕ್ತಿ ಪ್ರತ್ಯಯದ ಕಾರಕಾರ್ಥ.**

1..ಸಂಬಂಧ 2.ಸಂಪ್ರದಾನ **3.ಅಧಿಕರಣ** 4.ಅಪಾದಾನ

**32."ವಾಗ್ದೇವಿ"ಪದವು ಈ ಸಂಧಿಗೆ ಉದಾಹರಣೆಯಾಗಿದೆ.**

**1.ಜಶ್ತ್ವಸಂಧಿ** 2.ಆದೇಶಸಂಧಿ 3.ಶ್ಚುತ್ವ ಸಂಧಿ 4..ಯಣ್‌ಸಂಧಿ



Use E-Papers, Save Tress
Above Line Hide When Print Out

**33.''ಮಾಡು''ಧಾತುವಿನ ವಿಧ್ಯರ್ಥಕ ರೂಪ**

1.ಮಾಡಿಯಾನು 2.ಮಾಡದು 3.ಮಾಡೀತು **4.ಮಾಡಲಿ**

**34.ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು**

1.ಸಾಮಾನ್ಯ ವಾಕ್ಯ **2.ಸಂಯೋಜಿತ ವಾಕ್ಯ** 3.ಮಿಶ್ರ ವಾಕ್ಯ 4.ಪ್ರಶ್ನಾರ್ಥಕ ವಾಕ್ಯ

**35.ಅನ್ವರ್ಥನಾಮಪದಕ್ಕೆ ಉದಾಹರಣೆಯಾದ ಪದ.**

**1.**ರಾಹುಲ 2.ಪರ್ವತ 3.ಮನುಷ್ಯ **4..ವಿಜ್ಞಾನಿ**

**36.ತತ್ಪುರುಷ ಸಮಾಸ ಕ್ಕೆ ಉದಾಹರಣೆಯಾದ ಪದ.**

**1.ಬೆಟ್ಟದಾವರೆ** 2.ಮುಕ್ಕಣ್ಣು 3.ಅಂಗೈ 4.ನೆಯ್ದುವಸ್ತ್ರ

**37ಪಾರಿಭಾಷಿಕ ಪದಗಳನ್ನು ಬಳಸುವಾಗ,ಅನ್ಯಭಾಷೆಯ ಪದಗಳನ್ನು ಬಳಸುವಾಗ,ಪ್ರಮುಖ ಪದಗಳನ್ನು ಸೂಚಿಸುವಾಗ ಈ ಚಿಹ್ನೆಯನ್ನು ಬಳಸಲಾಗುವುದು.**

1.ಉದ್ಧರಣ ಚಿಹ್ನೆ 2.ಆವರಣ ಚಿಹ್ನೆ **3ವಾಕ್ಯವೇಷ್ಟನ ಚಿಹ್ನೆ** 4.ವಿವರಣಾತ್ಮಕ ಚಿಹ್ನೆ

**38.ಹಲವು ವಸ್ತುಗಳಲ್ಲಿ ಒಂದನ್ನು ನಿಶ್ಚಯವಾಗಿ ಹೇಳುವ ಸಂದರ್ಭದಲ್ಲಿ ಈ ಅವ್ಯಯವನ್ನು ಬಳಸಲಾಗುತ್ತದೆ.**

**1.**ಸಂಬಂಧಾರ್ಥಕ **2.ಅವಧಾರಣಾರ್ಥಕ** 3.ಕ್ರಿಯಾರ್ಥಕ 4.ಸಾಮಾನ್ಯಾರ್ಥಕ

**39.''ಸ್ಯಾನಿಟರಿ''ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ.**

1.ಹಿಂದೂಸ್ಥಾನಿ **2.ಇಂಗ್ಲಿಷ್** 3.ಗ್ರೀಕ್ 4.ಪೋರ್ಚ್ ಗೀಸ್

**40.ತದ್ಧಿತಾಂತ ಭಾವನಾಮಕ್ಕೆ ಉದಾಹರಣೆಯಾಗುವ ಪದವಿದು.**

1.ಬಳೆಗಾರ 2.ಚಂದ್ರನಂತೆ **3..ಕಪ್ಪು** 4..ಸಿರಿವಂತ

**41''ವಧೂಪೇತ''ಪದವು ಈ ಸಂಧಿಗೆ ಉದಾಹರಣೆಯಾಗಿದೆ.**

1..ಗುಣಸಂಧಿ 2.ಯಣ್‌ಸಂಧಿ 3.ವೃದ್ಧಿಸಂಧಿ **4..ಸವರ್ಣದೀರ್ಘಸಂಧಿ**

**42.ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಬಳಸುವ ಲೇಖನ ಚಿಹ್ನೆ.**

1.ಉದ್ಧರಣ ಚಿಹ್ನೆ 2.ಆವರಣ ಚಿಹ್ನೆ 3.ವಾಕ್ಯವೇಷ್ಟನ ಚಿಹ್ನೆ **4.ವಿವರಣಾತ್ಮಕ ಚಿಹ್ನೆ**

43.**'ಊರನ್ನು'' ಪದದಲ್ಲಿರುವ ವಿಭಕ್ತಿಯಿದು.**

1.ಪ್ರಥಮಾ 2.ತೃತೀಯಾ 3.ಪಂಚಮೀ **4.ದ್ವಿತೀಯಾ**



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

**44.'ಮಹಾಶಕ್ತನಾದ ದೇವರು ಸಮಸ್ತಲೋಕಗಳನ್ನು ಪ್ರೀತಿಯಿಂದ ಕಾಪಾಡುವನು"-ಈ ವಾಕ್ಯವು**

**1.ಸಾಮಾನ್ಯ ವಾಕ್ಯ** 2.ಸಂಯೋಜಿತ ವಾಕ್ಯ 3.ಮಿಶ್ರ ವಾಕ್ಯ 4.ಸಂಭಾವನಾರ್ಥಕ ವಾಕ್ಯ

**45.ಗಮಕ ಸಮಾಸಕ್ಕೆ ಉದಾಹರಣೆಯಿದು.**

1.ನಡುರಾತ್ರಿ 2.ಹನುಮಭೀಮರಾಮರು **3.ನೆಯ್ದುವಸ್ತ್ರ** 4..ಮೋಸಮಾಡು

**46."ಸೊಗಸಾಗಿ"ಪದವು ಅವ್ಯಯದ ಈ ಗುಂಪಿಗೆ ಸೇರಿದೆ.**

**1**.ಸಂಬಂಧಾರ್ಥಕ 2.ಅವಧಾರಣಾರ್ಥಕ 3.ಕ್ರಿಯಾರ್ಥಕ **4.ಸಾಮಾನ್ಯಾರ್ಥಕ**

**47.ಅನ್ವರ್ಥನಾಮಪದಕ್ಕೆ ಉದಾಹರಣೆಯಾದ ಪದ**

1.ರಾಹುಲ 2.ಮೂವರು 3.ಮನುಷ್ಯ **4.ವಿಜ್ಞಾನಿ**

**48.ವಿಧ್ಯರ್ಥಕ ರೂಪದಲ್ಲಿರುವ ಕ್ರಿಯಾಪದವಿದು.**

1.ಮಾಡನು 2.ಮಾಡಿಯಾನು 3.ಮಾಡೆವು **4.ಮಾಡೋಣ**

**49.ತದ್ಧಿತಾಂತನಾಮಕ್ಕೆ ಉದಾಹರಣೆಯಾಗುವ ಪದವಿದು.**

1.ಸಿರಿತನ 2.ಜಾಣತನ **3.ಕನ್ನಡಿಗ** 4.ಶಾಲೆಯತನಕ

**50.ಪೋರ್ಚ್‌ಗೀಸ್ ನಿಂದ ಕನ್ನಡಕ್ಕೆ ಬಂದಿರುವ ಅನ್ಯದೇಶಿ ಪದ**

1.ಕಾಲೇಜು **2.ಸಾಬೂನು** 3.ದವಾಖಾನೆ 4.ಕಾರ್ಖಾನೆ

**51.ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು.**

**1.ಉದ್ಧರಣ ಚಿಹ್ನೆ** 2.ಆವರಣ ಚಿಹ್ನೆ 3.ವಾಕ್ಯವೇಷ್ಠನ ಚಿಹ್ನೆ 4.ವಿವರಣಾತ್ಮಕ ಚಿಹ್ನೆ

**52."ಅವರೇ"ಪದವು ಈ ಅವ್ಯಯಕ್ಕೆ ಉದಾಹರಣೆಯಾಗಿದೆ.**

**1**.ಸಂಬಂಧಾರ್ಥಕ **2.ಅವಧಾರಣಾರ್ಥಕ** 3.ಕ್ರಿಯಾರ್ಥಕ 4.ಸಾಮಾನ್ಯಾರ್ಥಕ

**53."ಶರಚ್ಚಂದ್ರ"ಪದವು ಈ ಸಂಧಿಯದ್ದಾಗಿದೆ.**

1.ಜಶ್ತ್ವ ಸಂಧಿ 2.ಆದೇಶಸಂಧಿ **3.ಶ್ಚುತ್ವ ಸಂಧಿ** 4.ಯಣ್‌ಸಂಧಿ

**54.ತೃತೀಯಾ ವಿಭಕ್ತಿಯ ಕಾರಕಾರ್ಥ**

1.ಕರ್ತ್ರಾರ್ಥ **2.ಕರಣಾರ್ಥ** 3.ಅಪಾದಾನ 4.ಸಂಪ್ರದಾನ

**55.ಸಂಭಾವನಾರ್ಥಕ ಕ್ರಿಯಾರೂಪಕ್ಕೆ ಉದಾಹರಣೆಯಾಗಿರುವ ಪದ.**

1.ಮಾಡೋಣ 2.ಮಾಡನು **3.ಮಾಡಿಯಾನು** 4.ಮಾಡಲಿ



Use E-Papers, Save Tress
Above Line Hide When Print Out

**56.''ರಸ್ತೆ''ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ.**

1.ಹಿಂದೂಸ್ಥಾನಿ 2.ಪೋರ್ಚ್‌ಗೀಸ್ 3.ಅರಬ್ಬೀ **4.ಫಾರ್ಸಿ**

**57.''ಸೂರ್ಯೋದಯ''ಪದವು ಈ ಸಂಧಿಗೆ ಉದಾಹರಣೆಯಾಗಿದೆ.**

**1.ಗುಣಸಂಧಿ** 2.ಯಣ್‌ಸಂಧಿ 3.ವೃದ್ಧಿಸಂಧಿ 4.ಸವರ್ಣದೀರ್ಘಸಂಧಿ

**58.ಬಟ್ಟೆಗಿರಣೆ,ರಟ್ಟು,ಪೆನ್ಸಿಲ್,ತಯಾರಿಕಾ,ಘಟಕಗಳನ್ನು ಸ್ಥಾಪಿಸಲಾಗಿದೆ.ಈ ವಾಕ್ಯದಲ್ಲಿ ಇರಬೇಕಾದ ಲೇಖನ ಚಿಹ್ನೆ**

**1.ಅಲ್ಪವಿರಾಮ** 2.ಅರ್ಧವಿರಾಮ 3.ಆವರಣ 4.ವಿವರಣಾ

**59.ಮುಕ್ಕಣ್ಣು''ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.**

1.ಅಂಶಿ 2.ದ್ವಂದ್ವ 3.ಕ್ರಿಯಾ **4.ದ್ವಿಗು**

**60.ಹಳಗನ್ನಡದಲ್ಲಿ 'ಅಧಿಕರಣ' ಕಾರಕಾರ್ಥದ ವಿಭಕ್ತಿ ಪ್ರತ್ಯಯ.**

1.ಇಂದಂ **2.ಒಳ್** 3.ಅಂ 4.ಅತ್ತಣಿಂದಂ

**61.ನೋಡು'' ಧಾತುವಿನ ನಿಷೇಧಾರ್ಥಕ ರೂಪ.**

1.ನೋಡಲಿ 2.ನೋಡೋವು **3.ನೋಡದು** 4.ನೋಡಿಯಾನು

**62.ರೊಯ್ಯನೆ,ಸುಯ್ಯನೆ,ಧಗಧಗ ಪದಗಳು ಈ ಅವ್ಯಯಕ್ಕೆ ಉದಾಹರಣೆಯಾಗಿವೆ.**

1.ಸಾಮಾನ್ಯಾವ್ಯಯ **2.ಅನುಕರಣಾವ್ಯಯ** 3.ಅವಧಾರಣಾರ್ಥಕಾವ್ಯಯ 4.ಕ್ರಿಯಾರ್ಥಕಾವ್ಯಯ

**63.'ಮಳೆಗಾಲ" ಪದವು ಈ ಸಂಧಿಗೆ ಉದಾಹರಣೆಯಾಗಿದೆ.**

1.ಲೋಪಸಂಧಿ 2.ಆಗಮಸಂಧಿ **3.ಆದೇಶಸಂಧಿ** 4.ಗುಣಸಂಧಿ

**64.ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ'.**

**1.ಉದ್ಧರಣ ಚಿಹ್ನೆ** 2.ವಾಕ್ಯ ವೇಷ್ಠನ ಚಿಹ್ನೆ 3.ಆವರಣ ಚಿಹ್ನೆ 4.ವಿವರಣಾತ್ಮಕ ಚಿಹ್ನೆ

**65.'ತಲೆನೋವು ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.**

**1.ತತ್ಪುರುಷ ಸಮಾಸ** 2.ಕ್ರಿಯಾ ಸಮಾಸ 3.ಅಂಶಿ ಸಮಾಸ 4.ದ್ವಿಗು ಸಮಾಸ

**66.ಸಾವಿತ್ರಿಯಲ್ಲಿ ಈ ಪದದಲ್ಲಿರುವ ವಿಭಕ್ತಿಯ ಹೆಸರು.**

1.ದ್ವಿತೀಯಾ 2.ತೃತೀಯಾ 3.ಪಂಚಮೀ **4.ಸಪ್ತಮೀ**

**67.ಕನ್ನಡ ವರ್ಣ ಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳ ಸಂಖ್ಯೆ**

1.02 **2.05** 3.06 4.07



Use E-Papers, Save Tress
Above Line Hide When Print Out

**68.ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು**

1.ಸಾಮಾನ್ಯ ವಾಕ್ಯ **2.ಸಂಯೋಜಿತವಾಕ್ಯ** 3.ಮಿಶ್ರ ವಾಕ್ಯ 4.ಪ್ರಶ್ನಾರ್ಥಕ ವಾಕ್ಯ

**69. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಬಳಸುವ ಲೇಖನ ಚಿಹ್ನೆ.**

1.ಆವರಣ **2.ವಿವರಣ** 3.ಉದ್ಧರಣ 4.ವಾಕ್ಯ ವೇಷ್ಠನ

**70'.ಬೆಟ್ಟದಾವರೆ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.**

1.ಕರ್ಮಧಾರಯ 2.ದ್ವಿಗು **3.ತತ್ಪುರುಷ** 4.ಗಮಕ

**71.ತೃತೀಯಾ ವಿಭಕ್ತಿಯ ಕಾರಕಾರ್ಥ.**

1.ಸಂಪ್ರದಾನ 2.ಅಪಾದಾನ 3.ಕರ್ಮಾರ್ಥ **4.ಕರಣಾರ್ಥ**

**72. ಬೇಗನೆ ಪದವು ಈ ಅವ್ಯಯಕ್ಕೆ ಸೇರಿದೆ.**

**1.ಸಾಮಾನ್ಯಾರ್ಥಕ** 2.ಅನುಕರಣ 3.ಭಾವಸೂಚಕ 4.ಕ್ರಿಯಾರ್ಥಕ

**73.ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ.**

1.06 **02.09** 03.12 4.25

**74.ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿರುವ ವಾಕ್ಯ .**

1.ಸಾಮಾನ್ಯ ವಾಕ್ಯ 2.ಸಂಯೋಜಿತವಾಕ್ಯ 3.ಪ್ರಶ್ನಾರ್ಥಕವಾಕ್ಯ **4.ಮಿಶ್ರವಾಕ್ಯ**

**75.''ವಧೂಪೇತ''ಪದವು ಈ ಸಂಧಿಗೆ ಉದಾಹರಣೆಯಾಗಿದೆ.**

**1.**ಗುಣ ಸಂಧಿ **2.ಸವರ್ಣದೀರ್ಘ** 3.ವೃದ್ಧಿ ಸಂಧಿ 4.ಲೋಪಸಂಧಿ

**76.ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯವು.**

**1.ಸಾಮಾನ್ಯ ವಾಕ್ಯ** 2.ಸಂಯೋಜಿತವಾಕ್ಯ 3.ಮಿಶ್ರ ವಾಕ್ಯ 4.ಉಪವಾಕ್ಯ

**77.'ಗಮಕ' ಸಮಾಸಕ್ಕೆ ಉದಾಹರಣೆಯಾಗಿರುವ ಪದವಿದು.**

1.ಕಂಗೆಡು **2.ನೆಯ್ದುವಸ್ತ್ರ** 3.ಕಡೆಗಣ್ಣು 4.ಮೆಲ್ವಾತು

**78.ಕನ್ನಡದಲ್ಲಿ ಬಳಕೆಯಾಗುತ್ತಿರುವ ಹಿಂದೂಸ್ಥಾನಿ ಭಾಷೆಯ ಪದ ಇದಾಗಿದೆ.**

**1.ಇಲಾಖೆ** 2.ತರಬೇತು 3.ಕಾಗದ 4.ರಸೀದಿ





Use E-Papers, Save Tress
Above Line Hide When Print Out

**79.ಸಪ್ತಮೀ ವಿಭಕ್ತಿ ಪ್ರತ್ಯಯಯುಕ್ತ ಪದ ಇದು**

1.ಮರದ 2.ಮರದತ್ತಣಿಂ 3.ಮರದ **4.ಮರದೊಳ್**

**80.ಅವನೇ,ಅದುವೇ, ಎಂಬ ಪದಗಳು ಅವ್ಯಯದ ಈ ಗುಂಪಿಗೆ ಸೇರುತ್ತದೆ.**

1.ಸಾಮಾನ್ಯಾವ್ಯಯ 2.ಅನುಕರಣಾವ್ಯಯ **3.ಅವಧಾರಣಾರ್ಥಕಾವ್ಯಯ** 4.ಕ್ರಿಯಾರ್ಥಕಾವ್ಯಯ

**81.'ಮಾಡಿಯಾನು' ಪದವು ಕ್ರಿಯಾಪದದ ಈ ರೂಪಕ್ಕೆ ಸೇರಿದೆ.**

1.ವಿಧ್ಯರ್ಥಕ **2.ಸಂಭಾವನಾರ್ಥಕ** **3.**ಪ್ರಶ್ನಾರ್ಥಕ ವಾಕ್ಯ 4.ನಿಷೇಧಾರ್ಥಕ

**82.'ತನ, ಇಕೆ. ಪು,ಮೆ ಪ್ರತ್ಯಯಗಳುಳ್ಳ ಪದಗಳನ್ನು ಹೀಗೆನ್ನುತ್ತೇವೆ.**

1.ತದ್ಧಿತಾಂತಾವ್ಯಯ 2.ಕೃದಂತಾವ್ಯಯ **3.ತದ್ಧಿತಾಂತ ಭಾವನಾಮ** 4.ಕೃದಂತ ಭಾವನಾಮ

**83."ದಿಗಂತ" ಪದವು ಈ ಸಂಧಿಗೆ ಉದಾಹರಣೆಯಾಗಿದೆ.**

**1.**ಗುಣ ಸಂಧಿ **2.ಜಶ್ತ್ವಸಂಧಿ** 3.ವೃದ್ಧಿ ಸಂಧಿ 4.ಶ್ಚುತ್ವ ಸಂಧಿ

**84."ಸಾವಿತ್ರಿಗೆ"ಈ ಪದದಲ್ಲಿರುವ ವಿಭಕ್ತಿ.**

1.ದ್ವಿತೀಯಾ 2.ತೃತೀಯಾ 3.ಪಂಚಮೀ **4.ಚತುರ್ಥೀ**

**ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ;**

**1.ಮಕ್ಕಳು ಮರಿ:ಜೋಡುನುಡಿ::ಓಡಿಓಡಿ::ದ್ವಿರುಕ್ತಿ**

**2.ವರ್ಷ:ವರುಷ::ಕಾರ್ಯ::ಕಜ್ಜ**

**3.ತಿನ್ನುತ್ತೇನೆ:ವರ್ತಮಾನಕಾಲ::ತಿನ್ನುವೆನು::ಭವಿಷತಕಾಲ**

**4.ಮಾಡಲಿ:ವಿಧ್ಯರ್ಥಕ::ಮಾಡಿಯಾರು: :ಸಂಭಾವನಾರ್ಥಕ**

**5.ಬಟ್ಟಬಯಲು :ದ್ವಿರುಕ್ತಿ::ಹುಳು ಹುಪ್ಪಡಿ::ಜೋಡುನುಡಿ**

**6.ಶರಚ್ಚಂದ್ರ :ಶ್ಚುತ್ವಸಂಧಿ::ದಿಗಂತ::ಜಶ್ತ್ವಸಂಧಿ**

**7.ಮಲಗು :ಅಕರ್ಮಕಧಾತು ::ಕೊಡು::ಸಕರ್ಮಕಧಾತು**

**8.ವಂಧ್ಯಾ :ಬಂಜೆ::ಕುಠಾರ::ಕೊಡಲಿ**



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out

9.ಮಕ್ಕಳುಮರಿ:ಜೋಡುನುಡಿ::ತಿರುತಿರುಗಿ::ದ್ವಿರುಕ್ತಿ

10.ನೀರದ:ಮೋಡ::ಪನ್ನಗ::ಹಾವು

11.ವಿದ್ಯಾಧರ:ಬಿಜ್ಜೋಧರ::ಕುಠಾರ::ಕೊಡಲಿ

12.ಕಾರ್ಖಾನೆ:ಹಿಂದೂಸ್ಥಾನಿ::ಚೊಂಬು::ಪೋರ್ಚುಗೀಸ್

13.ಅಬ್ಧಿಪ:ವರುಣ::ಉರ್ವಿ::ಭೂಮಿ

14.ಸತಿಪತಿ:ಜೋಡುನುಡಿ::ಅಬ್ಬಬ್ಬಾ::ದ್ವಿರುಕ್ತಿ

15.ಸಂದೇಹ:ಸಂದೆಯ::ವ್ಯಯ::ಬೀಯ

16.ಇಸವಾಸ:ವಿಶ್ವಾಸ::ಮ್ಯಾಗ::ಮೇಲೆ

17.ಇನಾಮು :ಅರಬ್ಬೀ ::ಸಲಾಮು::ಹಿಂದೂಸ್ಥಾನಿ

18.ಹೊಗೆದೋರು :ಕ್ರಿಯಾ ಸಮಾಸ::ಚಕ್ರಪಾಣಿ::ಬಹುವ್ರೀಹಿ

19.ಕದಳಿ:ಬಾಳೆ::ವಾಜಿ::ಕುದುರೆ

20.ಹಾಲ್ಜೇನು :ಜೋಡು ನುಡಿ::ಬಟ್ಟ ಬಯಲು::ದ್ವಿರುಕ್ತಿ

21.ಊರೂರು :ದ್ವಿರುಕ್ತಿ::ಕೆನೆಮೊಸರು ::ಜೋಡುನುಡಿ

22.ಯುದ್ಧ:ಜುದ್ದ::ಪ್ರಸಾದ::ಹಸಾದ

23.ಶ್ರಮಣಿ:ತಪಸ್ವಿನಿ::ಸುರಭಿ::ಕಾಮಧೇನು

24.ಆಸ್ಪತ್ರೆ:ಪೋರ್ಚುಗೀಸ್::ದವಾಖಾನೆ::ಪಾರ್ಸಿ

25.ಹಾಲ್ಜೇನು :ಜೋಡುನುಡಿ::ಮೊಟ್ಟಮೊದಲು::ದ್ವಿರುಕ್ತಿ

26.ವಂಧ್ಯಾ :ಬಂಜೆ::ಕೋಕಿಲಾ::ಕೋಗಿಲೆ

27.ಚಿತ್ತ:ಮನಸ್ಸು::ಕೈವಾರ::ಹೊಗಳಿಕೆ

28.ಸಕ್ಕಾರಿ:ಸಕ್ಕರೆ::ಇಸವಾಸ::ವಿಶ್ವಾಸ



Use E-Papers, Save Tress
Above Line Hide When Print Out

29.ನಡುನಡುವೆ:ದ್ವಿರುಕ್ತಿ::ಹಾಲ್ಜೇನು::ಜೋಡುನುಡಿ

30.ತವಸಿ:ತಪಸ್ವಿ::ಬೇಹಾರಿ::ವ್ಯಾಪಾರಿ

31.ಹಣತೆ:ದೀಪ::ಹರಿಕಾರ::ಮುಂದಾಳು

32.ಗುರು ಮೂರಿರೆ:ಮಗಣ::ಲಘು ಮೂರಿರೆ::ನಗಣ

33.ಮುರಾರಿ:ಕೃಷ್ಣ::ರಾಜೀವಸಖ::ಸೂರ್ಯ

34.ವಂಧ್ಯಾ :ಬಂಜೆ::ದೃಷ್ಟಿ::ದಿಟ್ಟಿ

35.ಇಮ್ಮಾವು :ಕರ್ಮಧಾರಯ ಸಮಾಸ::ಹಿಂದಲೆ::ಅಂಶಿಸಮಾಸ

36.ಕನ್ನಡಿಗ:ತದ್ಧಿತಾಂತನಾಮ::ಪೆರ್ಮೆ::ತದ್ಧಿತಾಂತ ಭಾವನಾಮ

37.ಕೆನೆಮೊಸರು :ಜೋಡು ನುಡಿ::ಬಟ್ಟಬಯಲು::ದ್ವಿರುಕ್ತಿ

38.ಗುರು ಒಂದು ಆದಿಯೊಳ್:ಉತ್ಪಲ::ಲಘು ನಾಲ್ಕು::ಚಂಪಕ

39.ಹನ್ನೆರಡು :ಸಂಖ್ಯಾವಾಚಕ::ಮೂಡಣ::ದಿಗ್ವಾಚಕ

40.ದಿಟ್ಟಿ:ದೃಷ್ಟಿ::ತವಸಿ::ತಪಸ್ವಿ

41.ವರ್ಗೀಯ ವ್ಯಂಜನಾಕ್ಷರಗಳು:೨೫:: ಅವರ್ಗೀಯ ವ್ಯಂಜನಾಕ್ಷರಗಳು:೦೯

42.ಹಾಲ್ಜೇನು:ಜೋಡುನುಡಿ::ಬೇಡಬೇಡ:ದ್ವಿರುಕ್ತಿ

43.ಪರ್ವತ:ರೂಢನಾಮ::ಧರ್ಮರಾಯ:ಅಂಕಿತ ನಾಮ

44.ಮ್ಯಾಗ:ಮೇಲೆ::ಸಕ್ಕಾರಿ:ಸಕ್ಕರೆ

ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ
ಸಂಸಾರವೆಂಬ ರಾಹು ಸರ್ವಗ್ರಾಸಿಯಾಗಿ ನುಂಗಿತ್ತಯ್ಯ,
ಇಂದೆನ್ನ ದೇಹಕ್ಕೆ ಗ್ರಹಣವಾಯಿತ್ತು.
ಇನ್ನೆಂದಿಂಗೆ ಮೋಕ್ಷವಹುದೋ?ಕೂಡಲಸಂಗಮದೇವ.



ಪ್ರದೀಪ್. ಆರ್. ಕನ್ನಡ ಭಾಷಾ ಶಿಕ್ಷಕರು ದೂರವಾಣಿ ಸಂಖ್ಯೆ 9620363648

Use E-Papers, Save Tress
Above Line Hide When Print Out